ಸಂಪುಟ: 05 ಸಂಚಿಕೆ: 346 ಪುಟಗಳು: 08 ಶನಿವಾರ 28 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಹಿಂದಿರುಗಿ ನೋಡುವ ಅವಶ್ಯಕತೆ ಇಲ್ಲ, ಮುಂದೆ ನೋಡಿ ನಮಗೆ ಅನಂತ ಶಕ್ತಿ ಅನಂತ ಉತ್ಸಾಹ ಅನಂತ ತಾಳ್ಮೆ ಬೇಕು, ಆಗ ಮಾತ್ರ ಮಹತ್ಕಾರ್ಯಗಳನ್ನು ನಾವು ಸಾಧಿಸಬಹುದು


## ವಿನ್ಯಾಸಗಾರರು ಬೇಕಾಗಿದ್ದಾರೆ


ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.
**ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


# ರಾಜ್ಯ ಬಜೆಟ್ ಕುರ್ಚಿ ಟಾರ್ಗೆಟ್




### ಡಿಕೆಶಿ ಸಾಹೇಬ್ರು ಸಿಎಂ ಆಗ್ಬೇಕು

ನಾನು ಮೊದಲಿನಿಂದಲೂ ಹೇಳ್ತಾ ಇದ್ದೀನಿ. ಡಿಕೆಶಿ ಸಾಹೇಬ್ರು ನನಗೆ ಟಿಕೆಟ್ ಕೊಟ್ಟಿದ್ದಾರೆ. ನನ್ನ ರಾಜಕೀಯವಾಗಿ ಬೆಳಸಿದ್ದಾರೆ. ಡಿಕೆಶಿ ಸಾಹೇಬ್ರು ಸಿಎಂ ಆಗಬೇಕು ಅಂತಾ ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಹೇಳಿದ್ದಾರೆ. ರಾಜಕೀಯವಾಗಿಯೂ ಸಭೆಯಲ್ಲಿ ಚರ್ಚೆ ಆಗಿದೆ. ಸಂದರ್ಭ ಬಂದರೆ ದೆಹಲಿಗೆ ಹೋಗ್ತೀವಿ ಎಂದು ತಿಳಿಸಿದ್ದಾರೆ. ಬರ್ತ್‌ಡೇ ವಿಶೇಷ ಅಷ್ಟೆ. ಎಲ್ಲಾ ಎಂಎಲ್‌ಎಗಳು ಸೇರಿದ್ವಿ. ಸಹಜವಾಗಿ ರಾಜಕೀಯ ಬಗ್ಗೆ ಚರ್ಚೆ ಆಗಿದೆ. ಬಜೆಟ್, ರಾಜಕೀಯ ವರ್ತಮಾನ ಎಲ್ಲವೂ ಚರ್ಚೆ ಆಗಿದೆ. ಸರ್ ಸಿಎಂ ಆಗಬೇಕು ಅನ್ನೋದು ಇದೆ. ಅಲ್ಲಿ ರಾಜಕೀಯ ಡಿಸ್ಕಷನ್ ಆಗಿರೋದು ಸತ್ಯ ಎಂದಿದ್ದಾರೆ. ಹೈಕಮಾಂಡ್ ಬಗ್ಗೆ ಏನೂ ಹೇಳೋದಿಲ್ಲ. ನಾವು ಶಾಸಕರು, ನಮ್ಮದು 140 ನಂಬರ್ ಇದೆ. ಗೊಂದಲ ಇತ್ಯರ್ಥ ಆಗಲಿ ಅನ್ನೋದು ನಮ್ಮ ಆಶಯ. ಶಾಸಕರಿಂದಷ್ಟೇ ಸಿಎಂ ಆಯ್ಕೆ ಅಂತೇನೂ ಅಲ್ಲ. ಹೈಕಮಾಂಡ್ ತೀರ್ಮಾನಿಸುತ್ತೆ ಎಂದು ಸ್ಪಷ್ಟಪಡಿಸಿದ್ದಾರೆ.

## ಸಿದ್ದರಾಮಯ್ಯ-ಡಿಕೆಶಿ ಬಣಗಳ ಶಕ್ತಿ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಕುರಿತು ಚರ್ಚೆ ಬಜೆಟ್ ಮಂಡನೆ ಸಂದರ್ಭದಲ್ಲಿ ಮತ್ತೆ ಮುನ್ನಲೆಗೆ ಬಂದಿದೆ. ಹಲವು ನಾಯಕರುಗಳ ಬಹಿರಂಗ ಹೇಳಿಕೆಗಳ ಮಧ್ಯ ಕಳೆದ ರಾತ್ರಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬೆಂಬಲಿಗ ಶಾಸಕರು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಉನ್ನತ ಮಟ್ಟದ ಔತಣಕೂಟ ಸಭೆ ನಡೆಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

**ಹುಟ್ಟುಹಬ್ಬದ ನೆಪದಲ್ಲಿ ಸುಮಾರು 40 ಶಾಸಕರಿಂದ ಸಭೆ:** ಮಾಗಡಿ ಕ್ಷೇತ್ರದ ಶಾಸಕ ಹೆಚ್ ಸಿ ಬಾಲಕೃಷ್ಣ ಹುಟ್ಟುಹಬ್ಬದ ನೆಪದಲ್ಲಿ ಡಿ ಕೆ ಶಿವಕುಮಾರ್ ಬೆಂಬಲಿಗ ಶಾಸಕರೆಲ್ಲರೂ ಸೇರಿ ಸಭೆ ನಡೆಸಿದ್ದು, ಅದರಲ್ಲಿ ನಾಯಕತ್ವದ ಬದಲಾವಣೆ ಕುರಿತ ಗಂಭೀರ ಚರ್ಚೆ ನಡೆದಿದೆ ಎನ್ನಲಾಗಿದೆ.

ಡಿಕೆ ಶಿವಕುಮಾರ್ ಬೆಂಬಲಿಗರು ಸುಮಾರು 60ಕ್ಕೂ ಹೆಚ್ಚು ಶಾಸಕರನ್ನು ಸಂಪರ್ಕಿಸಿದ್ದರು. ಅವರಲ್ಲಿ ಬರೋಬ್ಬರಿ 40 ಮಂದಿ ಶಾಸಕರು ಔತಣಕೂಟದಲ್ಲಿ ಭಾಗವಹಿಸಿದ್ದಾರೆ. ಸುಮಾರು 20 ಮಂದಿ ಶಾಸಕರು ಮದುವೆ, ವಿದೇಶ ಪ್ರವಾಸ ಸೇರಿದಂತೆ ವಿವಿಧ ಕಾರಣಗಳಿಂದ ಗೈರಾಗಿದ್ದಾರೆ ಎನ್ನಲಾಗಿದೆ. ಗೈರಾದ ಶಾಸಕರನ್ನು ಮುಂದಿನ ಸಭೆಗೆ ಸೇರಿಸಲು ಬೆಂಬಲಿಗರು ಯೋಜನೆ ರೂಪಿಸಲಾಗುತ್ತಿದ್ದಾರೆ ಎಂದು ತಿಳಿದುಬಂದಿದೆ.

**ಡಿಕೆಶಿಗೆ ಸಿಎಂ ಪಟ್ಟ ಕುರಿತು ಚರ್ಚೆ:** ಔತಣಕೂಟ ಸಭೆಯಲ್ಲಿ ಮುಖ್ಯಮಂತ್ರಿ ಸ್ಥಾನ ಕುರಿತಂತೆ ಗಂಭೀರ ಚರ್ಚೆ ನಡೆದಿದ್ದು, ಹೈಕಮಾಂಡ್ ಇನ್ನು ನಿರ್ಧಾರ ತೆಗೆದುಕೊಳ್ಳದಿದ್ದರೆ ಮುಂದೆ ಗಟ್ಟಿಯಾದ ಹೆಜ್ಜೆ ಇಡಬೇಕೆಂದು ನಾಯಕರು ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗುತ್ತಿದೆ. 2028ರ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ನಾಯಕತ್ವ ಗೊಂದಲಕ್ಕೆ ಅಂತಿಮ ತೆರೆ ಎಳೆಯಬೇಕು ಎಂದು ನಾಯಕರು ಹೇಳಿದ್ದಾರೆ ಎನ್ನಲಾಗುತ್ತಿದೆ.

**ದೆಹಲಿ ಯಾತ್ರೆಗೆ ಚಿಂತನೆ:** ಸಭೆಯಲ್ಲಿ ಮುಂದಿನ ರಾಜಕೀಯ ಹೆಜ್ಜೆಗಳ ಕುರಿತು ವಿಶ್ಲೇಷಣಾತ್ಮಕ ಚರ್ಚೆ ನಡೆದಿದ್ದು, ಹೈಕಮಾಂಡ್ ಮೇಲೆ ಒತ್ತಡ ಹೇರುವ ತಂತ್ರಗಾರಿಕೆ ರೂಪಿಸಲಾಗಿದೆ. ದೆಹಲಿಯ ವರಿಷ್ಠರು ಸ್ಪಷ್ಟ ನಿರ್ಧಾರ ಕೈಗೊಳ್ಳಲೇಬೇಕು ಎಂದು ಶಾಸಕರು ಪಟ್ಟು ಹಿಡಿದಿದ್ದಾರೆ. ಡಿಕೆ ಶಿವಕುಮಾರ್ ಬೆಂಬಲಿಗರು ಶೀಘ್ರದಲ್ಲೇ ದೆಹಲಿ ಭೇಟಿ ಮಾಡುವ ಸಾಧ್ಯತೆ ಇದೆ. 70ಕ್ಕೂ ಹೆಚ್ಚು ಶಾಸಕರು ಒಟ್ಟಾಗಿ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಮುಖ್ಯಮಂತ್ರಿ ಸ್ಥಾನ ಕುರಿತ ನಿರ್ಧಾರಕ್ಕೆ ಒತ್ತಡ ಹೇರುವ ಬಗ್ಗೆ ಚರ್ಚೆ ನಡೆದಿದೆ ಎನ್ನಲಾಗಿದೆ.

1 ಶಾಸಕ ಎಚ್ ಸಿ ಬಾಲಕೃಷ್ಣ ಹುಟ್ಟುಹಬ್ಬದ ನೆಪದಲ್ಲಿ ಶಕ್ತಿ ಪ್ರದರ್ಶನಕ್ಕೆ ಮುಂದಾದ ಡಿಕೆ ಬಣ

2 ಡಿಕೆ ಬಣದಲ್ಲಿ ಗುರುತಿಸಿಕೊಂಡ 18ಜನ ಶಾಸಕರ ಗ್ರೂಪ್ ಫೋಟೋ

### ಮುಂದೆ ಕಾಂಗ್ರೆಸ್ ಅಧಿಕಾರಕ್ಕೆ ಬರೋದು ಕಷ್ಟ

ಸದ್ಯದ ಪರಿಸ್ಥಿತಿ ಇದೇ ರೀತಿ ಮುಂದುವರೆದ್ರೆ, ಕಾಂಗ್ರೆಸ್ ಪಕ್ಷ ಮುಂದೆ ಅಧಿಕಾರಕ್ಕೆ ಬರುವುದು ಕಷ್ಟ. ಹೀಗಾಗಿ ಗೊಂದಲಗಳಿಗೆ ಹೈಕಮಾಂಡ್ ತೆರೆ ಎಳೆಯಬೇಕು ಎಂಬ ವಿಚಾರದ ಬಗ್ಗೆ ಚರ್ಚೆ ಮಾಡಿರೋದಾಗಿ ಬಾಲಕೃಷ್ಣ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಇಲ್ಲಿ ನಾವು ಯಾವ ಬಣದವರಾಗಿಯು ಸಭೆ ಮಾಡಿಲ್ಲ. ಕಾಂಗ್ರೆಸ್ ಶಾಸಕರು ಒಟ್ಟಾಗಿ ಚರ್ಚೆ ಮಾಡಿದ್ದೇವೆ ಎಂದು ಬಾಲಕೃಷ್ಣ ಹೇಳಿಕೆ ನೀಡಿದ್ದಾರೆ. ಬಾಲಕೃಷ್ಣ ಡಿನ್ನರ್ ಮೀಟಿಂಗ್‌ನಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಆಗಲಿ ಅಥವಾ ಡಿಕೆ ಸುರೇಶ್ ಆಗಲಿ ಭಾಗಿಯಾಗಿರಲಿಲ್ಲ.



### 48 ಶಾಸಕರ ಡಿನ್ನರ್ ಪಾರ್ಟಿ

ಗ್ರೂಪ್ ಫೋಟೋದಲ್ಲಿ 18 ಶಾಸಕರು ಕಂಡು ಬಂದರೂ ಸುಮಾರು 48 ಶಾಸಕರು ಔತಣಕೂಟದಲ್ಲಿ ಭಾಗಿಯಾಗಿದ್ದರು ಎಂಬ ಮಾಹಿತಿ ತಿಳಿದು ಬರುತ್ತಿದೆ. ಔತಣ ಕೂಟದ ಹೆಸರಿನಲ್ಲಿ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಚರ್ಚೆಗಳು ನಡೆದಿವೆ. ಬಹಿರಂಗಗೊಂಡ ಫೋಟೋದಲ್ಲಿ ಸಚಿವ ಡಿ ಸುಧಾಕರ್, ಮಂಕಾಳ ವೈದ್ಯ ಇದ್ದಾರೆ. ಜೊತೆಗೆ ಶಾಸಕರಾದ ಗಣಿಗ ರವಿ, ನಯನಾ ಮೋಟಮ್ಮ, ಪ್ರಕಾಶ್ ಕೋಳಿವಾಡ, ಗಣೇಶ್ ಹುಕ್ಕೇರಿ , ಶರತ್ ಬಚ್ಚೇಗೌಡ , ಮಂಥರ್ ಗೌಡ, ಎಚ್ ಡಿ ರಂಗನಾಥ್, ಸಿಪಿ ಯೋಗೇಶ್ವರ್, ಕದಲೂರು ಉದಯ ಗೌಡ , ಬಸವರಾಜ ಶಿವಗಂಗಾ , ಹರೀಶ್ ಗೌಡ, ಆನೇಕಲ್ ಶಿವಣ್ಣ ಹಾಗೂ ಎಂಎಲ್ ಸಿ ರವಿ ಇದ್ದಾರೆ. ನಾಯಕತ್ವ ಬದಲಾವಣೆಯ ಬಗ್ಗೆ ಡಿಕೆ ಶಿವಕುಮಾರ್ ಆಪ್ತ ಬಣದಲ್ಲಿ ಗುರುತಿಸಿಕೊಂಡ ಶಾಸಕರು ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಡಿಕೆ ಶಿವಕುಮಾರ್ ಸರಣಿಯಾಗಿ ದೆಹಲಿಗೆ ಭೇಟಿ ನೀಡುತ್ತಿದ್ದಾರೆ. ಹೈಕಮಾಂಡ್ ನಾಯಕರ ಜೊತೆಗೆ ಚರ್ಚೆಯನ್ನು ನಡೆಸುತ್ತಿದ್ದಾರೆ. ಈ ನಡುವೆ ಬಜೆಟ್ ಮಂಡನೆಗೆ ಸಿದ್ದರಾಮಯ್ಯ ಅವರು ಅಂತಿಮ ಹಂತದ ಸಿದ್ದತೆ ನಡೆಸುತ್ತಿದ್ದಾರೆ.

### ಫೆವಿಕಾಲ್ ಹಾಕಿ ಕುರ್ಚಿಗೆ ಸಿದ್ದರಾಮಯ್ಯ ಅಂಟಿಸಿಕೊಂಡಿದ್ದಾರೆ

ಅಧಿಕಾರ ಹಸ್ತಾಂತರ ವಿಚಾರದಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ ಇತಿಶ್ರೀ ಹಾಡುವ ಯೋಗ್ಯತೆ ಕಾಂಗ್ರೆಸ್ ಹೈಕಮಾಂಡ್‌ಗೆ ಇಲ್ಲ. ಹೀಗೆಯೇ ಮುಂದೂಡುವ ಮನಸ್ಥಿತಿಯಲ್ಲಿದೆ. ಸಿದ್ದರಾಮಯ್ಯ ಯಾವಾಗಲೂ ಸೀಟ್ ಭದ್ರಪಡಿಸಿಕೊಂಡೇ ಇರುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು. ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕುರ್ಚಿಗೆ ಫೆವಿಕಲ್ ಹಾಕಿ ಅಂಟಿಸಿಕೊಳ್ಳುವ ವಿದ್ಯೆ ಸಿದ್ದರಾಮಯ್ಯ ಅವರಿಗೆ ಚೆನ್ನಾಗಿ ಗೊತ್ತಿದೆ. ಡಿ.ಕೆ. ಶಿವಕುಮಾರ್‌ಗೆ ಇದೆಲ್ಲವೂ ಗೊತ್ತಿಲ್ಲ. ಹೊಡೆದು ಕಿತ್ತುಕೊಳ್ಳುವ ಕಾಲ ಇದಲ್ಲ, ತಲೆ ಬಳಸಬೇಕಾದ ಕಾಲವಿದು' ಎಂದರು.

## ಹೆಚ್ಚು ಮೊತ್ತ ಬಿಲ್ ಪಾವತಿ ಅಧಿಕಾರಿ ಅಮಾನತು ವಾಪಸ್

• ಉದಯವಾಹಿನಿ, ಬೆಂಗಳೂರು

ಇಂದಿರಾ ಕ್ಯಾಂಟೀನ್‌ಗೆ ಊಟ ಸರಬರಾಜು ಮಾಡುವ ಸಂಸ್ಥೆಗೆ 7 ಕೋಟಿಗೂ ಹೆಚ್ಚು ಬಿಲ್ ಪಾವತಿ ಮಾಡಿ, ಅಮಾನತುಗೊಂಡಿದ್ದ ಉಪ ಆರೋಗ್ಯಾಧಿಕಾರಿ ಡಾ.ಪಿ.ಕಲ್ಪನಾ ಅವರನ್ನು ಜಿಬಿಎ ಆಡಳಿತದ ಉಪ ಆಯುಕ್ತರು ಕರ್ತವ್ಯಕ್ಕೆ ಮರು ನಿಯೋಜಿಸಿದ್ದಾರೆ. ಬಿಬಿಎಂಪಿ ಇದ್ದಾಗ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾ. ಕಲ್ಪನಾ ಅವರಿಗೆ ಆರೋಗ್ಯಾಧಿಕಾರಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿತ್ತು. ಆ ಸಂದರ್ಭದಲ್ಲಿ, ಚೆಫ್‌ಟಾಕ್ ಫುಡ್ ಆಯಂಡ್ ಹಾಸ್ಪಿಟಾಲಿಟಿ ಸರ್ವಿಸ್ ಸಂಸ್ಥೆ ಬಾಕಿ ಬಿಲ್ ಮೊತ್ತ ಪಾವತಿಸಲು ಕೋರಿತ್ತು. ಇಂದಿರಾ ಕ್ಯಾಂಟೀನ್‌ಗೆ ಊಟದ ವ್ಯವಸ್ಥೆ ನೀಡಿರುವುದಕ್ಕೆ ಮತ್ತು ಬಳಕೆಯಾಗಿರುವುದಕ್ಕೆ ತಯಾರಿಸಿರುವ ವರದಿ ಪ್ರಕಾರ ಚೆಫ್ ಟಾಕ್ ಸಂಸ್ಥೆ 2,27,34,474 ಮೊತ್ತ ಪಡೆಯಲು ಅರ್ಹವಾಗಿದೆ. ಆದರೆ, ಆರೋಗ್ಯಾಧಿಕಾರಿ ಡಾ. ಕಲ್ಪನಾ ಅವರು ಪರಿಶೀಲನೆ ನಡೆಸದೆ, 9,72,21,787 ಪಾವತಿಸಿದ್ದಾರೆ. ಇದರಿಂದ, ಚೆಫ್‌ಟಾಕ್ ಸಂಸ್ಥೆಗೆ 7,00.12,396 ಅಧಿಕ ಹಣ ಪಾವತಿಯಾಗಿತ್ತು. ದಕ್ಷಿಣ ವಲಯ ಆಯುಕ್ತರು ಹಾಗೂ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತರು 2025ರ ಮೇ 15ರಂದು ನಿರ್ಲಕ್ಷ್ಯದ ಬಗ್ಗೆ ವರದಿ ನೀಡಿದ್ದರು. ಇದಾದ ಮರು ದಿನವೇ ಕರ್ತವ್ಯಲೋಪದ ಆರೋಪದ ಮೇಲೆ ಆರೋಗ್ಯಾಧಿಕಾರಿ ಡಾ. ಕಲ್ಪನಾ ಅವರನ್ನು ಅಮಾನತು ಮಾಡಲಾಗಿತ್ತು.

## ಸ್ವಾವಲಂಬನೆಗೆ ಗೃಹಲಕ್ಷ್ಮಿ ಆಸರೆ: ಅಸ್ತಿತ್ವಕ್ಕೆ ಬರಲಿದೆ ಸಹಕಾರ ಸಂಘ

• ಉದಯವಾಹಿನಿ, ಬೆಂಗಳೂರು

'ಗೃಹಲಕ್ಷ್ಮಿ' ಯೋಜನೆಯ ಫಲಾನುಭವಿಗಳ ಸಹಕಾರ ಸಂಘವನ್ನು ಸ್ಥಾಪಿಸಲು ಮುಂದಾಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಫಲಾನುಭವಿಗಳಿಂದ 1,250 ಸದಸ್ಯತ್ವ ಶುಲ್ಕ ಮತ್ತು ತಿಂಗಳಿಗೆ 200ರಂತೆ ಠೇವಣಿ ಸಂಗ್ರಹಿಸಲು ತೀರ್ಮಾನಿಸಿದೆ. ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ' ಸ್ಥಾಪನೆ ಮಾಡಲು ಸರ್ಕಾರ ನಿರ್ಧರಿಸಿದೆ. ಇದಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆಯಡಿ ಈವರೆಗೆ 1.24 ಕೋಟಿ ಫಲಾನುಭವಿಗಳಿಗೆ ತಿಂಗಳಿಗೆ ತಲಾ 2,000ರಂತೆ, ಈವರೆಗೆ 26 ಕಂತುಗಳನ್ನು ಪಾವತಿಸಿದೆ. ಪ್ರತಿ ತಿಂಗಳು ನೀಡುವ 2,000ದಲ್ಲಿ ಸಹಕಾರ ಸಂಘ ಬಲಗೊಳಿಸಲು ಠೇವಣಿ ರೂಪದಲ್ಲಿ 200 ಅನ್ನು ಕಡಿತಗೊಳಿಸಲಾಗುತ್ತದೆ. ಸಹಕಾರ ಸಂಘ ಸ್ಥಾಪನೆ ಪ್ರಕ್ರಿಯೆ ಆರಂಭವಾದ ಬಳಿಕ ಆರು ತಿಂಗಳವರೆಗೆ ಮಹಿಳೆಯರ ಖಾತೆಗೆ 1,800 ಮಾತ್ರ ಜಮೆಯಾಗಲಿದೆ. ಉಳಿದ ಮೊತ್ತವು ಸದಸ್ಯರ ಖಾತೆಯಲ್ಲಿಯೇ ಇರಲಿದೆ.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ತರಬೇತಿ ನೀಡುವುದಕ್ಕಾಗಿ ಈ ಸಹಕಾರ ಸಂಘ ಹುಟ್ಟು ಹಾಕಲಾಗುತ್ತಿದೆ. ಗೃಹಲಕ್ಷ್ಮಿ ಯೋಜನೆಯ ಎಲ್ಲಾ ಫಲಾನುಭವಿಗಳನ್ನು ಸದಸ್ಯರನ್ನಾಗಿಸುವ ಗುರಿ ಹೊಂದಲಾಗಿದೆ. ಸಂಘದ ಮೂಲಕ ಈ ಮಹಿಳೆಯರಿಗೆ ವಿವಿಧ ಉದ್ದೇಶಗಳಿಗೆ ಸಾಲ ಸೌಲಭ್ಯ ಒದಗಿಸುವ ಮೂಲಕ ಮಹಿಳೆಯರನ್ನು ಉದ್ಯಮಿಗಳಾಗಿಸುವ ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿಸುವ ಉದ್ದೇಶ ಹೊಂದಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೇಳಿದೆ.

## ತಿಂಗಳಲ್ಲಿ ಅರ್ಧ ಲಕ್ಷ ಹುದ್ದೆ ನೇಮಕಾತಿ ಪ್ರಕ್ರಿಯೆ; ಕಲ್ಯಾಣ ಕರ್ನಾಟಕದ್ದೆ ಹೆಚ್ಚು ಪಾಲು

### 56 ಸಾವಿರ ಹುದ್ದೆ ಭರ್ತಿಗೆ ಸಂಪುಟ ತೀರ್ಮಾನ; ಯುವಜನರ ಆಕ್ರೋಶಕ್ಕೆ ಬೆಚ್ಚಿದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಮಾರ್ಚ್ ತಿಂಗಳಲ್ಲಿ ಅರ್ಧ ಲಕ್ಷ ಹುದ್ದೆಗಳ ನೇಮಕಾತಿ ನಡೆಯಲಿದೆ. ಉದ್ಯೋಗಾಕಾಂಕ್ಷಿ ಯುವಜನರ ಹೋರಾಟದ ಕಿಚ್ಚನ್ನು ಆರಿಸಲು ಮುಂದಾಗಿರುವ ಸರಕಾರ ಕೊನೆಗೂ ಖಾಲಿ ಹುದ್ದೆಗಳ ಭರ್ತಿಗೆ ತೀರ್ಮಾನಿಸಿದೆ. ನೇಮಕಾತಿ ಪೈಕಿ 32 ಸಾವಿರ ಹುದ್ದೆ ಕಲ್ಯಾಣ ಕರ್ನಾಟಕ ಪಾಲಾಗಿದೆ.

ಹಿಂದಿನ ಶೇ.50 ರಷ್ಟು ಮೀಸಲು ಆಧರಿಸಿಯೇ ಒಟ್ಟು 56,432 ಹುದ್ದೆಗಳಿಗೆ ನೇಮಕ ಪ್ರಕ್ರಿಯೆಯನ್ನು 30 ದಿನಗಳೊಳಗೆ ಆರಂಭಿಸುವ ಮಹತ್ವದ ತೀರ್ಮಾನ ಮಾಡಿದೆ. ಮೀಸಲು ಪ್ರಮಾಣವನ್ನು ಶೇ.56ಕ್ಕೆ ಹೆಚ್ಚಳ ಮಾಡಿರುವ ಸರಕಾರದ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ಇರುವ ಹಿನ್ನೆಲೆಯಲ್ಲಿ ಈ ಮುಂಚಿನ ಶೇ.50 ಮೀಸಲು ಪ್ರಮಾಣ ಪರಿಧಿಯೊಳಗೇ ನೇಮಕ ಪ್ರಕ್ರಿಯೆ ಕೈಗೊಳ್ಳಲು ಸಂಪುಟ ಸಭೆ ನಿರ್ಧರಿಸಿದೆ. ನಾನಾ ಕಾರಣ ನೀಡಿ ಉದ್ಯೋಗಾಕಾಂಕ್ಷಿಗಳನ್ನು ಸಮಧಾನಪಡಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಈ ತೀರ್ಮಾನ ಕೈಗೊಳ್ಳಲಾಗಿದೆ. ಆ ಮೂಲಕ ಹೋರಾಟದ ಹಾದಿ ತುಳಿದಿದ್ದ ಯುವಜನರಿಗೆ ಸರ್ಕಾರ ಸಿಹಿ ಸುದ್ದಿ ನೀಡಿದೆ.

**ಕಲ್ಯಾಣ ಕರ್ನಾಟಕಕ್ಕೆ ಭರ್ಜರಿ ಹುದ್ದೆ ನೇಮಕಾತಿ:** ಒಟ್ಟಾರೆ 56 ಸಾವಿರ ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕಕ್ಕೆ ಶೇಕಡಾ 57 ರಷ್ಟು, ಇತರೆ ಕರ್ನಾಟಕದ ಭಾಗದಲ್ಲಿ ಶೇಕಡಾ 43 ರಷ್ಟು ಹುದ್ದೆ ಸಿಗಲಿದೆ. ಈ ಮೂಲಕ ಕಲ್ಯಾಣ ಕರ್ನಾಟಕ ಭಾಗಕ್ಕೆ ದೊಡ್ಡ ಅನುಕೂಲವಾಗಲಿದೆ.

**ಮೀಸಲಾತಿ ಯಾವ ಮಾದರಿ ಪಾಲನೆ:** ತುರ್ತಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕಾದ ಹಿನ್ನೆಲೆಯಲ್ಲಿ2022ರ ಡಿ.28ಕ್ಕೂ ಮೊದಲು ಜಾರಿಯಲ್ಲಿದ್ದ ಮೀಸಲು ಆದೇಶ ಹಾಗೂ ರೋಸ್ಟರ್ ಬಿಂದುಗಳಂತೆ (ಮೀಸಲು ಪ್ರಮಾಣ ಶೇ.50ಕ್ಕೆ) ಹೊಸ ನೇಮಕಾತಿ ಅಧಿಸೂಚನೆ ಹೊರಡಿಸಲು ತೀರ್ಮಾನಿಸಲಾಗಿದೆ,'' ಎಂದು ವಿವರಿಸಿದರು.

### ಇತರರಿಗೆ 24 ಸಾವಿರ ಜಾಬ್ಸ್



**ನೇಮಕಾತಿ ಇಷ್ಟು ದಿನ ಸ್ಥಗಿತವಾಗಿದ್ದು ಯಾಕೆ:** ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀಸಲು ಪ್ರಮಾಣ ಕ್ರಮವಾಗಿ ಶೇಕಡಾ 17 ಮತ್ತು ಶೇಕಡಾ 7ಕ್ಕೆ ಹೆಚ್ಚಳ ಹಾಗೂ ಪರಿಶಿಷ್ಟ ಜಾತಿಗಳಿಗೆ ಕಲ್ಪಿಸಿರುವ ಒಳ ಮೀಸಲು ಹಂಚಿಕೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿರುವ ಹಿನ್ನೆಲೆಯಲ್ಲಿ ನೇಮಕಾತಿ ವಿಚಾರವಾಗಿ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು. ಒಟ್ಟಾರೆ ಮೀಸಲು ಪ್ರಮಾಣವನ್ನು ಶೇ.56ಕ್ಕೆ ಹೆಚ್ಚಳ ಮಾಡಿ 2022ರಲ್ಲಿರೋಸ್ಟರ್ ಬಿಂದುಗಳನ್ನು ಪರಿಷ್ಕರಿಸಲಾಗಿತ್ತು. ಇದನ್ನು ಪ್ರಶ್ನಿಸಿರುವ ಪ್ರಕರಣದಲ್ಲಿಹೈಕೋರ್ಟ್ 2025ರ ನ.19ರಂದು ತಡೆಯಾಜ್ಞೆ ನೀಡಿದೆ.

ಇದರಿಂದಾಗಿ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು,'' ಎಂದು ಹೇಳಿದರು.

### ಯಾವ ವಲಯಕ್ಕೆ ಎಷ್ಟು ಹುದ್ದೆ

- ಅಧಿಸೂಚನೆ ಹೊರಡಿಸಬೇಕಾದ ಹುದ್ದೆಗಳ ಸಂಖ್ಯೆ - 56,432
- ಕರ್ನಾಟಕದ ಇತರೆ ಭಾಗಕ್ಕೆ ಅನ್ವಯವಾಗುವ ಹುದ್ದೆಗಳು - 24,300
- 371ಜೆ ಅಡಿ ವ್ಯಾಪ್ತಿಗೆ ಬರುವ ಹುದ್ದೆಗಳ ಸಂಖ್ಯೆ - 32,132


## ಮನೆಗೆಲಸ ಕಾರ್ಮಿಕರು, ವಿಧವೆಯರು ಹಾಗೂ ಅಂಗವಿಕಲರ ಪರವಾಗಿ ಕಾನೂನು ತರಲು ಸಿದ್ಧತೆ!

### • ವಿಧೇಯಕ ಮಂಡನೆ ಮಾಡಲು ರಾಜ್ಯ ಸರ್ಕಾರ ನಿರ್ಧಾರ • ಮಾಹಿತಿ ನೀಡಿದ ಸಂತೋಷ್ ಲಾಡ್

• ಉದಯವಾಹಿನಿ, ಬೆಂಗಳೂರು

ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆಯು ನಾಲ್ಕು ಮಸೂದೆಗಳನ್ನು ಈಗಾಗಲೇ ಜಾರಿ ಮಾಡಿದೆ. ಇದರೊಂದಿಗೆ ಇನ್ನೂ ನಾಲ್ಕು ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ ಎಂದು ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಎಸ್ ಲಾಡ್ ಅವರು ಹೇಳಿದರು. ಅರಮನೆ ಮೈದಾನದ ಗಾಯತ್ರಿ ವಿಹಾರದ ಗಾಯತ್ರಿ ಗ್ರ್ಯಾಂಡ್‌ನಲ್ಲಿ ರಾಜ್ಯದ ವಿವಿಧ ಕೈಗಾರಿಕೆಗಳು, ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶೇಷಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನಗಳ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಗಿಗ್ ಕಾರ್ಮಿಕರ ವಿಮಾ ಮಸೂದೆ, ಋತುಚಕ್ರ ರಜೆ, ಸಾರಿಗೆ ಕಾರ್ಮಿಕರಿಗೆ ಅಪಘಾತ ಮತ್ತು ವಿಮಾ ಯೋಜನೆ ಮತ್ತು ಸಿನಿಮಾ ಕಾರ್ಮಿಕರಿಗೆ ಮಸೂದೆ ಜಾರಿ ಮಾಡಲಾಗಿದೆ. ಮನೆಗೆಲಸದ ಕಾರ್ಮಿಕರು, ವಿಧವೆಯರು, ಅಂಗವಿಕಲರಿಗೆ ಸಂಬಂಧಿಸಿದ ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸ್ವಲ್ಪಮಟ್ಟಿನ ಸುಂಕ ವಿಧಿಸಿ ಅಸಂಘಟಿತ ಕಾರ್ಮಿಕ ಕಲ್ಯಾಣಕ್ಕೆ ಬಳಸುವ ಉದ್ದೇಶವಿದೆ. ಕೋಟ್ಯಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಹೊಸ ಮಸೂದೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು.





ಶೀಘ್ರದಲ್ಲೇ ವಿಧೇಯಕ ಮಂಡನೆ

ಕಳೆದ ಎರಡೂವರೆ ವರ್ಷಗಳಲ್ಲಿ ನಮ್ಮ ಕಾರ್ಮಿಕ ಇಲಾಖೆ ಹಲವಾರು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಇಲಾಖೆ ಹೊಸ ಹೊಸ ಸೌಲಭ್ಯಗಳನ್ನು ಅನುಷ್ಠಾನ ಮಾಡಿದೆ ಎಂದರು. ಕಾರ್ಮಿಕ ಇಲಾಖೆಯ ಜೊತೆಗೆ ನಮ್ಮ ಸಂತೋಷ್ ಎಸ್ ಲಾಡ್ ಫೌಂಡೇಶನ್ ಜೊತೆಗೂಡಿ ವಿಶೇಷ ಚೇತನರಿಗೆ ತ್ರಿಚಕ್ರ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ವಿಶೇಷ ಚೇತನರಿಗೆ ತ್ರಿಚಕ್ರ ವಿತರಿಸುವ ನಮ್ಮ ಆಲೋಚನೆಯನ್ನು ವಿವಿಧ ಕಂಪನಿ ಹಾಗೂ ಸಂಸ್ಥೆಗಳ ಜೊತೆಗೆ ತಿಳಿಸಿದಾಗ ಅವರು ನಮ್ಮ ಮನವಿಗೆ ಸ್ಪಂದಿಸಿದರು. ವಿವಿಧ ಕಂಪನಿಗಳು ವಿಶಾಲ ಮನೋಭಾವದಿಂದ ಕೊಡುಗೆ ನೀಡಿವೆ.

ರಾಜ್ಯದಾದ್ಯಂತ 1608 ತ್ರಿಚಕ್ರ ವಾಹನಗಳನ್ನು ವಿತರಣೆ ಮಾಡಲಾಗುತ್ತಿದೆ. ಇದಕ್ಕಾಗಿ ಇಲಾಖೆ ಪರವಾಗಿ ಧನ್ಯವಾದಗಳು ಎಂದರು. ವಿಶೇಷ ಚೇತನರ ಸಮಸ್ಯೆಗಳನ್ನು, ನೋವನ್ನು ನಾನು ತೀರಾ ಹತ್ತಿರದಿಂದ ನೋಡಿದ್ದೇನೆ. ಅವರು ಬದುಕು ನಡೆಸಲು ಕಷ್ಟಪಡುವುದನ್ನು ಕಂಡಿದ್ದೇನೆ. ಇಂತಹವರಿಗೆ ಏನಾದರೂ ಸಹಾಯ ಮಾಡಬೇಕು. ಅವರ ಜೀವನಕ್ಕೆ ಊರುಗೋಲಾಗಬೇಕು ಎಂಬ ಸದುದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ ಎಂದರು.

**ಉಪ ಮುಖ್ಯಮಂತ್ರಿ ಪ್ರಶಂಸೆ:** ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಮಾತನಾಡಿ, ವಿಶೇಷ ಚೇತನರಿಗೆ ವಿವಿಧ ಸಂಸ್ಥೆಗಳ ಮೂಲಕ ತ್ರಿಚಕ್ರ ವಾಹನಗಳನ್ನು ನೀಡುವ ಮೂಲಕ ಒಳ್ಳೆಯ ಕೆಲಸ ಮಾಡಿದೆ. ಸಂತೋಷ್ ಲಾಡ್ ಅವರಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಪಾರವಾದ ಅರಿವು ಇದೆ. ಕಾರ್ಮಿಕ ಇಲಾಖೆಯು ಹೊಸ ಕಾನೂನುಗಳನ್ನು ಜಾರಿ ಮಾಡಿ ಕಾರ್ಮಿಕರಿಗೆ ರಕ್ಷಣೆ ಕೊಡುತ್ತಿದೆ ಎಂದು ಹೇಳಿದರು.

### ನಾನೇ ಅದೃಷ್ಟವಂತ

ಜನರ ಸೇವೆ ಮಾಡುವ ಅವಕಾಶ ಪಡೆದ ನಾನೇ ಅದೃಷ್ಟವಂತ, ಪುಣ್ಯವಂತ. ಜನರ ಆಶೀರ್ವಾದದಿಂದ ಅವರ ಕೆಲಸ ಮಾಡುತ್ತಿದ್ದೇನೆ. ಬಡವರ ಪರ ಇರಬೇಕು ಎಂಬ ಸದುದ್ದೇಶದಿಂದ ಸಾರ್ವಜನಿಕ ಸೇವೆಯಲ್ಲಿ ಇದ್ದೇನೆ. ಜನರ ಸೇವೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಿಮ್ಮೆಲ್ಲರ ಸಹಕಾರ ಸದಾ ಇರಲಿ ಎಂದರು. ನಮ್ಮ ರಾಜ್ಯ ಸರ್ಕಾರವು ಗ್ಯಾರಂಟಿಗಳ ಮೂಲಕ ನಾಡಿನ ಕೋಟ್ಯಂತರ ಜನರಿಗೆ ನೆರವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಗ್ಯಾರಂಟಿಗಳು ಸಹಾಯ ಮಾಡಿವೆ. ಈ ಬಾರಿಯ ಬಜೆಟ್‌ನಲ್ಲೂ ಅಸಂಘಟಿತ ಕಾರ್ಮಿಕರಿಗೆ ಇನ್ನಷ್ಟು ಅನುಕೂಲವಾಗುವ ಕಾರ್ಯಕ್ರಮಗಳಿಗೆ ಮನವಿ ಮಾಡಿದ್ದೇವೆ ಎಂದರು.

## ಉದಯ್ ಭಾನು ಚಿಬ್‌ಬಂಧನ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ದೊಡ್ಡಬಳ್ಳಾಪುರ

ರಾಷ್ಟ್ರೀಯ ಯೂತ್ ಕಾಂಗ್ರೆಸ್ ಅಧ್ಯಕ್ಷ ಉದಯ್ ಬಾನು ಚಿಬ್ ಅವರ ಬಂಧನ ಖಂಡಿಸಿ ನಗರದಲ್ಲಿ ರಾತ್ರಿ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಸಿದ್ದಲಿಂಗಯ್ಯ ವೃತ್ತದಲ್ಲಿ ಬಿಜೆಪಿ ನೀತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಶರತ್ ಪಟೇಲ್, ತಾಲ್ಲೂಕು ಅಧ್ಯಕ್ಷ ಮಲ್ಲೋಹಳ್ಳಿ ಪುನೀತ್ ಗೌಡ ಮಾತನಾಡಿ, ದೇಶದ ಸಂವಿಧಾನ ಭಾರತೀಯ ನಾಗರೀಕರಿಗೆ ನೀಡಿರುವ ಹಕ್ಕಿನಡಿಯೇ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಆದರೂ ಅವರನ್ನು ಬಿಜೆಪಿ ಸರ್ಕಾರ ಬಂಧಿಸಿರುವುದು ಖಂಡನೀಯ. ಇದು ಬಿಜೆಪಿಯ ದುಂಡಾವರ್ತನೆಗೆ ನಿದರ್ಶನವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಹೆಸರಿರುವ ಪ್ರಧಾನಿ ನರೇಂದ್ರ ಮೋದಿ ದೇಶದ ಘನತೆ ಕುಗ್ಗಿಸಿದ್ದಾರೆ. ದೇಶದ ರೈತರ ಹಿತಾಸಕ್ತಿ ಬಲಿಕೊಟ್ಟು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ಮಂಡಿಯೂರಿದ್ದಾರೆ. ಅವರ ಬಳಿ ಇದ್ಯಾವುದಕ್ಕೂ ಉತ್ತರವಿಲ್ಲ. ಇದೀಗ ಪ್ರತಿಭಟನೆ ನಡೆಸಿದ್ದಕ್ಕಾಗಿ ಬಂಧಿಸಿರುವ ಚಿಬ್ ಅವರನ್ನು ಬಿಡುಗಡೆ ಮಾಡದಿದ್ದರೆ ದೇಶದಾದ್ಯಂತ ಪ್ರತಿಭಟನೆಗಳು ನಡೆಯಲಿವೆ ಎಂದು ಎಚ್ಚರಿಸಿದರು.

# ನೀರಿನ ಬವಣೆ ಎದುರಿಸಲು ಜಲಮಂಡಳಿ ಸಿದ್ಧತೆ

### ಬೆಂಗಳೂರಿನ ಹೆಬ್ಬಾಳ ಸೇರಿ 65 ವಾರ್ಡ್‌ಗಳಲ್ಲಿ ಅಂತರ್ಜಲ ಸಮಸ್ಯೆ ಬರಲಿದೆ, IISC ಅಧ್ಯಯನದಿಂದ ಹೊರಬಿತ್ತು ಸಂಗತಿ




• ಉದಯವಾಹಿನಿ, ಬೆಂಗಳೂರು

ಮುಂಬರುವ ದಿನಗಳಲ್ಲಿ ರಾಜಧಾನಿ ಬೆಂಗಳೂರಿನ 65 ವಾರ್ಡ್‌ಗಳಲ್ಲಿ ಅಂತರ್ಜಲದ ಸಮಸ್ಯೆ ಉಲ್ಬಣಸಲಿದೆ ಎಂಬ ಆತಂಕಕಾರಿ ಸಂಗತಿ ಹೊರಬಿದ್ದಿದೆ. ಇದರ ಬೆನ್ನಲ್ಲೇ ಬೆಂಗಳೂರು ಜಲಮಂಡಳಿ ಅಗತ್ಯ ಕ್ರಮಕ್ಕೆ ಮುಂದಾಗಿದೆ. ಕಳೆದ ವರ್ಷದಂತೆ ಈ ಬಾರಿಯೂ ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿಗಳು, ಕೇಂದ್ರ ಅಂತರ್ಜಲ ಸಂಸ್ಥೆ ಅಧಿಕಾರಿಗಳು, ರಾಜ್ಯ ಅಂತರ್ಜಲ, ಭೂವಿಜ್ಞಾನ ಇಲಾಖೆ ಬೆಂಗಳೂರು ನಗರದ ಅಂತರ್ಜಲ ಮಟ್ಟದ ವಸ್ತುಸ್ಥಿತಿ ಕುರಿತು ಅಧ್ಯಯನ ನಡೆಸಿ ವರದಿ ನೀಡಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ, ಐಟಿಟಿ ಬಳಸಿ ಅಂತರ್ಜಲದ ಕುಸಿತ ಕುರಿತು ಐಐಎಸ್ಸಿ ವಿಶ್ಲೇಷಣೆ ಮಾಡಿದೆ. 65 ವಾರ್ಡ್‌ಗಳಲ್ಲಿ ಅಂತರ್ಜಲ ಕುಸಿದಿದ್ದು, ಮುಂಬರುವ ದಿನಗಳಲ್ಲಿ ಅಂತರ್ಜಲ ಸಮಸ್ಯೆ ಎದುರಾಗಲಿದೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಿದೆ.

ಬೇಸಿಗೆಯಲ್ಲಿ ನೀರಿನ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು ಈಗಾಗಲೇ ಬೆಂಗಳೂರು ಜಲಮಂಡಳಿ 10.14 ಕೋಟಿಗಳ ಕ್ರಿಯಾ ಯೋಜನೆ ರೂಪಿಸಿದ್ದು, ಇದರ ಜತೆಗೆ 65 ವಾರ್ಡ್ ಗಳಲ್ಲಿ ನೀರಿನ ಸಂಪರ್ಕ ಮಂಜೂರಾತಿಗೆ ಪ್ರಾಮುಖ್ಯತೆ ನೀಡಲು ನಿರ್ಧರಿಸಿದೆ.

ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಕೊಳವೆ ಬಾವಿಗಳ ಮೇಲೆ ನಿಗಾ ಇಡಲು, ಆರ್.ಒ. ಪ್ಲಾಂಟ್‌ಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆಯಾಗುವಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಕೊಳವೆಬಾವಿ ವಿಭಾಗಕ್ಕೆ ಮಂಡಳಿ ನಿರ್ದೇಶನ ನೀಡಿದೆ.

**ನೀರಿನ ಸಮರ್ಪಕ ವಿತರಣೆ, ಉಳಿತಾಯ:** ಎಲ್ಲಾ ಪ್ರದೇಶಗಳಿಗೂ ನೀರು ಸಮರ್ಪಕ ರೀತಿಯಲ್ಲಿ ವಿತರಣೆಯಾಗುವಂತೆ, ಕುಡಿಯುವುದು, ಅಡುಗೆಗೆ ಆದ್ಯತೆಯಾಗಿ ವಿತರಣೆ ಮಾಡಲು ಕ್ರಮ ಕೈಗೊಳ್ಳಲು ನಿರ್ಧರಿಸಿರುವ ಮಂಡಳಿ, ಈ ಬಾರಿಯೂ ವಾಹನ ಶುದ್ಧೀಕರಣ, ತೋಟಗಾರಿಕೆ, ಮನೆ ಅಂಗಳ ಸ್ವಚ್ಛತೆ.. ಹೀಗೆ ಕುಡಿಯುವ ನೀರಿನ ಅನಗತ್ಯ ಬಳಕೆಗೆ ತಡೆ ಹಾಕುವುದಕ್ಕೆ ದಂಡ ವಿಧಿಸಲು ಸಜ್ಜಾಗಿದೆ.

ದೇವಾಲಯ, ಮಾಲ್, ಸರಕಾರಿ ಕಚೇರಿ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿನ ನಲ್ಲಿಗಳಿಗೆ ಏರಿಯೇಟರ್ ಅಳವಡಿಕೆಗೆ ಹೆಚ್ಚಿನ ಗಮನ ನೀಡಲು ಸಿಬ್ಬಂದಿಗೆ ನಿರ್ದೇಶನ ನೀಡಿದೆ. ನಗರದ ಕಟ್ಟಡ ಕಾಮಗಾರಿಗಳಿಗೆ ಕಡ್ಡಾಯವಾಗಿ ಸಂಸ್ಕರಿಸಿದ ನೀರು ಪೂರೈಕೆ ಮಾಡುವಂತೆ ನಿಗಾ ಇಡಲು ಅಧಿಕಾರಿಗಳಿಗೆ ಸೂಚಿಸಿದೆ.

**ಕೊಳವೆ ಮಾರ್ಗ ಸ್ಥಿತಿಗತಿಗಳ ಖಾತ್ರಿಗೆ ಸೂಚನೆ**

**ಈ ವಾರ್ಡ್‌ಗಳಲ್ಲಿ ನೀರು ಪೂರೈಕೆಯ ಕೊಳವೆ ಮಾರ್ಗ ಸರಿಯಾಗಿದೆಯೇ ಪರಿಶೀಲಿಸಿ, ಇಲ್ಲದಿದ್ದರೆ ಕೂಡಲೇ ಸರಿಪಡಿಸಲು, ನೀರಿನ ಸಂಪರ್ಕ ಪಡೆಯದಿರುವವರನ್ನು ಗುರುತಿಸಿ, ಅಪಾರ್ಟ್‌ಮೆಂಟ್‌ಗಳಿಗೆ ತ್ವರಿತಗತಿಯಲ್ಲಿ ನೀರಿನ ಸಂಪರ್ಕ ಒದಗಿಸಲು, ಈ ಪ್ರದೇಶಗಳಲ್ಲಿರುವ ಕೆರೆಗಳಿಗೆ ನೀರು ತುಂಬಿಸುವುದಕ್ಕೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೊಳೆಗೇರಿ ಪ್ರದೇಶ, ಹೆಚ್ಚು ಜನಸಾಂದ್ರತೆ ವಾಸಿಸುವ ನೀರಿನ ಸಮಸ್ಯೆ ಇರುವ ಪ್ರದೇಶ ಹಾಗೂ ಅಪಾರ್ಟಮೆಂಟ್ ಗಳಿಗೆ ಸಿಂಟೆಕ್ಸ್ ಟ್ಯಾಂಕ್, ತಾತ್ಕಾಲಿಕ ನೀರು ವಿತರಣೆ ಕೇಂದ್ರ ಹಾಗೂ ಕಾವೇರಿ ನೀರು ಸರಬರಾಜು ಕೇಂದ್ರ ಸ್ಥಾಪನೆಗೆ ಮುಂದಾಗಿದೆ.**

**ಮಾ.3ಕ್ಕೆ ಸಭೆ**

**65 ವಾರ್ಡ್‌ಗಳ ನೀರಿನ ನಿರ್ವಹಣೆ ಕುರಿತು ಚರ್ಚಿಸಲು ಮಂಡಳಿಯು ಮಾರ್ಚ್ 3ರಂದು ಸಭೆ ಆಯೋಜಿಸಿದೆ. ಈ ಪ್ರದೇಶಗಳ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ, ನೀರಿನ ಸಂಪರ್ಕ, ಕೆರೆ ನೀರು ತುಂಬಿಸುವುದು, 110 ಹಳ್ಳಿಗಳ ವ್ಯಾಪ್ತಿಯ ಸಂಪರ್ಕವಿಲ್ಲದ ಪ್ರದೇಶಗಳಿಗೆ ನೀರು ಸರಬರಾಜು, ಈ ಎಲ್ಲಾ ಕಾಮಗಾರಿಗಳಿಗೆ ತಗಲುವ ವೆಚ್ಚದ ಕುರಿತು ಚರ್ಚಿಸಲು ಸೂಕ್ತ ಮಾಹಿತಿಯೊಂದಿಗೆ ಸಭೆಗೆ ಆಧಿಗಧಿಮಿಸಿ ವರದಿ ನೀಡಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾದ್ ಮನೋಹರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.**

## ಮಾಜಿ ಸಿಎಂ ಕೆ.ಸಿ.ರೆಡ್ಡಿ ಗುಣಗಾನ ಮಾಡಿದ ಸಿದ್ದರಾಮಯ್ಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕೇಂದ್ರ ಸರ್ಕಾರದ ಕಾರ್ಖಾನೆಗಳು ಪ್ರಾರಂಭವಾಗಲು ಮಾಜಿ ಮುಖ್ಯಮಂತ್ರಿ ದಿವಂಗತ ಕೆ.ಸಿ.ರೆಡ್ಡಿ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಕೆ.ಸಿ.ರೆಡ್ಡಿ ಅವರ ಪುಣ್ಯತಿಥಿಯ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಸ್ವತಂತ್ರ ಭಾರತದ ರಾಜ್ಯದ ಮೊದಲ ಸಿಎಂಆಗಿದ್ದ ಕೆ.ಸಿ.ರೆಡ್ಡಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಹಲವು ಬಾರಿ ಸೆರೆವಾಸ ಅನುಭವಿಸಿದ್ದರು. ಮೈಸೂರು ಸಂಸ್ಥಾನವನ್ನು ಒಕ್ಕೂಟ ವ್ಯವಸ್ಥೆಗೆ ಸೇರಿಸಲು ಶ್ರಮಿಸಿದ್ದರು ಎಂದು ಬಣ್ಣಿಸಿದರು. ರಾಜ್ಯದ ಮುಖ್ಯಮಂತ್ರಿಯಾಗಿ, ಕೇಂದ್ರ ಸಚಿವರಾಗಿ, ರಾಜ್ಯಪಾಲರಾಗಿ ಬಹಳಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅವರು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ಅವರ ಮಾರ್ಗದರ್ಶನದಂತೆ ಎಲ್ಲರೂ ನಡೆಯೋಣ ಎಂದು ಹೇಳಿದರು.

## ವಿಶೇಷಚೇತನರಿಗೆ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉದ್ಯೋಗ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

**ಜಿಬಿಎ ಹೊಸ ಪ್ಲಾನ್**

ಸಿಎಂ ಸಿದ್ದರಾಮಯ್ಯ ಅವರ ಕನಸಿನ ಯೋಜನೆಯಾದ ಇಂದಿರಾ ಕ್ಯಾಂಟೀನ್‌ಗೆ ಹೊಸ ರೂಪ ನೀಡಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಗ್ರೇಟರ್ ಪ್ಲಾನ್‌ಮಾಡಿದೆ. ಗುಣಮಟ್ಟದ ಆಹಾರ, ಸೇವೆಯಲ್ಲಿ ಕೆಲವು ಕಾಲದಿಂದ ಉಂಟಾಗಿದ್ದ ಅಸಮಾಧಾನಕ್ಕೆ ಪರಿಹಾರ ಕಂಡುಹಿಡಿಯಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇಂದಿರಾ ಕ್ಯಾಂಟೀನ್‌ಗಳಿಗೆ ಕಾಯಕಲ್ಪ ಕಲ್ಪಿಸಲು ಮನಸು ಮಾಡಿದೆ. ಇಂದಿರಾ ಕ್ಯಾಂಟೀನ್‌ಗಳಲ್ಲಿ ಅಂಧರು, ವಿಶೇಷಚೇತನರು ಸೇರಿದಂತೆ ವಿವಿಧ ವಿಶೇಷ ಚೇತನರಿಗೆ ಉದ್ಯೋಗ ನೀಡುವ ಯೋಜನೆಗೆ ಜಿಬಿಎ ರೂಪುರೇಷೆ ಸಿದ್ಧಪಡಿಸಿದೆ.

ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಆಯ್ದ ಸಂಘ ಸಂಸ್ಥೆಗಳ ಮೂಲಕ ಅರ್ಹ ಅಭ್ಯರ್ಥಿಗಳ ಆಯ್ಕೆ ಮಾಡಿ ಜಿಬಿಎ ವತಿಯಿಂದ ವಿಶೇಷ ತರಬೇತಿ ನೀಡಿದ ನಂತರ ಕ್ಯಾಂಟೀನ್‌ಗಳಲ್ಲಿ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ಈ ಮೂಲಕ ಕ್ಯಾಂಟೀನ್‌ಗಳಿಗೆ ಸಾಮಾಜಿಕ ಸ್ಪರ್ಶ ನೀಡುವ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಕೆಲವು ಖಾಸಗಿ ಹೋಟೆಲ್‌ಗಳು ವಿಶೇಷಚೇತನರಿಗೆ ಉದ್ಯೋಗ ನೀಡಿ ಮಾದರಿ ಆಗಿರುವ ಹಿನ್ನೆಲೆಯಲ್ಲಿ, ಅದೇ ಮಾದರಿ ಅನ್ನು ಸರ್ಕಾರದ ಯೋಜನೆಯಲ್ಲಿ ಜಾರಿಗೆ ತರಲು ತೀರ್ಮಾನಿಸಲಾಗಿದೆ. ಇತ್ತೀಚೆಗೆ ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ಗುಣಮಟ್ಟದ ಬಗ್ಗೆ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ, ಆಹಾರ ತಯಾರಿಕೆ, ಪೂರೈಕೆ ವಿಚಾರದಲ್ಲಿ ಹೊಸ ವ್ಯವಸ್ಥೆ ರೂಪಿಸಲು ಚರ್ಚೆಗಳು ನಡೆಯುತ್ತಿವೆ. ಈ ಸಂಬಂಧ ಇಸ್ಕಾನ್ ಸಂಸ್ಥೆಯೊಂದಿಗೆ ಮಾತುಕತೆ ನಡೆದಿದ್ದು, ಸಮರ್ಪಕ ಗುಣಮಟ್ಟದ ಆಹಾರ ಪೂರೈಕೆಗೆ ಸಹಕಾರದ ಬಗ್ಗೆ ಚರ್ಚಿಸಲಾಗಿದೆ. ಆದರೆ, ಇಸ್ಕಾನ್ ಸಂಸ್ಥೆ ಊಟದ ದರ ಹೆಚ್ಚಳಕ್ಕೆ ಬೇಡಿಕೆ ಇಟ್ಟಿರುವುದರಿಂದ, ದರ, ಗುಣಮಟ್ಟದ ಸಮತೋಲನ ಸಾಧಿಸುವುದು ಜಿಬಿಎ ಮುಂದೆ ಸವಾಲಾಗಿದೆ.

ಒಂದು ಕಡೆ ಸಾಮಾಜಿಕ ನ್ಯಾಯದ ಹೆಜ್ಜೆ ಮತ್ತೊಂದು ಕಡೆ ಗುಣಮಟ್ಟದ ಆಹಾರ ಒದಗಿಸುವ ಸವಾಲು. ಇಂದಿರಾ ಕ್ಯಾಂಟೀನ್‌ಗಳ ಮೂಲಕ ಬಡಜನರಿಗೆ ಅಗ್ಗದ ದರದಲ್ಲಿ ಆಹಾರ ಒದಗಿಸುವ ಜೊತೆಗೆ, ವಿಶೇಷ ಚೇತನರಿಗೆ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಜಿಬಿಎ ಹೊಸ ಮಾದರಿ ರೂಪಿಸಲು ಮುಂದಾಗಿದೆ. ಈ ಪ್ರಯತ್ನ ಯಶಸ್ವಿಯಾದರೆ, ಇಂದಿರಾ ಕ್ಯಾಂಟೀನ್‌ಗಳು ಕೇವಲ ಅನ್ನದಾಸೋಹ ಕೇಂದ್ರಗಳಲ್ಲ. ಸಾಮಾಜಿಕ ಒಳಗೊಳ್ಳುವಿಕೆಯ ಪ್ರತೀಕ ಆಗಲಿವೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ.

## ಅಕ್ಕ ಸಂಸ್ಥೆಯ 25ನೇ ವರ್ಷದ ರಜತ ಮಹೋತ್ಸವ

• ಉದಯವಾಹಿನಿ, ಬೆಂಗಳೂರು




ಸೆಪ್ಟೆಂಬರ್ 4 ರಿಂದ 6, ರವರೆಗೆ ಅಮೆರಿಕದ ಫಿಲಡೆಲ್ಫಿಯಾ ನಗರದಲ್ಲಿ ಅಕ್ಕ ಸಂಸ್ಥೆಯ 25ನೇ ವರ್ಷದ ರಜತ ಮಹೋತ್ಸವ ಅದ್ದೂರಿಯಾಗಿ ನಡೆಯಲಿದೆ. ಅಮೆರಿಕದ ಕನ್ನಡಿಗರ ಅತೀ ದೊಡ್ಡ ಸಂಘಟನೆಯಾದ ಅಕ್ಕ ಸಂಸ್ಥೆ ಕಳೆದ 25 ವರ್ಷಗಳಿಂದ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ, ಕನ್ನಡ ಸೇವೆಯನ್ನು ಉತ್ತೇಜಿಸುವ ಮಹತ್ವದ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದೆ.

ಈ ಬೆಳ್ಳಿ ಹಬ್ಬದ ಸಂಭ್ರಮವು ವಿಶ್ವದ ಕನ್ನಡಿಗರ ಏಕತೆಯ ಪ್ರತೀಕವಾಗಿದ್ದು, ಅಮೆರಿಕಾದ ವಿವಿಧ ರಾಜ್ಯಗಳಿಂದ ಹಾಗೂ ಕರ್ನಾಟಕ ಸೇರಿದಂತೆ ಅನೇಕ ಕಡೆಗಳಿಂದ ಕನ್ನಡಾಭಿಮಾನಿಗಳು ಭಾಗವಹಿಸಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾಣಿಜ್ಯ, ಉದ್ಯಮಿಗಳ ಸಮ್ಮೇಳನ, ವಿಶೇಷ ಪ್ರದರ್ಶನ ಮಳಿಗೆಗಳು, ಕನ್ನಡ ಸಿನಿಮಾಗಳು, ನಾಟಕಗಳ ಪ್ರದರ್ಶನ ಸೇರಿದಂತೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮಿಕೊಳ್ಳಲಾಗಿದೆ. ಅಕ್ಕ ಸಂಸ್ಥೆಯ ರಜತ ಮಹೋತ್ಸವ ಕಾರ್ಯಕ್ರಮವು ಕೇವಲ ಒಂದು ಉತ್ಸವವಲ್ಲ. ಇದು 25 ವರ್ಷಗಳ ಸಾಧನೆ, ಸಮರ್ಪಣೆ, ಕನ್ನಡಿಗರ ಏಕತೆಯ ಸಂಭ್ರಮವಾಗಿದೆ.

ಈ ಐತಿಹಾಸಿಕ ಸಮಾರಂಭಕ್ಕೆ ವಿಶ್ವದ ವಿವಿಧ ಭಾಗಗಳ ಕನ್ನಡಿಗರು, ಕರ್ನಾಟಕದ ಕಲಾಭಿಮಾನಿಗಳು ಆಗಮಿಸಲಿದ್ದು, ಎಲ್ಲರನ್ನು ಆತೀಯವಾಗಿ ಆಹ್ವಾನಿಸಲಾಗಿದೆ. ಕಾರ್ಯಕ್ರಮದ ದಿನಾಂಕ ನಿಗದಿಯಾಗಿದ್ದು, ಇನ್ನೂ ಕೆಲವೇ ದಿನಗಳಲ್ಲಿ ಕಾರ್ಯಕ್ರಮದ ರೂಪುರೇಷೆ ನೋಂದಣಿ ವಿವರಗಳನ್ನು ಪ್ರಕಟಿಸಲಾಗುವುದು ಎಂದು ಅಕ್ಕ ಸಂಸ್ಥೆಯ ಅಧ್ಯಕ್ಷರಾದ ಮಧುರಂಗಯ್ಯ ತಿಳಿಸಿದ್ದಾರೆ.

## ಒಂದು ವೋಟು ಕೊಡಿ ಒಂದು ನೋಟು ಕೊಡಿ ಅಭಿಯಾನ

• ಉದಯವಾಹಿನಿ, ಆನೇಕಲ್

ಪಟ್ಟಣದಲ್ಲಿ ಬಿಎಸ್‌ಪಿ ಆನೇಕಲ್ ವಿಧಾನಸಭಾ ಕ್ಷೇತ್ರ ಘಟಕದಿಂದ ಒಂದು ವೋಟು ಕೊಡಿ ಒಂದು ನೋಟು ಕೊಡಿ ಅಭಿಯಾನದ ಮೂಲಕ ಪಕ್ಷದ ಸಂಘಟನೆಗೆ ಚಾಲನೆ ನೀಡಲಾಯಿತು. ಬಿಎಸ್‌ಪಿ ಆನೇಕಲ್ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಕೆ.ಯಲ್ಲಪ್ಪ ಮಾತನಾಡಿ, ರಾಜ್ಯದ ಜನತೆ ಬದಲಾವಣೆ ಬಯಸಿದ್ದಾರೆ. ಕಾಂಗ್ರೆಸ್, ಬಿಜೆಪಿ, ಜನತಾದಳ ಮೂರು ಪಕ್ಷಗಳ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ. ಹಾಗಾಗಿ ಈ ಬಾರಿ ಬಿಎಸ್‌ಪಿಗೆ ಉತ್ತಮ ವಾತಾವರಣವಿದ್ದು ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷವನ್ನು ಸಂಘಟಿಸಲು ಒಂದು ವೋಟು ಕೊಡಿ ಒಂದು ನೋಟು ಕೊಡಿ ಅಭಿಯಾನ ಆಯೋಜಿಸಲಾಗಿದೆ ಎಂದರು.

ಪಕ್ಷ ಸಂಘಟಿಸಲು ಆರ್ಥಿಕ ಸಂಪನ್ಮೂಲದ ಅವಶ್ಯಕತೆ ಹೆಚ್ಚಿದೆ. ಬಡವರ ಪಕ್ಷವಾಗಿದ್ದು ಜನರಿಂದ ಒಂದು ವೋಟು, ಒಂದು ನೋಟು ಪಡೆದು ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಲಾಗುವುದು. ಮುಂದಿನ ದಿನಗಳಲ್ಲಿ ಕಾರ್ಯಕರ್ತರು ಸಭೆ ಸೇರಿದಂತೆ ವಿವಿಧ ಸಂಘಟನಾತ್ಮಕ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

## ಅಂಬೇಡ್ಕರ್ ನಿಗಮದ ವಿರುದ್ಧ ಸುಳ್ಳು ಆರೋಪ

• ಉದಯವಾಹಿನಿ, ಬೆಂಗಳೂರು



ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಅವ್ಯವಹಾರಗಳು ನಡೆದಿಲ್ಲ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಸತ್ಯಭಾಮ ಸಿ. ಸ್ಪಷ್ಟನೆ ನೀಡಿದ್ದಾರೆ.

ನಿಗಮದಲ್ಲಿ ಹಗರಣಗಳನ್ನು ಮಾಡಿ ಅಂಬೇಡ್ಕರ್ ಹೆಸರಿಗೆ ವ್ಯವಸ್ಥಾಪಕ ನಿರ್ದೇಶಕರು ಮಸಿ ಬಳಿಯುತ್ತಿದ್ದಾರೆ ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಆರೋಪಿಸಿದ್ದರು ಇದಕ್ಕೆ ಸತ್ಯಭಾಮ ಅವರು ಸುದೀರ್ಘವಾದ ಸ್ಪಷ್ಟನೆ ನೀಡಿದ್ದಾರೆ. ಎಲ್ಲಾ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ವಿವರಣೆಯನ್ನು ಮೂರು ದಿನಗಳ ಒಳಗೆ ನೀಡುವಂತೆ ವೆಂಕಟಸ್ವಾಮಿ ಅವರಿಗೆ ಜ್ಞಾಪನ ಪತ್ರ ಕಳುಹಿಸಿದ್ದಾರೆ.

ಪ್ರಧಾನ ವ್ಯವಸ್ಥಾಪಕರಾದ ಸರಸ್ವತಿ ಅವರ ಮೇಲೆ ಮಾಡಿರುವ ಆರೋಪಗಳೂ ಸುಳ್ಳು.ಅಲ್ಲದೇ ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿದ್ದ ಶ್ರೀಧರ ಮೂರ್ತಿ ಅವರನ್ನು ಪೂರ್ವಾನುವ ಪಡೆಯದೇ ತರಾತುರಿಯಲ್ಲಿ ಬಿಡುಗಡೆ ಮಾಡಲಾಗಿದೆ ಎಂಬ ಆರೋಪ ಕೂಡ ಆಧಾರ ರಹಿತವಾಗಿದೆ.


ಕರ್ತವ್ಯ ನಿರ್ಲಕ್ಷ್ಯ, ಬೇಜವಾಬ್ದಾರಿ, ವಿಳಂಬ ನೀತಿ ತೋರಿದ್ದರಿಂದ ಅವರನ್ನು ನಿಯಮಾನುಸಾರವಾಗಿ ನಿಯೋಜನೆಯಿಂದ ಮುಕ್ತಗೊಳಿಸಿ ಅವರನ್ನು ಮಾತೃ ಇಲಾಖೆಗೆ ವಾಪಸ್‌ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಹಣ ವರ್ಗಾವಣೆ ಮಾಡಲು ನಿರಾಕರಿಸಿದ್ದಕ್ಕಾಗಿ ಬೇರೆ ಕಾರಣ ನೀಡಿ ಲೆಕ್ಕ ಸಹಾಯಕ ಫಣಿರಾಜು ಅವರನ್ನು ಅಮಾನತು ಮಾಡಲಾಗಿದೆ ಎಂಬ ಆರೋಪವೂ ನಿರಾಧಾರ. ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿರುವುದರಿಂದ ಲೋಕಾಯುಕ್ತದ ಬಳ್ಳಾರಿ ಜಿಲ್ಲಾಧಿಕಾರಿಗಳ ಸೂಚನೆ ಅಂತೆ ಅಮಾನತು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ಮೈಸೂರು ಸಿಲ್ಕ್ ಸಂಸ್ಥೆ ಮುಚ್ಚಿದರೆ ಉಗ್ರ ಹೋರಾಟ

• ಉದಯವಾಹಿನಿ, ಬೆಂಗಳೂರು

ಕನ್ನಡ ನಾಡಿನ ಹೆಮ್ಮೆಯ ಮೈಸೂರು ಸಿಲ್ಕ್ ಸಂಸ್ಥೆಯನ್ನು ಮುಚ್ಚಲು ಮುಂದಾದರೆ ಸರ್ಕಾರದ ವಿರುದ್ಧ ಬೀದಿಗಿಳಿದು ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ರಾಜ್ಯ ಸರ್ಕಾರಕ್ಕೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಎಚ್ಚರಿಕೆ ಕೊಟ್ಟಿದ್ದಾರೆ. ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಮೈಸೂರು ಸಿಲ್ಕ್ ಎನ್ನುವುದು ಕನ್ನಡಿಗರ ಪಾಲಿಗೆ ಕೇವಲ ಒಂದು ವಸ್ತ್ರವಲ್ಲ, ಅದು ನಮ ಸ್ವಾಭಿಮಾನದ ಶಕ್ತಿ. ಈ ಸಂಸ್ಥೆಯನ್ನು ಉಳಿಸಲು, ನೇಕಾರರ ಹಿತ ಕಾಯಲು ಬಿಜೆಪಿ ಉಗ್ರ ಹೋರಾಟ ನಡೆಸಲಿದೆ ಎಂದು ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ! ಎಂಧು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕನ್ನಡಿಗರ ಅಸಿತೆ, ಮೈಸೂರು ಮಹಾರಾಜರು ನೀಡಿದ ಕೊಡುಗೆ, ವಿಶ್ವವಿಖ್ಯಾತ 'ಮೈಸೂರು ಸಿಲ್ಕ್' ಶುಕ್ರವಾರ ಈ ಅಸಮರ್ಥ, ನಾಲಾಯಕ್ ಕಾಂಗ್ರೆಸ್ ಸರ್ಕಾರದ ದುರಾಡಳಿತದ ಪರಿಮಾಣವಾಗಿ ಮುಚ್ಚುವ ಪರಿಸ್ಥಿತಿ ಎದುರಾಗಿದೆ.



ಮೈಸೂರು ಸಿಲ್ಕ್ ಎಂಬ ಈ ಪರಂಪರೆ ಕನ್ನಡಿಗರ ಪಾಲಿನ ಭಾವನೆ ಮಾತ್ರವಲ್ಲ, ಸಾವಿರಾರು ಕುಟುಂಬಗಳ ಬದುಕು. ಆದರೆ ಈ ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ಪರಂಪರೆಯ ಬೆಲೆಯೂ ಗೊತ್ತಿಲ್ಲ, ರೈತರ ನೋವೂ ಅರ್ಥವಾಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ. ಮೈಸೂರು ರೇಷ್ಮೆ ನಂಬಿ ಬದುಕುತ್ತಿರುವ ಸಾವಿರಾರು ನೇಕಾರರ ಕುಟುಂಬಗಳು ಇಂದು ಆತಂಕದಲ್ಲಿವೆ. ರೇಷ್ಮೆ ಬೆಳೆಗಾರರಿಗೆ ಸಿಗಬೇಕಾದ ಪ್ರೋತ್ಸಾಹದ ಧನ ಎಲ್ಲಿ? ನೇಕಾರರ ಶ್ರಮಕ್ಕೆ ಬೆಲೆ ಎಲ್ಲಿ ಕೆ.ಎಸ್.ಐ.ಸಿ ಸಂಸ್ಥೆಯನ್ನು ವ್ಯವಸ್ಥಿತವಾಗಿ ಹಳ್ಳ ಹಿಡಿಸುತ್ತಿರುವುದು ಯಾರ ಲಾಭಕ್ಕಾಗಿ ಗ್ಯಾರಂಟಿ ಹೆಸರಲ್ಲಿ ಬೊಕ್ಕಸ ಖಾಲಿ ಮಾಡಿ, ಈಗ ನಮ್ಮ ಹೆಮ್ಮೆಯ ಸಾರ್ವಜನಿಕ ಉದ್ಯಮಗಳನ್ನು ಮಾರಾಟಕ್ಕಿಟ್ಟಿದ್ದೀರಾ? ಎಂದು ಪ್ರಶ್ನೆ ಮಾಡಿದ್ದಾರೆ.

> **ಮೈಸೂರು ಸಿಲ್ಕ್ ಎಂಬುದು ಕೇವಲ ಬ್ರ್ಯಾಂಡ್ ಅಲ್ಲ, ಅದು ಕನ್ನಡ ನಾಡಿನ ಮಣ್ಣಿನ ಗುಣ. ಈ ಪರಂಪರೆ ಅನ್ನು ಉಳಿಸುವ ಯೋಗ್ಯತೆ ನಿಮಗೆ ಇಲ್ಲದಿದ್ದರೆ, ಅಧಿಕಾರ ಬಿಟ್ಟು ತೊಲಗಿ. ಸಿಎಂ ಸಿದ್ದರಾಮಯ್ಯ ಅವರಿಗೆ ನಾನಾ ಎಚ್ಚರಿಕೆ. ನೆನಪಿರಲಿ, ನಮ್ಮ ನಾಡಿನ ಹೆಮ್ಮೆಯ ಪರಂಪರೆಯನ್ನು ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಕ್ಕೆ, ಅಸಮರ್ಥತೆಗೆ ಆಹುತಿ ಕೊಡಲು ನಾವು ಬಿಡುವುದಿಲ್ಲ.**
> **- ಆರ್.ಅಶೋಕ್, ವಿರೋಧ ಪಕ್ಷದ ನಾಯಕ**

## ನಿಮ್ಹಾನ್ಸ್: ವಸ್ತು ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ರಾಷ್ಟ್ರೀಯ ವಿಜ್ಞಾನದ ದಿನದ ಅಂಗವಾಗಿ ಮಾರ್ಚ್ 3 ಮತ್ತು 4 ರಂದು ನಿಮ್ಹಾನ್ಸ್ ಕನ್ವೆನ್ಸನ್ ಸೆಂಟರ್‌ನಲ್ಲಿ ಎರಡು ದಿನಗಳ ವಸ್ತು ಪ್ರದರ್ಶನ ಹಮ್ಮಿಕೊಂಡಿದೆ. ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಈ ಪ್ರದರ್ಶನ ನಡೆಯಲಿದೆ. ಸಂವಾದ, ಮಾದರಿಗಳ ಪ್ರಾತ್ಯಕ್ಷಿಕೆ, ರಸಪ್ರಶ್ನೆ ಸ್ಪರ್ಧೆ, ಮನಸ್ಸಿನ ಆಟ ಸೇರಿ ವಿವಿಧ ಚಟುವಟಿಕೆಗಳನ್ನು ಈ ಪ್ರದರ್ಶನ ಒಳಗೊಳ್ಳಲಿದೆ. ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ವೈದ್ಯರು, ವಿಜ್ಞಾನಿಗಳು, ಸಂಶೋಧಕರು, ವೈದ್ಯಕೀಯ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ.

ಮನೋವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಬೆಳವಣಿಗೆಗಳನ್ನು ತಿಳಿಯಲು ಇದು ಉತ್ತಮ ಅವಕಾಶವಾಗಿದೆ. ಮಾನವನ ನೈಜ ಮಿದುಳು ಸ್ಪರ್ಶಿಸಬಹುದಾಗಿದೆ. ಪ್ರವೇಶ ಉಚಿತ ಇರಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

## ಜಿ.ಪಂ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣ
# ವಿನಯ್ ಕುಲಕರ್ಣಿಗೆ ಜಾಮೀನು

• ಉದಯವಾಹಿನಿ, ಬೆಂಗಳೂರು



ಧಾರವಾಡ ಬಿಜೆಪಿ ಮುಖಂಡ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಹಲವು ತಿಂಗಳ ಜೈಲು ವಾಸದ ಬಳಿಕ ಸುಪ್ರೀಂಕೋರ್ಟ್ ಜಾಮೀನು ಮಂಜೂರು ಮಾಡಿದೆ. ವಿನಯ್ ಕುಲಕರ್ಣಿ ವಿರುದ್ಧ ದಾಖಲಾಗಿದ್ದ ಈ ಪ್ರಕರಣದಲ್ಲಿ ಜಾಮೀನು ರದ್ದಾದ ಹಿನ್ನೆಲೆಯಲ್ಲಿ ಅವರು ಇತ್ತೀಚೆಗೆ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಶರಣಾಗಿದ್ದರು. ಬಳಿಕ ಸುಪ್ರೀಂ ಕೋರ್ಟ್‌ಗೆ ಮೇಲನವಿ ಸಲ್ಲಿಸಿದ್ದರು.

ಈ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಸಂಜಯ್ ಕರೋಲ್ ಅವರಿದ್ದ ಪೀಠವು ಜಾಮೀನು ಮಂಜೂರು ಮಾಡಿದೆ. ಕುಲಕರ್ಣಿ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ ವಾದ ಮಂಡಿಸಿ, ಈಗಾಗಲೇ ಸಾಕ್ಷ್ಯಗಳ ದಾಖಲಾತಿ ಬಹುತೇಕ ಮುಕ್ತಾಯಗೊಂಡಿದೆ. ಈ ಹಂತದಲ್ಲಿ ಯಾವುದೇ ರೀತಿಯ ಸಾಕ್ಷ್ಯನಾಶ ಸಾಧ್ಯವಿಲ್ಲ.

ಆದ್ದರಿಂದ ಜಾಮೀನು ನೀಡಲು ಅಡ್ಡಿಯಿಲ್ಲ. ಈ ಹಂತದಲ್ಲಿ ಸಾಕ್ಷ್ಯ ನಾಶವಾಗಲಿ, ಸಾಕ್ಷ್ಯಗಳ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ಪ್ರಕರಣದ ಇತರ ಆರೋಪಿಗಳಿಗೆ ಈಗಾಗಲೇ ಜಾಮೀನು ನೀಡಲಾಗಿದೆ. ವಿನಯ್ ಕುಲಕರ್ಣಿ ಅವರಿಗೆ ಜಾಮೀನು ನೀಡಿದರೆ ತೊಂದರೆ ಇಲ್ಲ ಎಂದು ಮನವರಿಕೆ ಮಾಡಿಕೊಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾ. ಸಂಜಯ್ ಕರೋಲ್, ವಿನಯ್ ಕುಲಕರ್ಣಿ ಪ್ರಕರಣದ ಪ್ರಮುಖ ಆರೋಪಿ, ಆದಾಗ್ಯೂ ಸಾಕ್ಷ್ಯಗಳ ವಿಚಾರಣೆ ಮುಕ್ತಾಯವಾಗಿರುವ ಹಿನ್ನೆಲೆ ಜಾಮೀನು ನೀಡಬಹುದು ಎಂದು ಹೇಳಿದರು. ವಾದ ಪ್ರತಿವಾದಗಳನ್ನು ಆಲಿಸಿದ ಬಳಿಕ ನ್ಯಾಯಾಲಯ ಜಾಮೀನು ಮಂಜೂರಿಗೆ ಆದೇಶಿಸಿತು.

ಅಲ್ಲದೇ ಇನ್ನೆರಡು ತಿಂಗಳಲ್ಲಿ ವಿಚಾರಣೆ ಆರಂಭಿಸಲು ವಿಚಾರಣಾ ನ್ಯಾಯಲಯಕ್ಕೆ ನಿರ್ದೇಶನ ನೀಡಿತು. ಈ ಹಂತದಲ್ಲಿ ಸಿಬಿಐ ವಕೀಲರು ಆಕ್ಷೇಪ ವ್ಯಕ್ತಪಡಿಸಿ, . ಮತ್ತೊಂದು ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಭಾಗಿಯಾಗಿದ್ದಾರೆ ಎಂದು ಆಕ್ಷೇಪಿಸಿದರು. ಆದರೆ, ಸುಪ್ರೀಂ ಕೋರ್ಟ್ ಸಿಬಿಐ ಪರ ವಕೀಲರ ಆಕ್ಷೇಪವನ್ನು ಬದಿಗಿಟ್ಟಿತು. ಸದ್ಯ ಪ್ರಕರಣ ಮುಕ್ತಾಯ ಹಂತದಲ್ಲಿದ್ದು, ಆರೋಪಿಗಳ ಹೇಳಿಕೆ ದಾಖಲಾಗುತ್ತಿದೆ.

ವಕೀಲರ ಕೊನೆಯ ಹಂತದ ವಾದ ಇನ್ನೂ ಬಾಕಿಯಿದೆ. ಪ್ರಕರಣದ ಸಾಕ್ಷಿಗಳಿಗೆ ಬೆದರಿಕೆ ಹಾಕಿದ ಆರೋಪದಡಿ ವಿನಯ್ ಕುಲಕರ್ಣಿ ಅವರ ಜಾಮೀನು ರದ್ದು ಮಾಡುವಂತೆ ಸಿಬಿಐ ಮನವಿ ಮಾಡಿತ್ತು. ಶಾಸಕ ವಿನಯ ಕುಲಕರ್ಣಿಗೆ ಜಾಮೀನು ಸಿಕ್ಕ ಹಿನ್ನೆಲೆ ಧಾರವಾಡದಲ್ಲಿ ಬೆಂಬಲಿಗರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದ್ದಾರೆ. ಡಿಸಿ ಕಚೇರಿ ಎದುರು ವಿನಯ್ ಪರ ಘೋಷಣೆ ಕೂಗಿದರು.

## ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

• ಉದಯವಾಹಿನಿ, ಬೆಂಗಳೂರು

**ನಕಲು ತಡೆಗೆ ಕ್ರಮ**

ರಾಜ್ಯದಲ್ಲಿ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಲಿದ್ದು, ಈ ವೇಳೆ ಯಾವುದೇ ರೀತಿಯ ಅಕ್ರಮ ನಡೆಯದಂತೆ ಪರೀಕ್ಷಾ ಮಂಡಳಿ ಹದ್ದಿನ ಕಣ್ಣಿಟ್ಟಿದೆ. ಮಾ.17ರವರೆಗೆ ಪರೀಕ್ಷೆ ನಡೆಯಲಿದ್ದು, 7,10,363 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ರಾಜ್ಯಾದ್ಯಂತ 1,217 ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಪರೀಕ್ಷೆ ನಡೆಯಲಿದೆ.

ಹೀಗಾಗಿ ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟೆಚ್ಚರ, ಸೋಶಿಯಲ್ ಮೀಡಿಯಾದ ಮೇಲೂ ಬೋರ್ಡ್ ಕಣ್ಣಿಟ್ಟಿದೆ ಜತೆಗೆ ಪೇಪರ್ ಸೋರಿಕೆ ಆಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಲಾಗಿದೆ. ಪ್ರಶ್ನೆಪತ್ರಿಕೆ ರವಾನೆಗೂ ಬಿಗಿ ಭದ್ರತೆ ವಹಿಸಲಾಗಿದೆ. ಪರೀಕ್ಷೆ ನಡೆಯೋ ದಿನದಿಂದ ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಕಂಪ್ಯೂಟರ್ ಶಾಪ್ ಬಂದ್ ಮಾಡಲು ಸೂಚಿಸಲಾಗಿದೆ. ಹಿಂದಿನ ಪರೀಕ್ಷೆಗಳಲ್ಲಿ ಅಕ್ರಮದಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಮೇಲೆ ಪೊಲೀಸ್ ಇಲಾಖೆಯಿಂದ ವಿಶೇಷ ನಿಗಾ. ಪರೀಕ್ಷೆ ನಡೆಯೋ ಎಲ್ಲಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ ಮಾಡಲಾಗಿದೆ. ಸುಳ್ಳು ಸುದ್ದಿ ಹರಡಿಸೋ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲು ಪೊಲೀಸ್ ಇಲಾಖೆ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ.

ಇಡೀ ಪರೀಕ್ಷಾ ವ್ಯವಸ್ಥೆ ಮಾನಿಟರ್ ಮಾಡಲು ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ, ಪ್ರತಿ ಜಿಲ್ಲೆಯ ಡಿಸಿಗಳು, ಎಸ್ಪಿಗಳು ಮಾನಿಟರ್ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರಶ್ನೆಪತ್ರಿಕೆ ಖಜಾನೆಯಿಂದ ಕೇಂದ್ರಗಳಿಗೆ ಹೋಗುವಾಗ ಬಿಗಿ ಪೊಲೀಸ್ ಭದ್ರತೆ, ಪ್ರಶ್ನೆಪತ್ರಿಕೆ ರವಾನೆ ವಿಡಿಯೋ ಚಿತ್ರೀಕರಣದ ವ್ಯವಸ್ಥೆ ಮಾಡಲಾಗುತ್ತದೆ. ನಿಗದಿ ಮಾಡಿದ ಸಮಯಕ್ಕಿಂತ ಮೊದಲು ಪ್ರಶ್ನೆಪತ್ರಿಕೆ ಖಜಾನೆಯಿಂದ ಓಪನ್ ಮಾಡುವಂತೆ ಇಲ್ಲ. ಅಂತಹ ಘಟನೆ ನಡೆದರೆ ಜವಾಬ್ದಾರಿ ಕೊಟ್ಟಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಪ್ರಶ್ನೆಪತ್ರಿಕೆ ಜವಾಬ್ದಾರಿ ವಹಿಸಿರುವವರು ಅಕ್ರಮದಲ್ಲಿ ಶಾಮೀಲಾದರೆ ಕಾನೂನು ಕ್ರಮದ ಎಚ್ಚರಿಕೆ ನೀಡಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿಗಳು, ಅಧಿಕಾರಿಗಳಿಗೆ ಸಂಪೂರ್ಣ ಫೋನ್ ನಿಷೇಧ. ಪರೀಕ್ಷೆಗಳಿಗೆ ವಾಚ್ ಸೇರಿದಂತೆ ಉಪಕರಣಗಳನ್ನು ಕೇಂದ್ರ ನಿಷೇಧಿಸಲಾಗಿದೆ.

## ಬೆಂಗಳೂರಿನಲ್ಲಿ 1ಕೋಟಿ ಮೌಲ್ಯದ ಡ್ರಗ್ಸ್‌ಜಪ್ತಿ

• ಉದಯವಾಹಿನಿ, ಬೆಂಗಳೂರು

ಕೇರಳ ರಾಜ್ಯದ ಮಾದಕ ದ್ರವ್ಯ ವಿರೋಧಿ ವಿಶೇಷ ಕಾರ್ಯಪಡೆ ನಗರದ ಎಲೆಕ್ಟ್ರಾನಿಕ್ ಸಿಟಿ ಬಳಿಯ ಲೇಔಟ್‌ವೊಂದರ ಮನೆ ಮೇಲೆ ದಾಳಿ ನಡೆಸಿ 1 ಕೋಟಿ ಮೌಲ್ಯದ 2 ಕೆ.ಜಿ.ಎಂಡಿಎಂ ಪತ್ತೆ ಮಾಡಿದೆ. ವಿದೇಶದಿಂದ ಮಾದಕ ವಸ್ತು ತರಿಸಿಕೊಂಡು ಮಾರಾಟ ಮಾಡುತ್ತಿದ್ದ ಆರೋಪಿ ಧೀರೇಶ್ ಕುಟುಮ್ ಎಂಬಾತನನ್ನು ಕೇರಳ ಪೊಲೀಸರು ಬಂಧಿಸಿದ್ದಾರೆ. ಆರೋಪಿ ಅಸ್ಸಾಂ ರಾಜ್ಯದವನಾಗಿದ್ದು, ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ರಮೇಶ್ ರೆಡ್ಡಿ ಲೇಔಟ್‌ನಲ್ಲಿ ವಾಸವಾಗಿದ್ದ. ನಗರದಿಂದಲೇ ವಿವಿಧ ರಾಜ್ಯಗಳಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ಪಡೆದ ಕೇರಳ ಪೊಲೀಸ್ ಅಧಿಕಾರಿ ಸತ್ಯಜಿತ್ ನೇತೃತ್ವದ ತಂಡ ದಾಳಿ ನಡೆಸಿದೆ. ದಾಳಿ ವೇಳೆ ಆರೋಪಿಯ ಮನೆಯಲ್ಲಿ 4 ಪ್ಯಾಕೆಟ್‌ಗಳಲ್ಲಿ ಡ್ರಗ್ಸ್ ಪತ್ತೆಯಾಗಿದೆ. ಪೊಲೀಸರಿಗೆ ಅನುಮಾನ ಬಾರದ ರೀತಿಯಲ್ಲಿ ಮಕ್ಕಳು ಸೇವಿಸುವ ಆಹಾರ ಸೆರೆಲಾಕ್ ಪ್ಯಾಕೆಟ್‌ಗಳ ಒಳಗೆ ಮಾದಕ ವಸ್ತುವನ್ನು ಅಡಗಿಸಿದ್ದ. ಮನೆಯಲ್ಲಿ 15ಕ್ಕೂ ಹೆಚ್ಚು ಖಾಲಿ ಸೆರೆಲಾಕ್ ಕವರ್‌ಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಔಷಧಿಗಳ ಕವರ್‌ನಲ್ಲಿ ಮಾದಕ ವಸ್ತು ಸಾಗಣೆ ಮಾಡುತ್ತಿದ್ದ ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.

### ಎನ್ ಎಸ್ ಸುಬ್ಬಾರೆಡ್ಡಿ ಶಾಸಕ ಸ್ಥಾನ ಅಸಿಂಧು ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ; ಸದ್ಯಕ್ಕೆ ನಿರಾಳ
# ಕಾಂಗ್ರೆಸ್ ಶಾಸಕ ಸುಬ್ಬಾರೆಡ್ಡಿಗೆ ಸಿಕ್ಕಿದೆ ರಿಲೀಫ್

• ಉದಯವಾಹಿನಿ, ಬೆಂಗಳೂರು



ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್ ಎಸ್ ಸುಬ್ಬಾರೆಡ್ಡಿ ಶಾಸಕ ಸ್ಥಾನವನ್ನು ಹೈಕೋರ್ಟ್ ಅನರ್ಹಗೊಳಿಸಿತ್ತು. ಆದರೆ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿದೆ. ಈ ಮೂಲಕ ಸುಬ್ಬಾರೆಡ್ಡಿ ಸದ್ಯಕ್ಕೆ ನಿರಾಳರಾಗಿದ್ದಾರೆ. ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿ ಹೈಕೋರ್ಟ್ ಮಾಡಿದ್ದ ಆದೇಶವನ್ನು ಪ್ರಶ್ನಿಸಿ ಶಾಸಕ ಸುಬ್ಬಾರೆಡ್ಡಿ ಸುಪ್ರೀಂಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಈ ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್ ಮಲ್ಯ ಬಾಗ್ಚಿ ಪೀಠವು ಶುಕ್ರವಾರ ವಿಚಾರಣೆ ನಡೆಸಿದೆ. ವಿಚಾರಣೆಯ ಬಳಿಕ ಪೀಠವು ಮಧ್ಯಂತರ ತಡೆ ನೀಡಿದೆ. ಎದುರಾಳಿ ಅರ್ಜಿದಾರ, ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ವ್ಯಕ್ತಿಗಳಿಗೆ ಅಫಿಡವಿಟ್, ಕೌಂಟರ್ ಅಫಿಡವಿಟ್ ಸಲ್ಲಿಸಲು 6 ವಾರಗಳ ಕಾಲಾವಕಾಶವನ್ನು ನೀಡಲಾಗಿದೆ.

**ಏನಿದು ಪ್ರಕರಣ:** ಕಾಂಗ್ರೆಸ್ ಶಾಸಕ ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಬೇಕು, ನನ್ನನ್ನು ವಿಜೇತ ಅಭ್ಯರ್ಥಿ ಎಂದು ಘೋಷಣೆ ಮಾಡಬೇಕು ಎಂದು ಬಿಜೆಪಿಯ ಪರಾಜಿತ ಅಭ್ಯರ್ಥಿ ಸಿ. ಮುನಿರಾಜು ಅವರು ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿದ್ದರು. ಇದನ್ನು ಹೈಕೋರ್ಟ್ ಏಕಸದಸ್ಯ ಪೀಠ ಭಾಗಶಃ ಪುರಸ್ಕರಿಸಿತ್ತು. ಫೆಬ್ರವರಿ 16 ರಂದು ಶಾಸಕ ಸ್ಥಾನ ಅಹಿಂಧುಗೊಳಿಸಿ ಆದೇಶ ಹೊರಡಿಸಿತ್ತು. 202ರ ಚುನಾವಣೆಯಲ್ಲಿ ಶಾಸಕ ಸುಬ್ಬಾರೆಡ್ಡಿ ಬಾಗೇಪಲ್ಲಿ ಕ್ಷೇತ್ರದಿಂದ ಸ್ಪರ್ಧಿಸಿ 82,128 ಮತಗಳನ್ನು ಪಡೆದುಕೊಂಡಿದ್ದರು. ಇ ವ' ರ'



ವಿರುದ್ಧ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಸಿ ಮುನಿರಾಜು 62,949 ಮತಗಳನ್ನು ಪಡೆದುಕೊಂಡಿದ್ದರು. ಸೋಲುಂಡ ಮುನಿರಾಜು ಅವರು 2023 ಜೂನ್ 24 ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು.

**ಆರೋಪ ಏನಿತ್ತು?:** 2023ರ ವಿಧಾನಸಭೆ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ಮಾಡುವ ಸಂದರ್ಭದಲ್ಲಿ ಸುಬ್ಬಾರೆಡ್ಡಿ ಅವರು ನಾಮಪತ್ರದ ಜೊತೆಗೆ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ತಮಗೆ ಸೇರಿದ್ದ ಸಂಪತ್ತು, ಸಾಲಗಳು, ಹೊಣೆಗಾರಿಕೆ, ಹೂಡಿಕೆ ಸೇರಿದಂತೆ ಮಹತ್ವದ ಆಸ್ತಿ ವಿವರಗಳನ್ನು ನೀಡಿಲ್ಲ ಎಂದು ಆರೋಪ ಮಾಡಲಾಗಿದೆ.

ಯಾವುದೇ ವ್ಯಕ್ತಿ ನಾಮಪತ್ರ ಸಲ್ಲಿಕೆ ಮಾಡುವಾಗ ತನ್ನ, ಪತ್ನಿಯ ಹೆಸರಿನಲ್ಲಿರುವ ಆಸ್ತಿ ವಿವರಗಳನ್ನು ಸಲ್ಲಿಕೆ ಮಾಡಬೇಕಾಗಿದೆ. ಆದರೆ ಸುಬ್ಬಾರೆಡ್ಡಿ ಅವರು ಇದ್ಯಾವುದನ್ನು ಸಲ್ಲಿಸಲಿಲ್ಲ. ಹೀಗಾಗಿ ಅವರ ಶಾಸಕ ಸ್ಥಾನವನ್ನು ಅಸಿಂಧುಗೊಳಿಸಬೇಕು ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು.

**ಆಸ್ತಿ ವಿವರಗಳನ್ನು ಸಲ್ಲಿಸಿಲ್ಲ**

**ಬಾಗೇಪಲ್ಲಿ ಶಾಸಕ ಎಸ್ ಎನ್ ಸುಬ್ಬಾರೆಡ್ಡಿ ಅವರ ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿ ಹೈಕೋರ್ಟ್ ಮಾಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದೆ. ಶುಕ್ರವಾರ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್ ಮಲ್ಯ ಬಾಗ್ಚಿ ಪೀಠವು ಈ ಆದೇಶ ಮಾಡಿದೆ. ಸುಬ್ಬಾರೆಡ್ಡಿ ಅವರು 2023 ರ ಚುನಾವಣೆಯ ಸಂದರ್ಭದಲ್ಲಿ ನಾಮಪತ್ರ ಸಲ್ಲಿಕೆ ಮಾಡುವ ಸಂದರ್ಭದಲ್ಲಿ ನೀಡಿದ್ದ ಪ್ರಮಾಣ ಪತ್ರದಲ್ಲಿ ಆಸ್ತಿ ವಿವರಗಳನ್ನು ಸಂಪೂರ್ಣವಾಗಿ ಸಲ್ಲಿಸಿಲ್ಲ ಎಂಬುವುದು ಅವರ ಮೇಲಿನ ಆರೋಪವಾಗಿದೆ.**

# ಸಾರ್ಥಕವಾದ 25 ವರ್ಷಗಳ ಸಂಕಲ್ಪ: ಸುತ್ತೂರು ಶ್ರೀಗಳಿಂದ ಶ್ಲಾಘನೆ

• ಉದಯವಾಹಿನಿ, ಗುಂಡ್ಲುಪೇಟೆ

ಕಡಬೂರು ಗ್ರಾಮಸ್ಥರ 25 ವರ್ಷಗಳ ಸಂಕಲ್ಪ ಸಾರ್ಥಕಗೊಂಡಿದೆ, ಹಿರಿಯರ ಆಶಯದಂತೆ ಶಿವಲಿಂಗ, ಗಣಪತಿ ದೇವರುಗಳ ಪ್ರತಿಷ್ಠಾಪನೆ, ಕಳಶಾರೋಹಣ ಮಹೋತ್ಸವವನ್ನ ಹರಗುರು ಚರಮೂರ್ತಿಗಳ ಸಮಕ್ಷಮದಲ್ಲಿ ನೆರವೇರಿಸಿರುವುದು ಸಂತಸಕರ ಸಂಗತಿ ಎಂದು ಸುತ್ತೂರು ವೀರಸಿಂಹಾಸನ ಮಠದ ಶ್ರೀಶಿವರಾತ್ರಿ, ದೇಶಿಕೇಂದ್ರ ಮಹಾಸ್ವಾಮಿಗಳು ನುಡಿದರು.

ತಾಲ್ಲೂಕಿನ ಕಟ್ಟಕಡೆಯ ಗ್ರಾಮವಾದ ಕಡಬೂರಿನಲ್ಲಿ ಜನಸಂಖ್ಯೆ ಕಡಿಮೆಯಿದ್ದರೂ ಸಹ ಶ್ರದ್ಧಾ ಭಕ್ತಿಯಿಂದ ಬೇಸಾಯ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಬೇಸಾಯದ ಕಡೆಗೆ



ಉದಯವಾಹಿನಿ ಚಿತ್ರ

ಆಸಕ್ತಿ ಕುಂದುತ್ತಿರುವ ಕಾಲಘಟ್ಟದಲ್ಲಿ ಕೃಷಿಯನ್ನೇ ಆಧಾರವಾಗಿರಿಸಿಕೊಂಡಿರುವ ಕಡಬೂರು ಗ್ರಾಮಸ್ಥರನ್ನ ಅಭಿನಂದಿಸಬೇಕು, ಮನುಷ್ಯ ಬೇರೆ ಯಾವುದರಿಂದಲೂ ಜೀವನ ನಡೆಸಲು ಬದುಕಲು ಸಾಧ್ಯವಿಲ್ಲ ಹಾಗೆಯೇ ಭಗವಂತನ ಸೃಷ್ಟಿಯ ಒಂದು ಅಂಶ ಕಡಿಮೆಯಾದರೂ ಸಹ ಮಾನವ ಬದುಕಲು ಸಾಧ್ಯವಿಲ್ಲ, ಭೂಮಿ ಅಲುಗಾಢಲು ಶುರುವಾದರೆ ಯಾರು ಸಹ ಜೀವಂತವಾಗಿರುವುದಿಲ್ಲ, ಉಸಿರಾಟಕ್ಕೆ ಗಾಳಿಯಷ್ಟೇ ರೈತರ ಪಾತ್ರವು ಮಹತ್ವದ್ದಾಗಿದೆ ಎಂದರು. ಗ್ರಾಮದಲ್ಲಿ ಗಣಪತಿ ದೇವಸ್ಥಾನ ನಿರ್ಮಾಣ ಮಾಡಿರುವುದು ವಿಶೇಷವಾಗಿದೆ , ಗಣಪನಿಗೆ ಬಹು ಇಷ್ಟವಾದ ಕಡಬು ಊರಿನ ಹೆಸರಲ್ಲಿದ್ದು ದೇವಸ್ಥಾನ ನಿರ್ಮಾಣ ಸೂಕ್ತವಾಗಿರುವುದರಿಂದ ಎಲ್ಲರೂ ಗ್ರಾಮಸ್ಥರನ್ನ ಅಭಿನಂದಿಸಬೇಕು ಎಂಬುದಾಗಿ ತಿಳಿಸುತ್ತಾ ಪ್ರಕೃತಿ ಹಾಗೂ ದೇವರ ಸೃಷ್ಠಿಯ ಕುರಿತಂತೆ ಮನುಷ್ಯನಿಗಿರುವ ಭಾವನೆಗಳ ಕುರಿತು ಆಶೀರ್ವಚನ ನೀಡಿದರು. ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ ಗ್ರಾಮದ ಎಲ್ಲರ ಸಹಕಾರದಿಂದ ದೇವಸ್ಥಾನವನ್ನ ಬಹಳ ಅಚ್ಚುಕಟ್ಟಾಗಿ ನಿರ್ಮಾಣ ಮಾಡಲಾಗಿದೆ, ಇಂತಹ ಧಾರ್ಮಿಕ ಕಾರ್ಯಕ್ರಮಗಳಿಂದ ಕಾಲಕಾಲಕ್ಕೆ ಮಳೆ ಬೆಳೆ ಸಮೃದ್ಧವಾಗಿದೆ, ಕೇಂದ್ರ ಸಚಿವರೂ ಗ್ರಾಮಕ್ಕೆ ಆಗಮಿಸಲು ದೇವರ ಕೃಪೆಯೇ ಕಾರಣ, ಗ್ರಾಮಸ್ಥರ ಆಹ್ವಾನವನ್ನ ತಿರಸ್ಕರಿಸದೆ ಹೇಳಿದ ಸಮಯಕ್ಕೆ ಬಂದು ದೈವ್ವ ಕೃಪೆಗೆ ಪಾತ್ರರಾಗಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನ ಅಡವೀಮಠ ಶ್ರೀಶಿವಲಿಂಗೇಂದ್ರ ಸ್ವಾಮೀಜಿಗಳು ವಹಿಸಿದ್ದರು, ಹಾಗೆಯೇ ದಿವ್ಯ ನೇತೃತ್ವ ಸೋಮಹಳ್ಳಿ ಮಠದ ಶ್ರೀ. ಸಿದ್ಧಮಲ್ಲಸ್ವಾಮಿಗಳು ಹಾಗು ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ದಿವ್ಯ ಸಮ್ಮುಖದಲ್ಲಿ ಧಾರ್ಮಿಕ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ಜರುಗಿತು.

# ರೈತರಿಗೆ 15 ಟನ್ ಎರೆಹುಳು ಗೊಬ್ಬರ ವಿತರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ಟೊಯೋಡಾ ಗೋಸಾಯ್ ಸೌತ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯು ತನ್ನ ಕಾರ್ಪೊರೇಟ್ ಹೊಣೆಗಾರಿಕೆ ವತಿಯಿಂದ ತಾಲ್ಲೂಕಿನ ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರಿಗೆ ಉಚಿತವಾಗಿ 15 ಟನ್ ಎರೆಹುಳು ಗೊಬ್ಬರ ಚೀಲಗಳನ್ನು ವಿತರಿಸಲಾಯಿತು. ಗ್ರಾಮದ ಖಾಸಗಿ ಕಲ್ಯಾಣ ಮಂಟಪ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೊಬ್ಬರ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಕಂಪನಿಯ ಉಪ ವ್ಯವಸ್ಥಾಪಕ ಮಂಜುನಾಥ್, ದೇಶದ ಬೆನ್ನೆಲುಬಾಗಿರುವ ರೈತನ ಹಿತ ಕಾಯುವುದು ಎಲ್ಲರ ಕರ್ತವ್ಯ. ಅವರ ಕೃಷಿ ಮತ್ತು ತೋಟಗಾರಿಕೆ ಚಟುವಟಿಕೆಗಳಿಗೆ ಪೂರಕವಾಗಿ ಕಂಪನಿಯಿಂದ ಗೊಬ್ಬರ ವಿತರಣೆ ಮಾಡಲಾಗಿದೆ ಎಂದರು. ಎರೆಹುಳು ಗೊಬ್ಬರ ಬಳಕೆಯಿಂದ ಉತ್ತಮವಾದ ಫಸಲು ಜೊತೆಗೆ ನೆಲದ ಫಲವತ್ತತೆ ವೃದ್ಧಿಯಾಗುತ್ತದೆ. ಗೊಬ್ಬರವನ್ನು ರೈತರು ತೆಂಗು, ಅಡಿಕೆ, ಮಾವು, ಸೀಬೆ, ದಾಳಿಂಬೆ ಮತ್ತು ಇನ್ನಿತರೆ ತೋಟಗಾರಿಕೆ ಬೆಳೆಗಳಿಗೆ ಬಳಸಬಹುದು. ಇದರಿಂದ ರೈತರು ಉತ್ತಮ ಫಸಲು ಪಡೆದು ಆರ್ಥಿಕವಾಗಿ ಸಬಲರಾಗಬಹುದು ಎಂದು ತಿಳಿಸಿದರು. ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಅರ್ಪಿತಾ ಹರೀಶ್ ಕುಮಾರ್ ಮಾತನಾಡಿ, ರೈತರಿಗೆ 15 ಟನ್ ಗೊಬ್ಬರ ನೀಡಿರುವ ಕಂಪನಿಯ ನಡೆ ಶ್ಲಾಘನೀಯ. ಸುತ್ತಮುತ್ತಲಿನ ಗ್ರಾಮಗಳ ರೈತರು ಇದರ ಪ್ರಯೋಜನ ಪಡೆಯಬೇಕು. ರಾಸಾಯನಿಕ ಬದಲು ಸಾವಯವ ಗೊಬ್ಬರ ಬಳಸಿ ಕೃಷಿ ಮಾಡಬೇಕು ಎಂದು ಸಲಹೆ ನೀಡಿದರು.

# ತಪ್ಪದ ವಾಹನ ಸವಾರರ ಪರದಾಟ

## ನಿರ್ಮಾಣಗೊಳ್ಳದ ಕುಕ್ಕರಹಳ್ಳಿ ಕೆರೆ ರೈಲ್ವೆ ಕೆಳ ಸೇತುವೆ, ಲೆವೆಲ್ ಕ್ರಾಸಿಂಗ್ ಮೇಲೆಯೇ ನಿಲ್ಲುವ ರೈಲುಗಳು

• ಉದಯವಾಹಿನಿ, ಮೈಸೂರು

ಜನಸಂಖ್ಯೆ ದ್ವಿಗುಣಗೊಂಡಂತೆ ನಗರದ ಪ್ರಮುಖ ಭಾಗಗಳಲ್ಲಿ ವಾಹನ ದಟ್ಟಣೆಯೂ ಹೆಚ್ಚಾಗುತ್ತಿದೆ. ಅದರಲ್ಲಿಯೂ ರೈಲ್ವೆ ಅಂಡರ್‌ಪಾಸ್ ಹಾಗೂ ಗೇಟ್ ಇರುವ ಭಾಗಗಳಲ್ಲಿ ಹೆಚ್ಚು ಸಮಸ್ಯೆ. ಈ ಹಿನ್ನೆಲೆಯಲ್ಲಿ ಕುಕ್ಕರಹಳ್ಳಿ ರೈಲ್ವೆ ಕ್ರಾಸಿಂಗ್‌ನಲ್ಲಿ ಕೆಳ ಸೇತುವೆ ನಿರ್ಮಾಣಕ್ಕೆ ಯೋಜನೆಯೊಂದು ಸಿದ್ಧಗೊಂಡಿದೆ. ನಗರದ ಹೃದಯ ಭಾಗದಲ್ಲಿರುವ ಕ್ರಾಫರ್ಡ್ ಹಾಲ್ ಹಾಗೂ ಕುಕ್ಕರಹಳ್ಳಿಕೆರೆ ರಸ್ತೆಯಲ್ಲಿರುವ ರೈಲ್ವೆ ಲೆವೆಲ್‌ಕ್ರಾಸಿಂಗ್ ಬಳಿ ಗೋಳು ತಪ್ಪದಾಗಿದೆ.

ಕುವೆಂಪುನಗರ, ಸರಸ್ವತಿಪುರಂ, ಕೆ.ಜಿ.ಕೊಪ್ಪಲು ಸೇರಿದಂತೆ ಪ್ರಮುಖ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಮೈಸೂರು ವಿವಿ, ಕರಾಮು ವಿವಿಯು ಇದೇ ರಸ್ತೆ ಬಳಿ ಬರುತ್ತವೆ. ರೈಲ್ವೆ ನಿಲ್ದಾಣ, ಕೆ.ಆರ್.ಆಸ್ಪತ್ರೆ ಕೂಡ ಸಮೀಪವೇ ಇವೆ. ಹಾಗಾಗಿ ನಿತ್ಯ ಸಾವಿರಾರು ಜನರು ಈ ರಸ್ತೆಯಲ್ಲಿ ಸಂಚರಿಸುತ್ತಾರೆ ಅದರಲ್ಲೂ ವಿದ್ಯಾರ್ಥಿಗಳು ಶುಲ್ಕ ಕಟ್ಟಲು, ಪ್ರಮಾಣಪತ್ರ ತಿದ್ದುಪಡಿ ಸೇರಿದಂತೆ ನಾನಾ ಕೆಲಸಗಳಿಗೆ ಕ್ರಾಫರ್ಡ್ ಹಾಲ್‌ಗೆ ಎಡತಾಕುತ್ತಾರೆ. ಕುಕ್ಕರಹಳ್ಳಿಗೆ ವಾಯುವಿಹಾರಕ್ಕಾಗಿ ವಾಕಿಂಗ್ ಪ್ರಿಯರು ಆಗಮಿಸುತ್ತಾರೆ. ನಿತ್ಯ ನಾನಾ ರೈಲುಗಳು ಓಡಾಡುವುದರಿಂದ ಕುಕ್ಕರಹಳ್ಳಿ ಕೆರೆ


ಉದಯವಾಹಿನಿ ಚಿತ್ರ

**ವಾಹನ ಸಂಚಾರಕ್ಕೆ ತೊಂದರೆ**

ರಸ್ತೆಯ ರೈಲ್ವೆ ಲೆವೆಲ್‌ಕ್ರಾಸಿಂಗ್‌ನಲ್ಲಿ ಹಲವಾರು ಬಾರಿ ಗೇಟ್ ಹಾಕಲಾಗುತ್ತದೆ. ಎಷ್ಟೋ ಬಾರಿ ಲೆವೆಲ್ ಕ್ರಾಸಿಂಗ್ ಮೇಲೆಯೇ ರೈಲುಗಳು ಬಹಳ ಕಾಲ ನಿಲ್ಲುತ್ತಿರುವುದರಿಂದ ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗುತ್ತದೆ. ಬಹಳಷ್ಟು ಜನ ಹುಣಸೂರು ರಸ್ತೆಯಿಂದ ಬಳಸಿಬರಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ. ಇಲ್ಲಿ ರೈಲ್ವೆ ಮೇಲ್ಸೆತುವೆ ಅಥವಾ ಕೆಳ ಸೇತುವೆ ನಿರ್ಮಿಸಬೇಕೆಂಬ ಕೂಗು ಹಲವು ವರ್ಷಗಳಿಂದ ಇದೆ. ಇದೀಗ ವಾಹನ ನಿಲ್ಲುವಿಕೆಗೆ ಬ್ರೇಕ್ ಹಾಕುವ ಉದ್ದೇಶದಿಂದ 'ಕೆಳ ಸೇತುವೆ' ನಿರ್ಮಾಣಕ್ಕೆ ಯೋಜನೆಯೊಂದು ರೂಪುಗೊಂಡಿದೆ. ರೈಲ್ವೆ ಕೆಳಸೇತುವೆ ನಿರ್ಮಾಣದಿಂದ ಈ ಮಾರ್ಗದಲ್ಲಿ ಸುಗಮ ವಾಹನ ಸಂಚಾರಕ್ಕೆ ಅನುಕೂಲವಾಗಲಿದೆ. ಮೈಸೂರು– ಚಾಮರಾಜನಗರ ನಡುವೆ ಸಂಚರಿಸುವ ರೈಲು ಗಾಡಿಗಳು ಹಾಲಿ ಇರುವ ಲೆವಲ್ ಕ್ರಾಸಿಂಗ್ ಬಳಿ ಆಗಾಗ ನಿಲ್ಲುವುದರಿಂದ ರಸ್ತೆ ಪ್ರಯಾಣಿಕರು ಹೆಚ್ಚು ಸಮಯ ಕಾಯುವುದು ತಪ್ಪುತ್ತದೆ.

### ಮರಗಳ ಸ್ಥಳಾಂತರಕ್ಕೆ ಚಿಂತನೆ

**ರೈಲ್ವೆ ಕೆಳ ಸೇತುವೆ ನಿರ್ಮಾಣಕ್ಕೆ 48 ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಗುರುತು ಹಾಕಿದೆ. ಇದರಲ್ಲಿಐದಾರು ಸಣ್ಣ ಮರಗಳು ಈಗಾಗಲೇ ಒಣಗಿ ಬಿದ್ದಿವೆ. ಐದು ಮರಗಳು ಮಾತ್ರ ದೊಡ್ಡದಿದ್ದು, ಬಾಕಿ ಎಲ್ಲವೂ ಸಣ್ಣಮರಗಳಾಗಿವೆ. ಹೀಗಾಗಿ ಸಂಸದ ಯದುವೀರ್ ಒಡೆಯರ್ ಅವರು ಮರಗಳ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದು, ಕಡಿದ ಮರಗಳನ್ನು ಸುರಕ್ಷಿತವಾಗಿ ಬೇರೊಂದು ಕಡೆ ಸ್ಥಳಾಂತರ ಮಾಡಲು ನಿರ್ಧರಿಸಿದ್ದಾರೆ. ಜತೆಗೆ ಹೊಸದಾಗಿ ಮರಗಳನ್ನು ನೆಡಲು ತೀರ್ಮಾನಿಸಿದ್ದಾರೆ.**

# ನಾಯಕ ಸಮುದಾಯಕ್ಕೆ ಅನ್ಯಾಯವಾದರೆ ರಾಜ್ಯವ್ಯಾಪಿ ಹೋರಾಟ

• ಉದಯವಾಹಿನಿ, ತಿ.ನರಸೀಪುರ

ವಿಶ್ವ ವಿದ್ಯಾನಿಲಯವನ್ನು ಏಕ ಘಟಕವಾಗಿ ಪರಿಗಣಿಸುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾ ಅಧ್ಯಕ್ಷ, ಜೆಡಿಎಸ್‌ರಾಜ್ಯ ಮಾಧ್ಯಮ ವಕ್ತಾರ ತಾಯೂರ್ ಪ್ರಕಾಶ್‌ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸಮಾಜಕಲ್ಯಾಣ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಉಪ ಸಮಿತಿ ಸಭೆಯಲ್ಲಿ ವಿಶ್ವವಿದ್ಯಾನಿಲಯವನ್ನು ಏಕ ಘಟಕವಾಗಿ ಪರಿಗಣಿಸುವ ಬಗ್ಗೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂಬ ಮಾಹಿತಿ ಆತಂಕಕಾರಿ ಬೆಳವಣಿಗೆ ಎಂದು ಅವರು ತಿಳಿಸಿದ್ದಾರೆ.

ಸುಪ್ರೀಂಕೋರ್ಟ್, ಅಲಹಾಬಾದ್ ಹೈಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿದ ಅವರು, ವಿಶ್ವವಿದ್ಯಾನಿಲಯದ ಭೋಧಕ ಹುದ್ದೆಗಳ ಮೀಸಲಾತಿಯನ್ನು ಒಟ್ಟು ಸೀಟುಗಳ ಆಧಾರದಲ್ಲಿ ಅಲ್ಲದೆ, ವಿಭಾಗವಾರು ಲೆಕ್ಕ ಹಾಕಬೇಕು ಎಂದು ನ್ಯಾಯಾಲಯಗಳು ಸ್ಪಷ್ಟಪಡಿಸಿವೆ.

ವಿಶ್ವವಿದ್ಯಾನಿಲಯವನ್ನು ಒಂದೇ ಘಟಕವಾಗಿ ಪರಿಗಣಿಸಿ ನೇಮಕಾತಿ ನಡೆಸಿದರೆ ಅದು ಸಂವಿಧಾನದ 14, 15ನೇ ವಿಧಿಗಳಿಗೆ ವಿರುದ್ಧವಾಗುತ್ತದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದ್ದು, ಆ ತೀರ್ಪನ್ನು ಸುಪ್ರೀಂ ಕೋರ್ಟ್ ಸಹ ಎತ್ತಿಹಿಡಿದಿದೆ ಎಂದು ಅವರು ತಿಳಿಸಿದರು. ಪ್ರಸ್ತುತ ರೋಸ್ಟರ್ ಪ್ರಕಾರ ಒಂದು ಹುದ್ದೆ ಪರಿಶಿಷ್ಟ ಜಾತಿಗೆ, ಮತ್ತೊಂದು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಸಂದರ್ಭದಲ್ಲೇ, ಏಕ ಘಟಕ ವ್ಯವಸ್ಥೆ ಜಾರಿಗೆ ಬಂದರೆ ನಾಯಕ ಸಮುದಾಯದ ವಿದ್ಯಾವಂತರಿಗೆ ಅನ್ಯಾಯವಾಗುವ ಸಾಧ್ಯತೆ ಇದೆ ಎಂದು ತಾಯೂರು ಪ್ರಕಾಶ್ ಆತಂಕ ವ್ಯಕ್ತಪಡಿಸಿದರು.

ಇದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರುವ ಕ್ರಮವಾಗುತ್ತದೆ ಎಂದು ಅವರು ಹೇಳಿದರು. ಮುಖ್ಯಮಂತ್ರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಯಾವುದೇ ಸಮುದಾಯದ ಹಕ್ಕುಗಳಿಗೆ ಧಕ್ಕೆಯಾಗದಂತೆ ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರಲ್ಲದೆ, ನಾಯಕ ಸಮುದಾಯದ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನ ನಡೆದರೆ ರಾಜ್ಯವ್ಯಾಪಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

# ರಾಗಿ ಖರೀದಿ: ಹೆಚ್ಚುವರಿ ಕೌಂಟರ್‌ಗೆ ಜಿಲ್ಲಾಧಿಕಾರಿ ಶುಭಕಲ್ಯಾಣ್ ಸೂಚನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತುರುವೇಕೆರೆ

ತಾಲ್ಲೂಕಿನ ಎಪಿಎಂಸಿ ಆವರಣದ ರಾಗಿ ಖರೀದಿ ಕೇಂದ್ರದಲ್ಲಿ ಕೇವಲ ಒಂದು ರಾಗಿ ಖರೀದಿ ಘಟಕವಿದೆ. ಇದರಿಂದಾಗಿ ರೈತರಿಗೆ ತೊಂದರೆಯಾಗುತ್ತಿದ್ದು. ಕೂಡಲೇ ಹೆಚ್ಚುವರಿಯಾಗಿ ಎರಡು ರಾಗಿ ಖರೀದಿ ಘಟಕಗಳನ್ನು ಪ್ರಾರಂಭಿಸಬೇಕು ಎಂದು ಡಿಸಿ ಶುಭಕಲ್ಯಾಣ್ ಅವರು ಕೆಎಫ್ ಸಿಎಸ್‌ಸಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ತಾಲ್ಲೂಕಿನ ರಾಗಿ ಖರೀದಿ ಕೇಂದ್ರಕ್ಕೆ ಭೇಟಿ ನೀಡಿದ ಡಿಸಿ ರೈತರ ದೂರುಗಳನ್ನು ಆಲಿಸಿದರು. ರಾಗಿ ಖರೀದಿ ವೇಳೆ ರೈತರಿಂದ 50 ಕೆಜಿ 600 ಗ್ರಾಂ ರಾಗಿ ಖರೀದಿಸಬೇಕು ಎಂದು ನಿಯಮವಿದೆ. ಆದರೆ ಇಲ್ಲಿಯ ಅಧಿಕಾರಿಗಳು ಸರಿ ಸುಮಾರು 52 ಕೆಜಿಯಷ್ಟು ರಾಗಿ ತೆಗೆದುಕೊಳ್ಳುತ್ತಿದ್ದಾರೆ.

ಇದು ಸರಿಯಲ್ಲ. ರೈತರಿಂದ 100 ರೂಪಾಯಿ ಹಮಾಲಿ ಹಣ ಎಂದು ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ನಷ್ಟವಾಗುತ್ತಿದೆ ಎಂದು ತಾಲ್ಲೂಕು ತೆಂಗು ಮತ್ತು ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ ಲೋಕಮ್ಮನಹಳ್ಳಿ ಕಾಂತರಾಜು ಮತ್ತು ರೈತ ಸಂಘದ ಅಧ್ಯಕ್ಷ ಕಣಕೂರು ಚಂದ್ರಶೇಖರ್ ಜಿಲ್ಲಾಧಿಕಾರಿಗೆ ದೂರಿದರು. ರಾಗಿ ಖರೀದಿ ವೇಳೆ ರೈತರೇ ತೂಕ ಮಾಡಲು ರಾಗಿಯನ್ನು ಸುರಿದರೆ ಯಾವುದೇ ಹಣ ನೀಡುವಂತಿಲ್ಲ.

ಆದರೆ ಹಮಾಲಿಗಳಿಂದ ರಾಗಿ ತೂಕ ಹಾಕಿಸಿದಲ್ಲಿ ಅವರ ಕೂಲಿ ಕೊಡಬೇಕಾಗುವುದು ಅನಿವಾರ್ಯ. ಆದರೂ 100ಕ್ಕೆ ಬದಲಾಗಿ ಕಡಿಮೆ ಹಣ ತೆಗೆದುಕೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಉಪವಿಭಾಗಾಧಿಕಾರಿ ಸಪ್ತಶ್ರೀ, ತಹಶೀಲ್ದಾರ್ ಅಹಮದ್, ಇಒ ಅನಂತರಾಜು, ಜಿಲ್ಲಾ ಆಹಾರ, ನಾಗರಿಕ ಸರಬರಾಜು ನಿಗಮದ ಜಿಲ್ಲಾ ವ್ಯವಸ್ಥಾಪಕ ತನ್ನೀರ್, ಅಧ್ಯಕ್ಷ ಪ್ರಸನ್ನ ಕುಮಾರ್, ಆಹಾರ ನಿರೀಕ್ಷ ಕೃಷ್ಣಗೌಡ, ಹರೀಶ್, ಬಿಇಒ ಸೋಮಶೇಖರ್ ಹಾಜರಿದ್ದರು.

**ತೂಕದಲ್ಲಿ ಅಕ್ರಮ**


**ತೂಕದಲ್ಲಿ ಅಕ್ರಮ ಎಸಗಲಾಗುತ್ತಿದೆ ಎಂಬ ದೂರಿದ ಮೇರೆಗೆ ದಾಸ್ತಾನು ಕೊಠಡಿಗೆ ತೆರಳಿದ ಜಿಲ್ಲಾಧಿಕಾರಿ ದಾಸ್ತಾನು ಮಧ್ಯದಲ್ಲಿದ್ದ ಎರಡು ಚೀಲಗಳನ್ನು ತೂಕ ಮಾಡುವಂತೆ ಸೂಚಿಸಿದರು. ಆಗ ಒಂದು ಚೀಲ 51.600 ಕೆಜಿ ಬಂದರೆ ಮತ್ತೊಂದು 49 ಕೆಜಿ ಮಾತ್ರ ಬಂದಿತು.**

# 2027ಕ್ಕೆ ತುಮಕೂರು-ಚಿತ್ರದುರ್ಗ ರೈಲ್ವೆ ಕಾಮಗಾರಿ ಪೂರ್ಣ

• ಉದಯವಾಹಿನಿ, ಶಿರಾ

ತುಮಕೂರು- ಚಿತ್ರದುರ್ಗ, ತುಮಕೂರು ರಾಯದುರ್ಗ ಎರಡು ರೈಲ್ವೆ ಯೋಜನೆಗಳನ್ನು 2027ರ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸುವುದಾಗಿ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ತಾಲ್ಲೂಕು ಕಚೇರಿಯಲ್ಲಿ ತುಮಕೂರು- ಚಿತ್ರದುರ್ಗ ರೈಲ್ವೆ ಕಾಮಗಾರಿ ವೀಕ್ಷಿಸಿ, ಅಧಿಕಾರಿಗಳ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ತುಮಕೂರು-ಚಿತ್ರದುರ್ಗ ರೈಲ್ವೆ ಯೋಜನೆ ಈ ಭಾಗದ ಜನರ ಕನಸಾಗಿದೆ. ಹಲವು ವರ್ಷಗಳ ಹೋರಾಟದ ಫಲವಾಗಿ ಯೋಜನೆ ರೂಪುಗೊಳ್ಳುತ್ತಿದ್ದು ಕಾಮಗಾರಿ ತ್ವರಿತವಾಗಿ ನಡೆಯುತ್ತಿದೆ ಎಂದರು.

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ರೈಲ್ವೆ ಕಾಮಗಾರಿಯನ್ನು ವೀಕ್ಷಣೆ ಮಾಡಿದ್ದು ತ್ವರಿತವಾಗಿ ಕಾಮಗಾರಿ ನಡೆಯುತ್ತಿದೆ. ಇದುವರೆಗೂ ಭೂಸ್ವಾಧೀನ ಕಾಮಗಾರಿ ನಡೆಯದೆ ಕಾಮಗಾರಿ ವಿಳಂಬವಾಗಿತ್ತು. ಈಗ ಸಮಸ್ಯೆ ಬಗೆಹರಿಸಲಾಗಿದೆ. ಕೆರೆಗಳಲ್ಲಿ ಹೂಳೆತ್ತುವ ಮಣ್ಣನ್ನು ರೈಲ್ವೆ ಕಾಮಗಾರಿಗೆ ಬಳಕೆಗೆ ಶಾಸಕ ಟಿ.ಬಿ.ಜಯಚಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದ್ದು ಸುಮಾರು 25 ಕೆರೆಗಳನ್ನು ಮಣ್ಣು ಬಳಕೆ ಮಾಡಿಕೊಳ್ಳಲಾಗುವುದು ಎಂದರು.


ಉದಯವಾಹಿನಿ ಚಿತ್ರ

ಎರಡು ರೈಲ್ವೆ ಯೋಜನೆಗಳಿಗೆ ಹಣಕಾಸಿನ ಕೊರತೆ ಇಲ್ಲ, ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ ಎಂದರು. ರಾಷ್ಟ್ರೀಯ ಹೆದ್ದಾರಿ-234ರ ಶಿರಾ- ಬಡವನಹಳ್ಳಿ ನಡುವೆ 25.2 ಕಿ.ಮೀ ರಸ್ತೆಯ 634 ಕೋಟಿ ವೆಚ್ಚದ ಕಾಮಗಾರಿ ಶೀಘ್ರ ಪ್ರಾರಂಭವಾಗಲಿದೆ. ಭೂಸ್ವಾಧೀನ ಮಾಡಿಕೊಂಡು ರೈತರಿಗೆ ಪರಿಹಾರ ನೀಡಲಾಗುವುದು ಎಂದರು. ಮಧುಗಿರಿ ಏಕಶಿಲಾ ಬೆಟ್ಟ, ದೇವರಾಯನದುರ್ಗಾ, ನಂದಿಬೆಟ್ಟಕ್ಕೆ ರೂಫ್ ವೇ ನಿರ್ಮಾಣಕ್ಕೆ ಕೇಂದ್ರ ಸಚಿವರೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

# ಗ್ಯಾರಂಟಿ ಹೊರತುಪಡಿಸಿ ರಾಜ್ಯದ ಅಭಿವೃದ್ಧಿ ಕಾಣುತ್ತಿಲ್ಲ: ಎಚ್‌ಡಿಕೆ

• ಉದಯವಾಹಿನಿ, ಚಾಮರಾಜನಗರ

ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದರು, ಈಗ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿಯಿಂದ ಬೇರೆ ಅಭಿವೃದ್ಧಿ ಆಗುತ್ತಿಲ್ಲ, ಸರ್ಕಾರಕ್ಕೆ ನಿಲುವಿದ್ದರೇ ಅಭಿವೃದ್ಧಿ ಮಾಡಬಹುದಾಗಿತ್ತು, ಗ್ಯಾರಂಟಿ ಕಾರಣಕ್ಕಾಗಿ ಜನರಿಗೆ ತೆರಿಗೆಯ ಹೊರೆಯೂ ಹೆಚ್ಚಾಗಿದೆ ಎಂದು ಕೇಂದ್ರ ಸಚಿವರ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಅವರು ಗುಂಡ್ಲುಪೇಟೆ ತಾಲ್ಲೂಕಿನ ಕಡಬೂರಿನಲ್ಲಿ ಶಿವ, ಗಣಪತಿ ದೇಗುಲ ಉದ್ಘಾಟಿಸಿದ ಬಳಿಕ ಗ್ಯಾರಂಟಿಯಿಂದ ಹೊರೆ ಆಗುತ್ತಿದೆ ಎಂಬ ಡಿಕೆಶಿ ಮಾತಿಗೆ ಅವರು ಮಾಧ್ಯಮಕ್ಕೆ ಪ್ರತಿಕ್ರಿಯಿಸಿ, ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದರು, ಈಗ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿಯಿಂದ ಬೇರೆ ಅಭಿವೃದ್ಧಿ ಆಗುತ್ತಿಲ್ಲ, ಸರ್ಕಾರಕ್ಕೆ ನಿಲುವಿದ್ದರೇ ಅಭಿವೃದ್ಧಿ ಮಾಡಬಹುದಾಗಿತ್ತು, ಗ್ಯಾರಂಟಿ ಕಾರಣಕ್ಕಾಗಿ ಜನರಿಗೆ ತೆರಿಗೆಯ ಹೊರೆಯೂ ಹೆಚ್ಚಾಗಿದೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ಎಡವಿದ್ದು ಉದ್ಯೋಗ ಆಕಾಂಕ್ಷಿಗಳು ರಾಜ್ಯ ಸರ್ಕಾರ ವಿರುದ್ಧ ತಿರುಗಿ ಬಿದ್ದಿದ್ದಾರೆ, ಈಗ ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ ಎನ್ನುತ್ತಿದ್ದಾರೆ ಕಾದು ನೋಡಬೇಕು, ಉದ್ಯೋಗ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ, ಕೇಂದ್ರ ಸರ್ಕಾರ ಉದ್ಯೋಗ ಕೊಟ್ರಾ ಎಂದು ಪ್ರಶ್ನಿಸುವುದಲ್ಲ, ಅವರು ಕೊಡಲ್ಲಾ- ನಾನು ಕೊಡಲ್ಲಾ ಎನ್ನುವುದಲ್ಲ, ಎರಡೂವರೆ ವರ್ಷದಿಂದ ಖುರ್ಚಿ ಹಂಚಿಕೆಯಲ್ಲಿ ಸಮಯ ಕಳೆದಿದ್ದು ಈಗಲಾದರೂ ಸರಿಪಡಿಸಿಕೊಳ್ಳಲಿ ಎಂದರು. 40 ಪರ್ಸೆಂಟ್ ಕಮಿಷನ್ ಎಂದು ಅಪಪ್ರಚಾರ ಮಾಡಿ ಅಧಿಕಾರಕ್ಕೆ ಬಂದರು.ಈಗ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಏನು..? ಗುತ್ತಿಗೆದಾರರು ಬದುಕಲು ಸಾಧ್ಯವಾಗುತ್ತಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯ ರಾಜಕಾರಣಕ್ಕೆ ಕುಮಾರಸ್ವಾಮಿ ಎಂಟ್ರಿ ವಿಚಾರಕ್ಕೆ ಮಾತನಾಡಿ, ರಾಜ್ಯದಲ್ಲಿರುವ ಈ ಕೆಟ್ಟ ಸರ್ಕಾರ ಕಿತ್ತೆಸೆದು ಒಳ್ಳೆಯ ಸರ್ಕಾರ ನೀಡಲು, ಚುನಾವಣೆಯಲ್ಲಿ ನನ್ನ ಪಾತ್ರವನ್ನು ನಾನು ನಿರ್ವಹಿಸುತ್ತೇನೆ ಎಂದರು.



ಇದೇ ವೇಳೆ, ಸ್ಥಳೀಯ ಚುನಾವಣೆಯಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿ ಇರಲಿದೆಯೇ ಎಂಬುದಕ್ಕೆ ಮಾತನಾಡಿ, ಜೊತೆ ಇರುವ ಉದ್ದೇಶದಿಂದಲೇ ಮೈತ್ರಿ ಮಾಡಿಕೊಂಡಿದ್ದೇವೆ, ಜೊತೆಗೆ ಇದ್ದೇವೆ, ಮುಂದಿನ ಚುನಾವಣೆಯಲ್ಲಿ ನಮ್ಮ ಮೈತ್ರಿ ಸರ್ಕಾರಕ್ಕೆ ಜನರ ಬೆಂಬಲ ನೀಡಲಿದ್ದಾರೆ ಎಂದರು. ನಿಖಿಲ್ ರಾಮನಗರದಿಂದ ಸ್ಪರ್ಧೆ ಬಗ್ಗೆ ಮಾತನಾಡಿ, ಕಳೆದ ಚುನಾವಣೆಯಲ್ಲಿ ಜನರು ತಪ್ಪು ನಿರ್ಧಾರ ಈಗ ಮನವರಿಕೆಯಾಗಿದೆ, ಯಾರ್ಯಾರ ನಡವಳಿಕೆ ಏನು ಎಂಬುದು ಮನವರಿಕೆಯಾಗಿದೆ,ರಾಮನಗರ ಜಿಲ್ಲೆಯನ್ನು ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಿಗೂ ಸೂಕ್ತ ಅಭ್ಯರ್ಥಿಗೆ ಕೊರತೆಯಿಲ್ಲ, ಮುಂದಿನ ಚುನಾವಣೆಗೆ ಮೈತ್ರಿ ಸರ್ಕಾರಕ್ಕೆ ಜನರ ಬೆಂಬಲ ಇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಸೂಕ್ತ ಅಭ್ಯರ್ಥಿಗೆ ಕೊರತೆಯಿಲ್ಲ**

**ಪ್ರಗತಿ ಹಾದಿಯಲಿ ಸಂಸ್ಕೃತಿ ಮರೆಯಾಗದಿರಲಿ:** ಪ್ರಗತಿ ಹೊಂದುತ್ತಿರುವಂತೆ ಸಂಸ್ಕೃತಿ ಮರೆಯಾಗುತ್ತಿದೆ, ಇದಾಗಬಾರದು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಕೆಲ ದಿನಗಳಿಂದ ಸುದ್ದಿಗಳನ್ನು ನೋಡುತ್ತಿದ್ದರೇ ಮನಸಿಗೆ ಬಹಳ ನೋವುಂಟಾಗಲಿದೆ, ತಂದೆ-ತಾಯಿಯ ಸಾವು, ಮಕ್ಕಳೇ ಪಾಲಕರನ್ನು ಕೊಲೆ ಮಾಡುವುದು ಈ ರೀತಿ ಘಟನೆಗಳನ್ನು ಕಾಣುತ್ತಿದ್ದು ನಾವು ಪ್ರಗತಿ ಹೊಂದುತ್ತಿದ್ದೇವೆ. ಆದರೆ, ಸಂಸ್ಕೃತಿ ಮರೆಯುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ಹಿಂದಿನ ಕಾಲದಲ್ಲಿ ಸಮಸ್ಯೆಗಳಿದ್ದಾಗಲೂ, ನೀರು- ರಸ್ತೆ- ವಿದ್ಯುತ್ ಸೌಕರ್ಯ ಇಲ್ಲದಿದ್ದಾಗಲೂ ನೆಮ್ಮದಿಯಿಂದ ಬಾಳ್ವೆ ಮಾಡುತ್ತಿದ್ದರು. ಆದರೆ, ಇಂದು ಎಲ್ಲವೂ ಇದೆ ಆದರೆ ಸಂಸ್ಕೃತಿ ಕಾಣೆಯಾಗಿದೆ. ಹಾಗಾಗದಿರಲಿ ಪ್ರಗತಿ ಜೊತೆ ಸಂಸ್ಕೃತಿಯನ್ನು ಉಳಿಸಿಕೊಳ್ಳೋಣ ಎಂದರು.

# ಖಾಲಿ ಹುದ್ದೆ ತುಂಬುವ ಕೆಲಸ ಸರಕಾರ ಮಾಡುತ್ತಿದೆ : ಸಚಿವ

## ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿದಾಗ ಮಾತ್ರ ನಿರುದ್ಯೋಗ ಸಮಸ್ಯೆ ನಿವಾರಣೆ, ಹಾಗೇ ಇದ್ದಲ್ಲಿ ಸರಕಾರ ನಡೆಸುವುದಕ್ಕೂ ತೊಂದರೆ

• ಉದಯವಾಹಿನಿ, ಕೆಜಿಎಫ್

ಉದ್ಯೋಗಗಳು ಸೃಷ್ಟಿಯಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿದಾಗ ಮಾತ್ರ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಸರಕಾರ ನಡೆಸುವುದಕ್ಕೂ ಮಾನವ ಸಂಪನ್ಮೂಲ ಅಗತ್ಯವಾಗಿ ಬೇಕೇ ಬೇಕು ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ನಗರದಲ್ಲಿ ರಾಜ್ಯದ ಪ್ರಥಮ ಸಿಎಂ ಕೆ.ಸಿ.ರೆಡ್ಡಿ ಸ್ಮಾರಕ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡಿಕೊಳ್ಳದೇ ಇದ್ದರೆ, ಖಾಲಿ ಹುದ್ದೆಗಳ ಸಂಖ್ಯೆ ಹಾಗೇ ಇದ್ದಲ್ಲಿ ಸರಕಾರ ನಡೆಸುವುದಕ್ಕೂ ತೊಂದರೆಯಾಗುತ್ತದೆ ಎಂದರು. ಪ್ರಧಾನಿ ನರೇಂದ್ರ ಮೋದಿ 2014 ರಲ್ಲಿಅಧಿಕಾರಕ್ಕೆ ಬಂದಾಗ ಪ್ರತಿ ವರ್ಷ 2 ಕೋಟಿ ಉದ್ಯೋಗಾವಕಾಶಗಳನ್ನು ನೀಡುವುದಾಗಿ ಭರವಸೆ ನೀಡಿದ್ದರು. ವರ್ಷಕ್ಕೆ 2 ಕೋಟಿ ಎಂದಾದರೆ ಅವರು ಅಧಿಕಾರಕ್ಕೆ ಬಂದು 12 ವರ್ಷಗಳಾಗಿದ್ದು, 24 ಕೋಟಿ ಉದ್ಯೋಗಾವಕಾಶಗಳನ್ನು ಭರ್ತಿ ಮಾಡಿದ್ದಾರೆಯೇ ಪ್ರಶ್ನಿಸಿದರು.



**ಖಾಲಿ ಇರುವ ಹುದ್ದೆಗಳ ಭರ್ತಿ:** ಕೇಂದ್ರ ಸರ್ಕಾರದಲ್ಲಿ ಖಾಲಿ ಇರುವ 40 ಲಕ್ಷ ಹುದ್ದೆಗಳಲ್ಲಿ ಕೇವಲ 7 ಲಕ್ಷ ಹುದ್ದೆಗಳನ್ನಷ್ಟೇ ಅವರು ಕಳೆದ 12 ವರ್ಷಗಳಲ್ಲಿ ಭರ್ತಿ ಮಾಡಿದ್ದಾರೆ. ಉಳಿದ ಹುದ್ದೆಗಳನ್ನು ಅವರು ಭರ್ತಿ ಮಾಡಲಿ, ನಾವೂ ಸಹ ರಾಜ್ಯ ಸರಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದರು. 2013 ರಿಂದ 2018 ರ ಅವಧಿಯಲ್ಲಿ ನಮ್ಮ ಸರ್ಕಾರ 1.30 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿತ್ತು. ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ 2019 ರಿಂದ 2023ರ ಅವಧಿಯಲ್ಲಿ ಕೇವಲ 40 ಸಾವಿರ ಹುದ್ದೆಗಳನ್ನಷ್ಟೇ ಭರ್ತಿ ಮಾಡಿತ್ತು. 2023 ರಿಂದ ನಮ್ಮ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಇದುವರೆಗೆ 40 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದು, 60 ಸಾವಿರ ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ ಎಂದರು.

ಒಳ ಮೀಸಲಾತಿ ಪ್ರಕ್ರಿಯೆ ಜಾರಿಯಲ್ಲಿದ್ದುದರಿಂದ ನೇಮಕಾತಿ ಅಧಿಸೂಚನೆ ಹೊರಡಿಸುವುದು ವಿಳಂಬವಾಗಿದ್ದು, ನಮ್ಮ ಅವಧಿಯಲ್ಲಿ ಒಟ್ಟಾರೆ ಒಂದು ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸವನ್ನು ಮಾಡಲಾಗುವುದು. ಕೆಎಸ್‌ಆರ್‌ಟಿಸಿ ಇಲಾಖೆಯಲ್ಲಿ 9 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿ, ಒಂದು ಸಾವಿರ ಮಂದಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲಾಗಿದ್ದು, ನನ್ನ ಅವಧಿಯಲ್ಲಿಯೇ ನೇಮಕಾತಿ ಆದೇಶ ಪತ್ರಗಳನ್ನು ನೀಡಿರುವುದಾಗಿ ತಿಳಿಸಿದರು.

**ವಿದ್ಯಾವಂತ ನಿರುದ್ಯೋಗಿಗಳಿಗೆ, ಉದ್ಯೋಗಾ ಆಕಾಂಕ್ಷಿಗಳಿಗೆ ಉದ್ಯೋಗ ನೀಡುವುದಕ್ಕೆ, ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆಗೆ ನೇಮಕಾತಿ ಅಧಿಸೂಚನೆ ಹೊರಡಿಸಿ ಖಾಲಿ ಇರುವ ಹುದ್ದೆಗಳನ್ನು ತುಂಬುವಂತಹ ಕೆಲಸವನ್ನು ನಮ್ಮ ಸರಕಾರ ಮಾಡುತ್ತಿದೆ.**

**- ರಾಮಲಿಂಗಾರೆಡ್ಡಿ, ಸಾರಿಗೆ, ಮುಜರಾಯಿ ಸಚಿವ**

**ನೇರ ನೇಮಕಾತಿ ಮೂಲಕ ಭರ್ತಿ**

**ಕೇಂದ್ರ ಸರಕಾರದಲ್ಲಿ ಖಾಲಿ ಇರುವ 40 ಲಕ್ಷ ಹುದ್ದೆಗಳ ಪೈಕಿ 12 ವರ್ಷಗಳ ಅವಧಿಯಲ್ಲಿ ಅವರು ಭರ್ತಿ ಮಾಡಿರುವುದು ಕೇವಲ 7 ಲಕ್ಷ ಹುದ್ದೆಗಳನ್ನು ಮಾತ್ರ. ಹೀಗಿದ್ದರೂ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಬೊಮ್ಮಾಯಿ, ವಿಜಯೇಂದ್ರ ಎಲ್ಲರೂ ಮೊಸಳೆ ಕಣ್ಣೀರು ಸುರಿಸುತ್ತಾರೆ. ಕೇಂದ್ರ ಸರಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಿ ಎಂದರು. ದೇಶದಲ್ಲಿ 2020ರ ಡಿಸೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣದ ಶೇಕಡಾವಾರು 4.8ರಷ್ಟಿತ್ತು. ಈಗ ಈ ಪ್ರಮಾಣ ಶೇ 5ಕ್ಕೆ ಏರಿದೆ. ದೇಶಾದ್ಯಂತ ಗ್ರಾಮೀಣ ಭಾಗದಲ್ಲಿ ಶೇ 4.2 ಮತ್ತು ನಗರ ಪ್ರದೇಶದಲ್ಲಿ ಶೇ 7.0ರಷ್ಟು ನಿರುದ್ಯೋಗದ ಶೇಕಡಾವಾರು ಪ್ರಮಾಣ ಇದ್ದು, ದೇಶದ ಇತರೆ ಎಲ್ಲಾ ಕಡೆಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ನಿರುದ್ಯೋಗದ ಶೇಕಡಾವಾರು ಪ್ರಮಾಣ 2.4ರಿಂದ 2.8ರಷ್ಟಿದೆ ಎಂದರು.**



# ಮಿನಿ ನ್ಯೂಸ್

## ಕಾಡಾನೆ ದಾಳಿ: ತೆಂಗಿನಸಸಿಗಳ ನಾಶ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ವಿರುಪಾಕ್ಷಿಪುರ ಹೋಬಳಿಯ ಪೀಹಳ್ಳಿದೊಡ್ಡಿ ಗ್ರಾಮದಲ್ಲಿ ಕಾಡಾನೆಗಳು ದಾಳಿ ನಡೆಸಿ ರೈತರ ಜಮೀನಿನಲ್ಲಿ ಬೆಳೆದಿದ್ದ ತೆಂಗಿನ ಸಸಿಗಳನ್ನು ಧ್ವಂಸ ಮಾಡಿವೆ. ಗ್ರಾಮದ ರೈತ ಪಿ.ಬಿ. ಭಾನುಪ್ರಸಾದ್ ಅವರ ತೆಂಗಿನತೋಟದ ಮೇಲೆ ದಾಳಿ ಮಾಡಿರುವ ಐದು ಕಾಡಾನೆಗಳ ತಂಡ ಹತ್ತಕ್ಕೂ ಹೆಚ್ಚು ತೆಂಗಿನ ಸಸಿಗಳನ್ನು ಉರುಳಿಸಿ ಧ್ವಂಸ ಮಾಡಿವೆ. ನಂತರ ಪಕ್ಕದ ಜಮೀನಿನ ಸಚಿನ್ ಅವರ ತೆಂಗಿನತೋಟದ ಮೇಲೆ ದಾಳಿ ಮಾಡಿ ತೆಂಗಿನಸಸಿಗಳ ಸುಳಿಗಳನ್ನು ಕಿತ್ತು ನಾಶ ಮಾಡಿವೆ. ಘಟನೆಯಲ್ಲಿ ರೂ. 2 ಲಕ್ಷ ರೂ. ಮೌಲ್ಯದ ಬೆಳೆ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಕಾಡಾನೆ ದಾಳಿಯಿಂದ ಬೆಳೆ ನಷ್ಟ ಅನುಭವಿಸಿರುವ ರೈತರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮದ ರೈತರು ಆಗ್ರಹಿಸಿದ್ದಾರೆ.



## ಮಾವಿನ ಹೂವು, ಪೀಚಿಗೆ ಬೂದಿರೋಗ

• ಉದಯವಾಹಿನಿ, ಮಾಗಡಿ

ತಾಲ್ಲೂಕಿನಲ್ಲಿ ಕಾಯಿ ಬಿಡುವ ಹಂತದಲ್ಲಿರುವ ಮಾವಿನ ಕಾಯಿ ಗೊಂಚಲಿಗೆ ಬೂದಿರೋಗ, ಜಿಗಿಹುಳು ಭಾದೆ ಶುರುವಾಗಿದೆ. ಡ್ರಿಪ್ ಕೀಟಗಳಿಂದ ಮಾವಿನ ಪೀಚುಗಳು ಉದುರಲು ಶುರುವಾಗಿವೆ. ಚಂದುರಾಯನಹಳ್ಳಿ ಕೆ.ವಿ.ಕೆ ವಿಜ್ಞಾನಿಗಳು ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ತಾಂತ್ರಿಕ ಸಮಿತಿ ತಾಲ್ಲೂಕಿನ ವಿವಿಧ ತೋಟಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

ಶೀಘ್ರ, ಪರಿಣಾಮಕಾರಿ ಸಸ್ಯ ಸಂರಕ್ಷಣಾ ಕ್ರಮ ಕೈಗೊಳ್ಳದಿದ್ದರೆ ಹಾನಿ ಪ್ರಮಾಣ ಹೆಚ್ಚಾಗುವ ಲಕ್ಷಣಗಳಿವೆ ಎಂದು ಕೃಷಿ ವಿಜ್ಞಾನಿಗಳು ತಿಳಿಸಿದ್ದಾರೆ. ಶಿಲೀಂಧ್ರ ರೋಗ, ಜಿಗಿ ಹುಳು, ಮತ್ತು ಡ್ರಿಪ್ ಕೀಟ ಸಾಕಷ್ಟು ಸಂಖ್ಯೆಯಲ್ಲಿ ಕಾಣಬರುತ್ತಿದೆ. ಪ್ರಸ್ತುತ ಈ ಕೀಟ, ರೋಗಗಳಿಗೆ ಅನುಕೂಲಕರ ವಾತಾವರಣವಿದ್ದು, ಇದನ್ನು ನಿಯಂತ್ರಿಸುವುದು ಅಗತ್ಯವಿರುತ್ತದೆ. ಸಸ್ಯ ಸಂರಕ್ಷಣಾ ಕ್ರಮ ಕೈಗೊಳ್ಳಲು ತಾಂತ್ರಿಕ ಸಮಿತಿ ಸೂಚಿಸಿದೆ.

## ಕಂದಾಯ ಸೇವೆಗಳ ಸಮರ್ಪಣಾ ಸಮಾವೇಶ: 25 ಸಾವಿರ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಗರದ ಹೊರವಲಯದ ಚೊಕ್ಕಹಳ್ಳಿ ಸಮೀಪ ಕಂದಾಯ ಸೇವೆಗಳ ಸಮರ್ಪಣಾ ಸಮಾವೇಶಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಚಾಲನೆ ನೀಡಿದರು. ಜಿಲ್ಲೆಯ 154 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೋಡಿ ದುರಸ್ತಿ, ಇ ಪೌತಿ ಖಾತೆ, ಕಂದಾಯ ಗ್ರಾಮ, ಸಾಮಾಜಿಕ ಸೇವಾ ಭದ್ರತಾ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯ ವಿತರಿಸಲಾಗುತ್ತದೆ. ಒಟ್ಟು 25 ಸಾವಿರ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ ಸುಧಾಕರ್ ಮಾತನಾಡಿ, ಕಂದಾಯ ಇಲಾಖೆಗೆ ಹೊಸ ದಿಕ್ಕು ತೋರಿಸಿರುವುದು ಕೃಷ್ಣ ಬೈರೇಗೌಡ. ಸುಮಾರು 20 ವರ್ಷಗಳ ಕನಸು ಇದು.

ಕಂದಾಯ ಇಲಾಖೆಯ ಸಮಸ್ಯೆಗಳ ಬಗ್ಗೆ ನಾನು ಕೃಷ್ಣ ಬೈರೇಗೌಡ ಅವರು ಬಹಳಷ್ಟು ಚರ್ಚಿಸಿದ್ದೇವೆ. ದುರಸ್ತಿ ಆಗಿಲ್ಲ ಪೋಡಿ ಆಗಿಲ್ಲ ಎಂದು ಜನರು ಸಮಸ್ಯೆ ಹೇಳಿಕೊಳ್ಳುತ್ತಿದ್ದರು. ಆ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ನಿಶ್ಚಯಿಸಿದ್ದೆವು ಎಂದರು. ಪೌತಿ ಖಾತೆ ನಿರಂತರವಾಗಿ ಇರುವ ಸಮಸ್ಯೆ. ನಿಮ್ಮ ಮನೆ ಬಾಗಿಲಿಗೆ ಬಂದು ಅಧಿಕಾರಿಗಳು ಪೌತಿ ಖಾತೆ ಮಾಡಿಕೊಡುತ್ತಿದ್ದಾರೆ. ಹೀಗೆ ಕಂದಾಯ ಇಲಾಖೆ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುತ್ತಿದೆ ಎಂದು ಹೇಳಿದರು.

## ವಿವಿಧ ಬೇಡಿಕೆ ಈಡೇರಿಸುವಂತೆ ಆಟೋ ಚಾಲಕರ ಆಗ್ರಹ

• ಉದಯವಾಹಿನಿ, ಮೈಸೂರು

ಖಾಸಗಿ ವಾಣಿಜ್ಯ ವಾಹನಗಳ ಎಫ್.ಸಿ. ಶುಲ್ಕ ಹೆಚ್ಚಿಸಿರುವ ದರವನ್ನು ರದ್ದು ಮಾಡುವುದು ಸೇರಿ ತಮ್ಮ ಹಲವು ಬೇಡಿಕೆ ಈಡೇರಿಸುವಂತೆ ಸಂಯುಕ್ತ ಕರ್ನಾಟಕ ಚಾಲಕರ, ಮಾಲೀಕರ ಕ್ಷೇಮಾಭಿವೃದ್ಧಿ ಸಂಘ ನಗರದಿಂದ ಬೆಂಗಳೂರಿಗೆ ರ್‍ಯಾಲಿ ಹೊರಟರು. ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದಿಂದ ಮೆರವಣಿಗೆ ಹೊರಟ ಆಟೋ ಚಾಲಕರು ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ನಗರದಲ್ಲಿ ಅತಿಯಾಗಿ ಹೆಚ್ಚುತ್ತಿರುವ ಆಟೋರಿಕ್ಷಗಳ ರಹದಾರಿ ತಡೆಯಬೇಕು. ನಮ್ಮ ಆಟೋರಿಕ್ಷಾ ಚಾಲಕರಿಗೆ, ವಾಣಿಜ್ಯ ಬಸ್, ಟ್ಯಾಕ್ಸಿ, ಕ್ಯಾಬ್‌ಗಳ ಚಾಲಕ, ನಿರ್ವಾಹಕ, ದುರಸ್ತಿ ಮಾಡುವ ಎಲ್ಲಾ ರೀತಿಯ ಕಾರ್ಮಿಕರಿಗೆ ಉಚಿತ ಸೂರು ನೀಡಬೇಕು. ನಮ್ಮ ಆಟೋರಿಕ್ಷಾ ಚಾಲಕರಿಗೆ ನೆರೆ ರಾಜ್ಯ ಆಂಧ್ರಪ್ರದೇಶ ಸರ್ಕಾರದ ಮಾದರಿಯಲ್ಲಿ ವಾರ್ಷಿಕ ಸೇವಾ ಯೋಜನೆಯಡಿಯಲ್ಲಿ, ತಲಾ 15,000 ಪ್ರತಿ ವರ್ಷ ನೀಡುವುದು. ಆಟೋ ಚಾಲಕರಿಗೆ ಕಾರ್ಮಿಕ ಇಲಾಖೆಯ ವತಿಯಿಂದ ಪಿಂಚಣಿ, ಇಎಸ್‌ಐ ಸವಲತ್ತು ನೀಡಬೇಕು. ಮೈಸೂರು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಎಫ್.ಸಿ. ಶುಲ್ಕ ಹಲವು ತಿಂಗಳುಗಳಿಂದ ಬರದೆ ಇರುವ ರಶೀತಿಗಳ ಬಗ್ಗೆ ಸರ್ಕಾರ ಗಮನ ಹರಿಸಿ ಆದೇಶಿಸಬೇಕು. ಕಾನೂನು ಬಾಹಿರವಾಗಿ ಚಲಾಯಿಸುತ್ತಿರುವ ಬೈಕ್ ಟ್ಯಾಕ್ಸಿ ಸೇವೆಯನ್ನು ಕೂಡಲೇ ರದ್ದುಗೊಳಿಸಬೇಕೆಂಬ ಒತ್ತಾಯಗಳನ್ನು ಮಾಡಿದರು.

# ಅಂತರಾಳದಿಂದ.. EDITORIAL

## ತರಕಾರಿಯಲ್ಲಿ ಸೀಸ, ಕೀಟನಾಶಕ: ವ್ಯವಸ್ಥೆಯ ಪರಾಮರ್ಶೆ ನಡೆಯಲಿ



ಬೆಂಗಳೂರು ಮಹಾನಗರದ ಸುತ್ತಮುತ್ತ ಮಾರಾಟವಾಗುವ ನಾಲ್ಕನೇ ಒಂದು ಭಾಗಕ್ಕಿಂತಲೂ ಹೆಚ್ಚಿನ ತರಕಾರಿಗಳು ಸೀಸ ಹಾಗೂ ಕೀಟನಾಶಕಗಳನ್ನು ಅಪಾಯಕರ ಮಟ್ಟದಲ್ಲಿ ಹೊಂದಿವೆ ಎನ್ನುವ 'ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ' (ಸಿಪಿಸಿಬಿ) ವರದಿ ಕಳವಳ ಹುಟ್ಟಿಸುವಂತಿದೆ. ಹೊಲಗಳಿಂದ ಮಾರುಕಟ್ಟೆಯವರೆಗೆ ಸುರಕ್ಷತಾ ಕ್ರಮಗಳ ನಿಯಂತ್ರಣ ಇಲ್ಲದಿರುವ ವ್ಯವಸ್ಥೆಯ ನಿರ್ಲಕ್ಷ್ಯವನ್ನು ಈ ವರದಿ ಎತ್ತಿ ತೋರಿಸಿದೆ. 'ರಾಷ್ಟ್ರೀಯ ಹಸಿರು ಮಂಡಳಿ' ಸೂಚನೆಯ ಮೇರೆಗೆ ನಡೆದಿರುವ ಅಧ್ಯಯನದಲ್ಲಿ ಪರೀಕ್ಷೆಗೊಳಪಡಿಸಲಾದ 72 ತರಕಾರಿ ಮಾದರಿಗಳಲ್ಲಿ 19ರಲ್ಲಿ ಅನುಮತಿಸಿರುವ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದ ಸೀಸ ಕಂಡುಬಂದಿದೆ. ಸಾವಯವ ಬದನೆಕಾಯಿ ಮಾದರಿಯಲ್ಲಿ ನಿಗದಿಪಡಿಸಿರುವುದಕ್ಕಿಂತಲೂ 20 ಪಟ್ಟು ಹೆಚ್ಚು ಮಾಲಿನ್ಯಕಾರಕ ಕಣಗಳು ಕಂಡುಬಂದಿವೆ. ಇಷ್ಟೊಂದು ದೊಡ್ಡ ಪ್ರಮಾಣದ ವಿಷಯುಕ್ತ ತರಕಾರಿಗಳು ಯಾವುದೇ ಪರಿಶೀಲನೆ ಇಲ್ಲದೆ ಮಾರುಕಟ್ಟೆಗಳನ್ನು ಪ್ರವೇಶಿಸುತ್ತಿರುವುದು ವ್ಯವಸ್ಥೆಯ ವೈಫಲ್ಯವನ್ನು ಸೂಚಿಸುವಂತಿದೆ. ಬೆಂಗಳೂರಿನ ಈ ಸಮಸ್ಯೆಗೂ ನೀರಿನ ಬಿಕ್ಕಟ್ಟಿಗೂ ಸಂಬಂಧವಿದೆ. 'ಸಿಪಿಸಿಬಿ' ತಂಡ 26 ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿದ್ದು, ಅವುಗಳಲ್ಲಿ 23 ಮಾದರಿಗಳು ಮಾಲಿನ್ಯಕಾರಕ ಅಂಶಗಳನ್ನು ಹೊಂದಿರುವುದು ಕಂಡುಬಂದಿದೆ. ನಗರ ವ್ಯಾಪ್ತಿಯಲ್ಲಿನ ರೈತರು ಪುನರಾವರ್ತಿತ ಬರ ಹಾಗೂ ಅಂತರ್ಜಲದ ಕೊರತೆಯಿಂದ, ನಗರ ಪ್ರದೇಶದಲ್ಲಿನ ಸಂಸ್ಕರಣೆಗೆ ಒಳಪಡದ ತ್ಯಾಜ್ಯನೀರನ್ನು ಕೃಷಿಗೆ ಅವಲಂಬಿಸಿರುವುದನ್ನು ವರದಿಗಳು ದೃಢಪಡಿಸಿವೆ.

> **ವಿಷಕಾರಿ ರಾಸಾಯನಿಕಗಳನ್ನು ಒಳಗೊಂಡ ತರಕಾರಿಗಳ ಸಮಸ್ಯೆ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದುದಲ್ಲ. ಅದು, ಏರುಗತಿಯ ನಗರ ವಿಸ್ತರಣೆ, ಕೈಗಾರಿಕಾ ಮಾಲಿನ್ಯ ಹಾಗೂ ಕೃಷಿ ಸಮಸ್ಯೆಗಳು ಒಗ್ಗೂಡುವುದರ ಪರಿಣಾಮವನ್ನು ಸೂಚಿಸುವ ಎಚ್ಚರಿಕೆಯ ಗಂಟೆಯಾಗಿದೆ.**

ತರಕಾರಿಗಳಲ್ಲಿ ಭಾರ ಲೋಹಗಳು ಇರುವುದು ಸಮಸ್ಯೆಯ ಒಂದು ಮುಖವಷ್ಟೇ. ಪರೀಕ್ಷೆಗೊಳಪಡಿಸಲಾದ ತರಕಾರಿಗಳಲ್ಲಿ 12 ಕೀಟನಾಶಕಗಳು ಸುರಕ್ಷತಾ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಇವುಗಳಲ್ಲಿ, 2023ರಲ್ಲಿ ಭಾರತದಲ್ಲಿ ನಿಷೇಧಕ್ಕೊಳಗಾದ ಅತ್ಯಂತ ವಿಷಕಾರಿ ಆದ ಆರ್ಗ್ಯಾನೊಫಾಸ್ಫೇಟ್ ವರ್ಗಕ್ಕೆ ಸೇರಿದ ಮೊನೊಕ್ರೋಟೊಫಾಸ್ ಕೂಡ ಸೇರಿದೆ. ನಿಷೇಧದ ನಂತರವೂ ವಿಷಕಾರಿ ರಾಸಾಯನಿಕದ ಬಳಕೆ ಮುಂದುವರಿದಿರುವುದನ್ನು ಅಧ್ಯಯನವು ಬೆಳಕಿಗೆ ತಂದಿದೆ. ಆಡಳಿತ ಯಂತ್ರದಲ್ಲಿನ ಲೋಪಗಳಿಂದಾಗಿ, ಹಳೆಯ ಸಂಗ್ರಹಗಳು ಅಥವಾ ಕಾನೂನುಬಾಹಿರ ಪೂರೈಕೆಯ ಮೂಲಕ ಅಪಾಯಕಾರಿ ರಾಸಾಯನಿಕ ಬಳಕೆಯಲ್ಲಿದೆ. ಭಾರ ಲೋಹಗಳು ಮತ್ತು ಕೀಟನಾಶಕಗಳ ಒಗ್ಗೂಡುವಿಕೆಯು ಅತ್ಯಂತ ಅಪಾಯಕಾರಿಯಾಗಿದ್ದು, ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತದೆ. ಅಧಿಕ ಪ್ರಮಾಣದ ಸೀಸ ಮೆದುಳು ಮತ್ತು ಮೂತ್ರಪಿಂಡಗಳನ್ನು ತೀವ್ರವಾಗಿ ಗಾಸಿಗೊಳಿಸಬಹುದು, ಹೃದ್ರೋಗದ ಸಮಸ್ಯೆಗಳಿಗೂ ಎಡೆ ಮಾಡಿಕೊಡಬಹುದು. ಆಹಾರ ಪದಾರ್ಥಗಳಲ್ಲಿನ ಕೀಟನಾಶಕಗಳು ನರಸಂಬಂಧಿ ಸಮಸ್ಯೆಗಳು, ಕ್ಯಾನ್ಸರ್ ಉಂಟುಮಾಡಬಹುದು ಹಾಗೂ ಹಾರ್ಮೋನ್‌ಗಳ ಕಾರ್ಯಾಚರಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಅಗೋಚರ ಮಾಲಿನ್ಯಕಾರಕಗಳು ಬೆಂಗಳೂರಿನ ನಾಗರಿಕರ ಮೇಲೆ ಸದ್ದಿಲ್ಲದೆ ಹೇರಿರುವ 'ಆರೋಗ್ಯ ತೆರಿಗೆ'ಯಂತಿವೆ. ಹಣ್ಣು ತರಕಾರಿಗಳನ್ನು ಸ್ವಚ್ಛವಾಗುವಂತೆ ತೊಳೆಯುವುದು, ಸಿಪ್ಪೆ ಮತ್ತು ಬೇರುಗಳನ್ನು ತೆಗೆಯುವುದು. ತರಕಾರಿ ಮೂಲಗಳನ್ನು ವೈವಿಧ್ಯಗೊಳಿಸುವುದು ಹಾಗೂ ಋತುಮಾನ ಆಧಾರಿತ ಕೃಷಿ ಉತ್ಪನ್ನಗಳನ್ನು ಬಳಸುವಂತಹ ಸುರಕ್ಷತಾ ಕ್ರಮಗಳಿಂದ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು. ಆದರೆ, ಸಸ್ಯಗಳ ದೇಹದಲ್ಲೇ ತುಂಬಿಕೊಂಡ ವಿಷವನ್ನು ಬೇರ್ಪಡಿಸುವುದು ಹೇಗೆ 'ಸಿಪಿಸಿಬಿ' ಅಧ್ಯಯನವು ಬೆಂಗಳೂರಿಗೆ ತರಕಾರಿ ಪೂರೈಕೆಯಾಗುವ ಒಂದು ಭಾಗಕ್ಕಷ್ಟೇ ಸೀಮಿತವಾಗಿದ್ದು. ಮಹಾನಗರಕ್ಕೆ ತರಕಾರಿ ಪೂರೈಕೆಯಾಗುವ ಎಲ್ಲಾ ಮೂಲಗಳನ್ನು ಸಮಗ್ರವಾಗಿ ಒಳಗೊಂಡಿಲ್ಲ ಎನ್ನುವುದನ್ನು ಗಮನಿಸಬೇಕು. ಈ ಸೀಮಿತ ಚೌಕಟ್ಟಿನಲ್ಲೂ ಅಧ್ಯಯನದ ಮಾದರಿಗಳ ಫಲಿತಾಂಶವು ಸಮಸ್ಯೆಯ ವಿರಾಟ್ ಸ್ವರೂಪವನ್ನು ಅಂದಾಜು ಮಾಡಲು ನೆರವಾಗುವಂತಿದೆ. ತರಕಾರಿ ಬೆಳೆಯಲು ತ್ಯಾಜ್ಯ ನೀರು ಬಳಸುವ ಹಾಗೂ ಸುರಕ್ಷತಾ ಕ್ರಮಗಳ ಮೇಲ್ವಿಚಾರಣೆ ಇಲ್ಲದ ಪ್ರದೇಶಗಳಲ್ಲಿ, ಪಟ್ಟಣ ಹಾಗೂ ಇತರ ನಗರ ಪ್ರದೇಶಗಳಲ್ಲೂ ಪರಿಸ್ಥಿತಿ ಇಷ್ಟೇ ಗಂಭೀರವಾಗಿರಬಹುದು ಅಥವಾ ಇನ್ನೂ ಹೆಚ್ಚು ತೀವ್ರವಾಗಿರಬಹುದು. ವಿಷಕಾರಿ ರಾಸಾಯನಿಕಗಳನ್ನು ಒಳಗೊಂಡ ತರಕಾರಿಗಳ ಸಮಸ್ಯೆ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದುದಲ್ಲ. ಅದು, ಏರುಗತಿಯ ನಗರ ವಿಸ್ತರಣೆ, ಕೈಗಾರಿಕಾ ಮಾಲಿನ್ಯ ಹಾಗೂ ಕೃಷಿ ಸಮಸ್ಯೆಗಳು ಒಗ್ಗೂಡುವುದರ ಪರಿಣಾಮವನ್ನು ಸೂಚಿಸುವ ಎಚ್ಚರಿಕೆಯ ಗಂಟೆಯಾಗಿದೆ. ಆಹಾರದ ಸುರಕ್ಷತೆಯು ಮುಂದೆಂದೋ ಸರಿಪಡಿಸಬಹುದಾದ ಸಮಸ್ಯೆಯಾಗಿರದೆ, ಮಣ್ಣು, ನೀರು, ಮಾರುಕಟ್ಟೆಯಿಂದ ಅನ್ನದ ತಟ್ಟೆಯವರೆಗಿನ ವ್ಯವಸ್ಥೆಯಲ್ಲಿ ಆಗಬೇಕಾಗಿರುವ ಆಮೂಲಾಗ್ರ ಬದಲಾವಣೆಯಾಗಿದೆ.

## ಭಾರತ v/s ಜಿಂಬಾಬ್ವೆ: ಭರ್ಜರಿ ಜಯ

# ಸೆಮಿಫೈನಲ್ ಕನಸು ಜೀವಂತ



ವಿಶ್ವಾಸ್.ಡಿ.ಗೌಡ



ಐಸಿಸಿ ಟಿ20 ವಿಶ್ವಕಪ್ 2026ರ ಸೂಪರ್ 8 ಹಂತದಲ್ಲಿ ಭಾರತ ಮತ್ತು ಜಿಂಬಾಬ್ವೆ ನಡುವಿನ ಮಹತ್ವದ ಪಂದ್ಯದಲ್ಲಿ ಭಾರತ ತಂಡ 72 ರನ್‌ಗಳ ಭರ್ಜರಿ ಜಯ ಸಾಧಿಸಿ ಸೆಮಿಫೈನಲ್ ಆಸೆಗಳನ್ನು ಜೀವಂತವಾಗಿಟ್ಟಿದೆ. ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಭಾರತ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು ರನ್‌ಗಳ ಮಳೆ ಸುರಿಸಿತು.

**ಭಾರತದ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ**

ಭಾರತದ ಆರಂಭಿಕ ಆಟಗಾರರು ಆರಂಭದಿಂದಲೇ ಆಕ್ರಮಣಕಾರಿ ಮನೋಭಾವ ತೋರಿಸಿದರು. ಅಭಿಷೇಕ ಶರ್ಮಾ ಕೇವಲ 30 ಚೆಂಡುಗಳಲ್ಲಿ 55 ರನ್‌ಗಳನ್ನು ಬಾರಿಸಿ ತಂಡಕ್ಕೆ ವೇಗ ನೀಡಿದರು. ಅವರ ಹೊಡೆತಗಳಲ್ಲಿ ಆತ್ಮವಿಶ್ವಾಸ ಮತ್ತು ಸಮಯೋಚಿತ ಶಾಟ್‌ಗಳು ಸ್ಪಷ್ಟವಾಗಿ ಕಾಣಿಸಿಕೊಂಡವು. ಮಧ್ಯ ಕ್ರಮದಲ್ಲಿ ಇಶಾನ್ ಕಿಶನ್ 38 ರನ್‌ಗಳ ಮಹತ್ವದ ಕೊಡುಗೆ ನೀಡಿದರೆ, ಟಿಲಕ್ ವರ್ಮಾ 44 ರನ್‌ಗಳ ಅಜೇಯ ಇನಿಂಗ್ಸ್ ಮೂಲಕ ತಂಡದ ಮೊತ್ತವನ್ನು ಮತ್ತಷ್ಟು ಗಟ್ಟಿಗೊಳಿಸಿದರು.

ಪಂದ್ಯದ ಕೊನೆಯ ಹಂತದಲ್ಲಿ ಹಾರ್ದಿಕ್ ಪಾಂಡ್ಯ ಕೇವಲ 23 ಚೆಂಡುಗಳಲ್ಲಿ ಅಜೇಯ 50 ರನ್‌ಗಳನ್ನು ಸಿಡಿಸಿ ಜಿಂಬಾಬ್ವೆ ಬೌಲರ್‌ಗಳ ಮೇಲೆ ಒತ್ತಡ ಹೇರುತ್ತಾ ತಂಡದ ಮೊತ್ತವನ್ನು 20 ಓವರ್‌ಗಳಲ್ಲಿ 256/4ಕ್ಕೆ ಏರಿಸಿದರು. ಇದು ಟೂರ್ನಿಯಲ್ಲಿ ಅತ್ಯಂತ ದೊಡ್ಡ ಮೊತ್ತಗಳಲ್ಲಿ ಒಂದಾಗಿ ದಾಖಲಾಗಿದೆ. ಭಾರತದ ಬ್ಯಾಟ್ಸ್‌ಮನ್‌ಗಳ ಸ್ಟ್ರೈಕ್ ರೇಟ್ ಮತ್ತು ದಿಟ್ಟ ಆಟ ತಂಡದ ಆತ್ಮವಿಶ್ವಾಸವನ್ನು ಸ್ಪಷ್ಟಪಡಿಸಿತು.

**ಬೌಲಿಂಗ್ ವಿಭಾಗದ ಮೇಲುಗೈ :** ಭಾರತದ ಬೌಲಿಂಗ್ ವಿಭಾಗವೂ ಪರಿಣಾಮಕಾರಿ ಪ್ರದರ್ಶನ ನೀಡಿತು. ಅರ್ಶದೀಪ್ ಸಿಂಗ್ 3 ವಿಕೆಟ್ ಪಡೆದು ಜಿಂಬಾಬ್ವೆಯ ಚೇಸ್‌ನ್ನು ಅಸ್ತವ್ಯಸ್ತಗೊಳಿಸಿದರು. ನಿಯಂತ್ರಿತ ಲೈನ್ ಮತ್ತು ಲೆಂಗ್ತ್‌ನಿಂದ ಮಧ್ಯ ಓವರ್‌ಗಳಲ್ಲಿ ಪಂದ್ಯವನ್ನು ಭಾರತದತ್ತ ತಿರುಗಿಸಿದರು. ಇತರ ಬೌಲರ್ಸ್ ಸಹ ಆರ್ಥಿಕ ಓವರ್‌ಗಳನ್ನು ಎಸೆದು ಒತ್ತಡವನ್ನು ಹೆಚ್ಚಿಸಿದರು. ಫೀಲ್ಡಿಂಗ್ ವಿಭಾಗದಲ್ಲಿಯೂ ಭಾರತ ಉತ್ತಮ ಪ್ರದರ್ಶನ ನೀಡಿ ಪ್ರಮುಖ ಕ್ಯಾಚ್‌ಗಳನ್ನು ಹಿಡಿದು ಪಂದ್ಯವನ್ನು ಹಿಡಿತದಲ್ಲಿಟ್ಟುಕೊಂಡಿತು.

**ಒಟ್ಟಾರೆ ವಿಶ್ಲೇಷಣೆ:** ಈ ಪಂದ್ಯದಲ್ಲಿ ಭಾರತದ ಬ್ಯಾಟಿಂಗ್ ಶಕ್ತಿ ಸ್ಪಷ್ಟವಾಗಿ ತೋರಿತು. ಅಭಿಷೇಕ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯಾ ಅವರ ಸ್ಫೋಟಕ ಆಟ ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಜಿಂಬಾಬ್ವೆ ತಂಡದ ಬ್ರಿಯಾನ್ ಬೆನೆಟ್ ಅವರ ಶೌರ್ಯಮಯ ಇನಿಂಗ್ಸ್ ಪ್ರಶಂಸನೀಯವಾದರೂ, ಭಾರತ ತಂಡದ ಒಟ್ಟಾರೆ ಸಾಮರ್ಥ್ಯ ಎದುರು ಅದು ಸಾಲಲಿಲ್ಲ.

ಈ ಗೆಲುವು ಭಾರತ ತಂಡಕ್ಕೆ ಮಹತ್ವದ ಉತ್ತೇಜನ ನೀಡಿದ್ದು, ಮುಂದಿನ ಪಂದ್ಯದಲ್ಲಿ ಜಯ ಸಾಧಿಸಿದರೆ ಸೆಮಿಫೈನಲ್ ಪ್ರವೇಶದ ದಾರಿ ಸುಗಮವಾಗಲಿದೆ. ಅಭಿಮಾನಿಗಳಲ್ಲಿ ಹೊಸ ನಿರೀಕ್ಷೆ ಮೂಡಿದ್ದು, ತಂಡದ ಸಮತೋಲನ ಹಾಗೂ ಒಗ್ಗಟ್ಟು ಮುಂದಿನ ಹಂತದಲ್ಲಿ ನಿರ್ಣಾಯಕವಾಗಲಿದೆ. ಈಗ ಎಲ್ಲರ ಕಣ್ಣು ವೆಸ್ಟ್ ಇಂಡೀಸ್ ವಿರುದ್ಧದ ನಿರ್ಣಾಯಕ ಪಂದ್ಯತ್ತ ನೆಟ್ಟಿದೆ. ಭಾರತ ತಂಡ ಇದೇ ರೀತಿಯ ದಿಟ್ಟ ಪ್ರದರ್ಶನ ಮುಂದುವರಿಸಿದರೆ, ಕಪ್ ಗೆಲುವಿನ ಕನಸು ಕೂಡ ದೂರದಲ್ಲಿಲ್ಲ.

### ಜಿಂಬಾಬ್ವೆಯ ಪ್ರತಿರೋಧ

**256 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಜಿಂಬಾಬ್ವೆ ತಂಡ ಆರಂಭದಲ್ಲೇ ಒತ್ತಡಕ್ಕೆ ಒಳಗಾಯಿತು. ಆದಾಗ್ಯೂ, ಬ್ರಿಯಾನ್ ಬೆನೆಟ್ ಅಜೇಯ 97 ರನ್‌ಗಳ ಸಾಹಸಿಕ ಇನಿಂಗ್ಸ್ ಮೂಲಕ ಹೋರಾಟ ಮುಂದುವರಿಸಿದರು. ಅವರ ಹೊಡೆತಗಳು ಪ್ರೇಕ್ಷಕರಿಂದ ಮೆಚ್ಚುಗೆ ಪಡೆದರೂ, ಉಳಿದ ಬ್ಯಾಟ್ಸ್‌ಮನ್‌ಗಳು ಸಮರ್ಪಕ ಬೆಂಬಲ ನೀಡಲಿಲ್ಲ. ಸಿಕಂದರ್ ರಾಜಾ 19 ರನ್‌ಗಳ ಕೊಡುಗೆ ನೀಡಿದರೂ ಗುರಿ ಬಹಳ ದೂರವಾಗಿತ್ತು. ಅಂತಿಮವಾಗಿ ಜಿಂಬಾಬ್ವೆ 20 ಓವರ್‌ಗಳಲ್ಲಿ 184/6ಕ್ಕೆ ಸೀಮಿತವಾಯಿತು.**

### ಸೆಮಿಫೈನಲ್ ದಾರಿ ಸುಗಮವೇ

**ಈ ಜಯದಿಂದ ಭಾರತ ತಂಡದ ನೆಟ್ ರನ್ ರೇಟ್ ಉತ್ತಮಗೊಂಡಿದ್ದು, ಸೆಮಿಫೈನಲ್‌ಗೆ ದಾರಿ ತೆರೆಯುವ ಸಾಧ್ಯತೆ ಹೆಚ್ಚಾಗಿದೆ. ಆದರೆ ಮುಂದಿನ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯ ಅತ್ಯಂತ ನಿರ್ಣಾಯಕವಾಗಿದೆ. ಆ ಪಂದ್ಯವನ್ನು ಗೆದ್ದರೆ ಮಾತ್ರ ಭಾರತ ಸೆಮಿಫೈನಲ್‌ಗೆ ಪ್ರವೇಶ ಖಚಿತವಾಗಲಿದೆ. ಹೀಗಾಗಿ ಈ ಪಂದ್ಯವನ್ನು 'ವರ್ಚುವಲ್ ಕ್ವಾರ್ಟರ್ ಫೈನಲ್' ಎಂದು ಕರೆಯಲಾಗುತ್ತಿದೆ. ತಂಡದ ನಿರಂತರತೆ ಮತ್ತು ಒತ್ತಡದ ಸಂದರ್ಭಗಳಲ್ಲಿ ಶಾಂತ ಮನೋಭಾವವೇ ಮುಂದಿನ ಸವಾಲಿನಲ್ಲಿ ಪ್ರಮುಖವಾಗಲಿದೆ.**



# ನಿಂಬೆಹಣ್ಣು ದೀರ್ಘಕಾಲ ರಸಭರಿತ

ನಿಂಬೆಹಣ್ಣನ್ನು ಸರಿಯಾಗಿ ಶೇಖರಿಸಿಡದಿದ್ದರೆ ಅದು ಬೇಗನೇ ಒಣಗುತ್ತದೆ. ಅದರಲ್ಲಿ ರಸ ಬರೋದಿಲ್ಲ. ಆದರೆ ನೀವು ಚೆಫ್ ಶ್ರುತಿ ಮಹಾಜನ್ ತಿಳಿಸಿರುವ ಟಿಪ್ಸ್ ಬಳಸಿದರೆ ಸುಲಭವಾಗಿ ನಿಂಬೆಯನ್ನು ದೀರ್ಘಕಾಲ ಶೇಖರಿಸಿಡಬಹುದು.

ನಿಂಬೆ ರಸವು ಆಹಾರದ ರುಚಿಯನ್ನು ಹೆಚ್ಚಿಸುವುದಲ್ಲದೆ ಆರೋಗ್ಯ ಪ್ರಯೋಜನಗಳನ್ನು ಸಹ ಹೊಂದಿದೆ. ಜನರು ಸಾಮಾನ್ಯವಾಗಿ ಅರ್ಧ ಅಥವಾ ಒಂದು ಕಿಲೋಗ್ರಾಂ ನಿಂಬೆಹಣ್ಣುಗಳನ್ನು ಖರೀದಿಸಿ ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸುತ್ತಾರೆ, ಆದರೆ ಶೈತ್ಯೀಕರಣದ ನಂತರವೂ ನಿಂಬೆಹಣ್ಣುಗಳು ಬೇಗನೆ ಒಣಗುತ್ತವೆ ಅಥವಾ ಕಪ್ಪಾಗಲಾರಂಭಿಸುತ್ತದೆ.

ಒಣಗಿದ ನಿಂಬೆಹಣ್ಣುಗಳು ರಸವನ್ನು ಬಿಡುಗಡೆ ಮಾಡುವುದಿಲ್ಲ ಅಥವಾ ಅವುಗಳ ತಾಜಾತನವನ್ನು ಉಳಿಸಿಕೊಳ್ಳುವುದಿಲ್ಲ. ನಿಂಬೆಹಣ್ಣುಗಳು ಬೇಗನೆ ಒಣಗಲು ಮುಖ್ಯ ಕಾರಣಗಳು ಗಾಳಿಯಲ್ಲಿ ತೇವಾಂಶದ ಕೊರತೆ ಅಥವಾ ರೆಫ್ರಿಜರೇಟರ್‌ನ ಶೀತಕ್ಕೆ ನೇರವಾಗಿ ಒಡ್ಡಿಕೊಳ್ಳುವುದು.

ನೀವು ಈ ಸಮಸ್ಯೆಯನ್ನು ಎದುರಿಸುತ್ತಿದ್ದರೆ, ಕೆಲವು ಸರಳ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ನೀವು ನಿಂಬೆಹಣ್ಣುಗಳನ್ನು ವಾರಗಳವರೆಗೆ ತಾಜಾ ಮತ್ತು ರಸಭರಿತವಾಗಿರಿಸಬಹುದು. ಚೆಫ್ ಶ್ರುತಿ ಮಹಾಜನ್ ನಿಂಬೆಯನ್ನು ದೀರ್ಘಕಾಲ ತಾಜಾವಾಗಿರಿಸಲು ಟಿಪ್ಸ್‌ನ್ನು ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ತಿಳಿಸಿದ್ದಾರೆ.

### ಎಣ್ಣೆ ಸವರಿ

- ನಿಂಬೆಹಣ್ಣುಗಳನ್ನು ದೀರ್ಘಕಾಲದವರೆಗೆ ರಸಭರಿತವಾಗಿಡಲು ಇದು ಅತ್ಯಂತ ಹಳೆಯ ಮತ್ತು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ.
- ನಿಂಬೆಹಣ್ಣುಗಳನ್ನು ಚೆನ್ನಾಗಿ ತೊಳೆದು ಒರೆಸಿ
- ನಂತರ ಅವುಗಳಿಗೆ ಸ್ವಲ್ಪ ತೆಂಗಿನ ಎಣ್ಣೆ ಅಥವಾ ಸಂಸ್ಕರಿಸಿದ ಎಣ್ಣೆಯನ್ನು ಹಚ್ಚಿ.
- ಈ ತೆಳುವಾದ ಎಣ್ಣೆಯ ಪದರವು ನಿಂಬೆ ಸಿಪ್ಪೆಯಿಂದ ತೇವಾಂಶ ಹೊರಬರುವುದನ್ನು ತಡೆಯುತ್ತದೆ.
- ಈಗ ಅವುಗಳನ್ನು ಗಾಳಿಯಾಡದ ಪಾತ್ರೆಯಲ್ಲಿ ಅಥವಾ ಗಾಜಿನ ಜಾರ್‌ನಲ್ಲಿ ಸಂಗ್ರಹಿಸಿ ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಿ.

### ಅವುಗಳನ್ನು ಕಾಗದದಲ್ಲಿ ಸುತ್ತಿ

- ರೆಫ್ರಿಜರೇಟರ್‌ನ ನೇರ ತಣ್ಣನೆಯ ಗಾಳಿಯು ನಿಂಬೆ ಸಿಪ್ಪೆಯನ್ನು ಗಟ್ಟಿಗೊಳಿಸುತ್ತದೆ.
- ಇದನ್ನು ತಪ್ಪಿಸಲು, ಪ್ರತಿ ನಿಂಬೆಹಣ್ಣನ್ನು ವೃತ್ತಪತ್ರಿಕೆ ಅಥವಾ ಅಂಗಾಂಶ ಕಾಗದದಲ್ಲಿ ಪ್ರತ್ಯೇಕವಾಗಿ ಸುತ್ತಿ.
- ನಂತರ ಅವುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಇರಿಸಿ ಮತ್ತು ಗಾಳಿಯನ್ನು ತೆಗೆದುಹಾಕಿ.
- ಇದರ ನಂತರ, ಅವುಗಳನ್ನು ರೆಫ್ರಿಜರೇಟರ್‌ನ ತರಕಾರಿ ಪೆಟ್ಟಿಗೆಯಲ್ಲಿ ಸಂಗ್ರಹಿಸಿ.


### ಶೆಫ್ ಟಿಪ್ಸ್

- ಗಾಜಿನ ಜಾರ್ ಮತ್ತು ನೀರನ್ನು ಬಳಸುವುದು
- ನೀವು ನಿಂಬೆಹಣ್ಣುಗಳನ್ನು 15-20 ದಿನಗಳವರೆಗೆ ತಾಜಾವಾಗಿಡಲು ಬಯಸಿದರೆ, ಕೆಳಗೆ ವಿವರಿಸಿದ ವಿಧಾನವನ್ನು ಅನುಸರಿಸಿ.
- ಮೊದಲು, ಒಂದು ದೊಡ್ಡ ಗಾಜಿನ ಜಾರ್ ತೆಗೆದುಕೊಳ್ಳಿ.
- ಅದನ್ನು ನೀರಿನಿಂದ ತುಂಬಿಸಿ ಮತ್ತು ಎಲ್ಲಾ ನಿಂಬೆಹಣ್ಣುಗಳನ್ನು ಸೇರಿಸಿ.
- ನಿಂಬೆಹಣ್ಣುಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿವೆ ಎಂದು ಖಚಿತಪಡಿಸಿಕೊಳ್ಳಿ.
- ಈ ಜಾರ್ ಅನ್ನು ರೆಫ್ರಿಜರೇಟರ್‌ನಲ್ಲಿ ಇರಿಸಿ ಮತ್ತು ಪ್ರತಿ 2 ರಿಂದ 3 ದಿನಗಳಿಗೊಮ್ಮೆ ನೀರನ್ನು ಬದಲಾಯಿಸಿ.

## ದಿನಕ್ಕೊಂದು ಮುಕ್ತಕ: 105



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ



*ಬದುಕೆಂಬ ಸಂತೆಯಲಿ ಜೀವನವು ಎಲ್ಲರದು*
*ಬದಲಿಕೆಯು ಬೇಕೆಂಬ ಆಸೆಯಿರಲಿ*
*ಕದಲಿಕೆಯು ಕಂಡರದು ಸರಿಯಿರದು ಜಗದಲ್ಲಿ*
*ಮದದಲ್ಲಿ ಮೆರೆಯದಿರು ಲಕ್ಷ್ಮಿ ದೇವಿ...*

**ಭಾವಾರ್ಥ:** ಬದುಕು ಎಂಬುದು ಒಂದು ಸಂತೆ ಇದ್ದಂತೆ ಆ ಬಂಡಿಯಲ್ಲಿ ಸಾಗುವುದೆಂದರೆ ಬಂಡಿ ಸರಿಯಾಗಿರಬೇಕು ಅದರಲ್ಲಿ ಯಾವುದೇ ತೊಂದರೆಗಳಿರಬಾರದು. ತೊಂದರೆಯಿದ್ದಲ್ಲಿ ಅದನ್ನು ಬಗೆಹರಿಸುತ ಸಾಗುತ್ತಿದ್ದರೆ ಜೀವನವು ಸುಖವಾಗಿರುತ್ತದೆ. ಎಲ್ಲವೂ ಸರಿ ಇದ್ದರೂ ಸಹ ಅದರಲ್ಲಿ ಕದಲಿಕೆಯು ಇದ್ದರೆ ಜಗದಲ್ಲಿ ಜೀವನವನ್ನು ಮಾಡಲಾಗದು.

ಎಂದೆಂದಿಗೂ ಮನುಷ್ಯ ಮನುಜನಾಗಿ ಜನಿಸಿದನೆಂದರೆ ಎಂದಿಗೂ ಮದದಲ್ಲಿ ಮೆರೆಯಬಾರದು ಎಂಬುದು ಅರಿತುಕೊಳ್ಳಬೇಕು. ಬದುಕಿನ ಸಂತೆಯು ಬಹಳ ಚೆನ್ನಾಗಿಯೇ ನಡೆಯುತ್ತದೆ. ಅರಿತವನು ಬಾಳುತ್ತಾನೆ. ಮರೆತವನು ಮರೆಯಾಗುತ್ತಾನೆ ಎಂಬುದನ್ನು ಅರಿತು ಬಾಳಬೇಕಿದೆ.

# ರಾಮಾಯಣ



## ತಾರೆಯು ಲಕ್ಷ್ಮಣನಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ

### 121 ನೆಯ ಅಧ್ಯಾಯ

ಅವನು ಕೂಡಲೆ ಅಲಂಕೃತವಾದ ಇಂದ್ರಧ್ವಜದಂತೆ ತನ್ನ ಸಿಂಹಾಸನದಿಂದ ಕೆಳಕ್ಕೆ ಇಳಿದನು. ತಾರೆಗಳು ಚಂದ್ರನನ್ನು ಬಳಸಿಕೊಳ್ಳುವಂತೆ ರುಮೆ ಮೊದಲಾದ ಸ್ತ್ರೀಯರು ಥಟ್ಟನೆ ಎದ್ದು ಸುಗ್ರೀವನನ್ನು ಬಳಸಿಕೊಂಡು ನಿಂತರು. ಮಧುಪಾನದಿಂದ ರಕ್ತನೇತ್ರನಾಗಿದ್ದ ಸುಗ್ರೀವನು ಲಕ್ಷ್ಮಣನಿಗೆ ಕೈಮುಗಿದು ನಿಂತುಕೊಂಡನು. ಆಗ ಲಕ್ಷ್ಮಣನು ಕೋಪದಿಂದ ಸುಗ್ರೀವನನ್ನು ಸಂಬೋಧಿಸಿ ಹೇಳಿದನು : '' ಎಲೈ, ರಾಜನು ಸತ್ತ್ವಗುಣಪೂರ್ಣನೂ ದಯಾವಂತನೂ ಜಿತೇಂದ್ರಿಯನೂ ಆಗಿದ್ದರೆ ಜಗತ್ತಿನಲ್ಲಿ ಮರ್ಯಾದೆಯಿಂದ ವೃದ್ಧಿ ಹೊಂದುವನು. ಅವನು ಕೃತಜ್ಞನೂ ಸತ್ಯವಾದಿಯೂ ಆಗಿರಬೇಕು. ಯಾವನು ಉಪಕಾರಿಗಳಾದ ಮಿತ್ರರನ್ನೂ ಮರೆತು ಮಾತಿಗೆ ತಪ್ಪಿನಡೆಯುತ್ತ ಅಧರ್ಮದಲ್ಲಿ ನಿರತನಾಗುವನೊ, ಅವನಿಗಿಂತ ಪಾಪಾತ್ಮನು ಇನ್ನೊಬ್ಬನಿಲ್ಲ. ಒಂದು ಅಶ್ವಕ್ಕಾಗಿ ಸುಳ್ಳು ಹೇಳಿದರೆ ನೂರು ಅಶ್ವಗಳನ್ನು ಕೊಂದ ದೋಷವು ತಗುಲುತ್ತದೆ. ಒಂದು ಹಸುವಿಗಾಗಿ ಸುಳ್ಳು ಹೇಳಿದರೆ ಸಾವಿರ ಹಸುಗಳನ್ನು ಕೊಂದ ದೋಷವು ಬರುತ್ತದೆ. ಹಾಗೆ ಮನುಷ್ಯನೊಬ್ಬನಿಗೆ ಮಾತುಕೊಟ್ಟು ಸುಳ್ಳು ಹೇಳಿದರೆ ಆತ್ಮಹತ್ಯಾ ದೋಷವೂ ಬಂಧುಹತ್ಯಾದೋಷವೂ ಬರುತ್ತವೆ. ಎಲೈ ವಾನರೇಶ ರ, ಮಿತ್ರನಿಂದ ಉಪಕೃತನಾದವನು ಪ್ರತ್ಯುಪಕಾರವನ್ನು ಮಾಡದೆ ಕೃತಘ್ನನಾಗಿ ನಡೆದರೆ ಅವನು ವಧಾರ್ಹನಾಗುತ್ತಾನೆ... ಗೋಹತ್ಯಾಕಾರಿಗೂ ಸುರಾಪಾಯಿಗೂ, ಕಳ್ಳನಿಗೂ, ವ್ರತಭ್ರಷ್ಟನಿಗೂ ಪ್ರಾಯಶ್ಚಿತ್ತವಿದೆ. ಕೃತಘ್ನನಿಗೆ ಪ್ರಾಯಶ್ಚಿತ್ತವೇ ಇಲ್ಲವೆಂದು ಬ್ರಹ್ಮದೇವನು ಹೇಳಿದ್ದಾನೆ. ಸುಗ್ರೀವ, ನೀನು ಅಯೋಗ್ಯ ; ಕೃತಘ್ನ ; ಸುಳ್ಳು ಹೇಳತಕ್ಕವನು. ಶ್ರೀರಾಮನಿಂದ ಉಪಕೃತ ನಾಗಿ ಈಗ ಅವನಿಗೆ ಪ್ರತ್ಯುಪಕಾರ ಮಾಡಬೇಕೆಂಬ ಚಿಂತೆಯನ್ನೇ ಬಿಟ್ಟಿದ್ದೀಯೆ. ಎಲೈ ವಾನರ, ನೀನು ಸೀತಾದೇವಿಯನ್ನು ಹುಡುಕುವುದಕ್ಕೆ ಪ್ರಯತ್ನಿಸಬೇಡವೆ ಶ್ರೀರಾಮನ ವಿಷಯ ನಿನಗೆ ಕೃತಜ್ಞತೆ ಬೇಡದ ನೀನು ಕೃತಘ್ನನಾಗಿ ಪಾಮರರಂತೆ ಕ್ಷುದ್ರಸುಖದಲ್ಲಿ ಮುಳುಗಿದ್ದೀಯ. ನೀನು ಕಪ್ಪೆಯಂತೆ ಕೂಗುತ್ತಿದ್ದ ಸರ್ಪವೆಂದು ಶ್ರೀರಾಮನಿಗೆ ಗೊತ್ತಾಗದೆ ಹೋಯಿತು. ಆ ಮಹಾತ್ಮನು ನಿನ್ನ ಮೇಲೆ ಅನುಗ್ರಹಿಸಿ ಕಪಿರಾಜ್ಯಾಧಿಪತ್ಯವನ್ನು ನಿನಗೆ ಕೊಡಿಸಿದನು. ನೀನು ದುರಾತ್ಮ, ನಿನಗೆ ಮಾಡಿದ ಉಪಕಾರವನ್ನು ನೀನು ಸ್ಮರಿಸಿಕೊಳ್ಳದೆಹೋದರೆ ತೀಕ್ಷ್ಣಾಸ್ತ್ರಗಳಿಂದ ವಾಲಿ ಹೋದ ದಾರಿಯನ್ನು ನೀನು ಹಿಡಿಯಬೇಕಾದೀತು, ವಾಲಿಯು ಹತನಾಗಿ ಹಿಡಿದ ಮಾರ್ಗ ವೇನೂ ಕಟ್ಟಿಹೋಗಿಲ್ಲ.

ಸುಗ್ರೀವ, ಮಾತುಕೊಟ್ಟಂತೆ ನಡೆದುಕೊ. ವಾಲಿಯ ದಾರಿಯನ್ನು ಹಿಡಿಯಬೇಡ, ಶ್ರೀರಾಮನ ಕೋದಂಡದಿಂದ ಜಿಗಿದು ಬರುವ ವಜ್ರಾಯುಧಸಮಾನವಾದ ಬಾಣಗಳ ರುಚಿಯನ್ನು ನೀನು ಕಂಡಿಲ್ಲ. ಆದ್ದರಿಂದ ರಾಮಕಾರ್ಯವನ್ನು ವಿಚಾರಿಸದೆ ಗ್ರಾಮ್ಯ ಸುಖದಲ್ಲಿ ಆಸಕ್ತನಾಗಿದ್ದೀಯ ಎಂದು ಲಕ್ಷ್ಮಣನು ಸುಗ್ರೀವನನ್ನು ಎಚ್ಚರಿಸಿದನು.

ಮುಂದುವರಿಯುವುದು...



**ಕೋಟ್, ಜಾಕೇಟ್‌ಗಳನ್ನು ತೊಳೆಯುವುದು ಸ್ವಲ್ಪ ಕಷ್ಟ, ಹಾಗಾಗಿ ಅದನ್ನು ಪ್ರತಿಬಾರಿ ತೊಳೆಯಲು ಸಾಧ್ಯವಿಲ್ಲ. ಬಟ್ಟೆಗಳನ್ನು ತೊಳೆಯುವ ವಿಷಯಕ್ಕೆ ಬಂದಾಗ ಮೊದಲನೆಯದಾಗಿ, ಯಾವಾಗಲೂ ವಿಶೇಷ ಆರೈಕೆ ಸೂಚನಾ ಲೇಬಲ್ ಅನ್ನು ಓದಿ. ನಿಮ್ಮ ಕಾಲರ್‌ನ ಹಿಂಭಾಗದಲ್ಲಿ ಒಂದು ಕೇರ್ ಟ್ಯಾಗ್ ನ್ನು ಹಾಕಲಾಗಿರುತ್ತದೆ. ಟ್ಟೆ ತಯಾರಕರು ಹೆಚ್ಚು ಸೂಕ್ಷ್ಮವಾದ ಉಡುಪುಗಳಿಗೆ ಡ್ರೈ ಕ್ಲೀನ್‌ಮಾತ್ರ ಎಂದು ನಮೂದಿಸಿರುತ್ತಾರೆ. ಅಂದರೆ ಕೋಟ್ ಅನ್ನು ಯಂತ್ರದಿಂದ ತೊಳೆಯುವಾಗ ಶಾಶ್ವತವಾಗಿ ಹಾನಿಗೊಳಗಾಗಬಹುದಾದ ಸೂಕ್ಷ್ಮ ವಸ್ತುಗಳಿಂದ ತಯಾರಿಸಲಾಗುತ್ತದೆ ಎಂದು ಸೂಚಿಸುತ್ತದೆ.**

# ಜಾಕೇಟ್ ಮನೆಯಲ್ಲೇ ಡ್ರೈ ಕ್ಲೀನ್ ಮಾಡಿ...

ಬಟ್ಟೆ ಕೇರ್ ಟ್ಯಾಗ್‌ಗಳಲ್ಲಿ ಉಡುಪಿನ ಆಧಾರದ ಮೇಲೆ, ವೃತ್ತದೊಳಗೆ ನೀವು ಎ, ಪಿ, ಅಥವಾ ಎಫ್ ಅಕ್ಷರಗಳನ್ನು ನೋಡಬಹುದು, ಇದು ವೃತ್ತಿಪರ ಕ್ಲೀನರ್‌ಗೆ ವಿವರವಾದ ಶುಚಿಗೊಳಿಸುವ ಸೂಚನೆಗಳನ್ನು ನೀಡುತ್ತದೆ.

ನಿಮ್ಮ ಕೋಟ್ ಡ್ರೈ ಕ್ಲೀನ್ ಮಾತ್ರ ಎಂದು ಹೇಳಿದ್ದರೆ, ಅದನ್ನು ನೀರಿನಲ್ಲಿ ಮುಳುಗಿಸುವುದರಿಂದ ಅದು ಹಾನಿಗೊಳಗಾಗುವ ಸಾಧ್ಯತೆ ಹೆಚ್ಚು.

ಸಕ್ಕರೆ, ಅಡಿಗೆ ಸೋಡಾ ಮತ್ತು ನಿಂಬೆರಸದ ಮಿಶ್ರಣ

ಒಂದು ಮಗ್ ಅನ್ನು ಉಗುರು ಬೆಚ್ಚಗಿನ ನೀರಿನಿಂದ ತುಂಬಿಸಿ, ಸಕ್ಕರೆ, ಅಡಿಗೆ ಸೋಡಾ ಮತ್ತು ಸ್ವಲ್ಪ ನಿಂಬೆಹಣ್ಣು ಸೇರಿಸಿ, ದ್ರಾವಣವನ್ನು ತಯಾರಿಸಿ. ಹಳೆಯ ಕರವಸ್ತ್ರ ಅಥವಾ ಬಟ್ಟೆಯನ್ನು ತೆಗೆದುಕೊಂಡು, ಅದನ್ನು ದ್ರಾವಣದಲ್ಲಿ ಅದ್ದಿ ಹಿಂಡಿ. ಈ ಬಟ್ಟೆಯಿಂದ ಕಲೆಯಾದ ಪ್ರದೇಶವನ್ನು ಚೆನ್ನಾಗಿ ಉಜ್ಜಿಕೊಳ್ಳಿ.

ಕಲೆಯಾದ ಪ್ರದೇಶವನ್ನು ಒದ್ದೆಯಾದ ಬಟ್ಟೆಯಿಂದ ಚೆನ್ನಾಗಿ ಸ್ವಚ್ಛಗೊಳಿಸಿ. ಬಟ್ಟೆಯನ್ನು ಮತ್ತೆ ಅದೇ ದ್ರಾವಣದಲ್ಲಿ ಅದ್ದಿ ಮತ್ತು ಅದನ್ನು ಹಿಂಡಿ. ಇಡೀ ಜಾಕೆಟ್ ಅನ್ನು ಮುಂಭಾಗ ಮತ್ತು ಹಿಂಭಾಗದಲ್ಲಿ ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಅದೇ ಬಟ್ಟೆಯನ್ನು ಬಳಸಿ. ನಿಮ್ಮ ಕೋಟ್ ಅನ್ನು ಅದೇ ರೀತಿಯಲ್ಲಿ ಸ್ವಚ್ಛಗೊಳಿಸಿ. ಜಾಕೆಟ್ ಮತ್ತು ಕೋಟ್ ಅನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಲು ಬಿಡಿ. ಇದು ಬ್ಯಾಕ್ಟೀರಿಯಾವನ್ನು ಕೊಲ್ಲುತ್ತದೆ ಮತ್ತು ಕೊಳೆಯನ್ನು ತೆಗೆದುಹಾಕುತ್ತದೆ.

### ಅಡಿಗೆ ಸೋಡಾ ಮತ್ತು ವಿನೆಗರ್



A comparative study of sustainable and commercial stain remover on textiles ಅಧ್ಯಯನದ ಪ್ರಕಾರ, ಅಸ್ತಿತ್ವದಲ್ಲಿರುವ ಸಾಹಿತ್ಯದ ಸಮಗ್ರ ಸಂಶೋಧನೆ ಮತ್ತು ವೈಜ್ಞಾನಿಕ ವಿಧಾನಗಳನ್ನು ಬಳಸಿಕೊಂಡು, ಅಡಿಗೆ ಸೋಡಾ ಮತ್ತು ವಿನೆಗರ್ ಅನ್ನು ಸುರಕ್ಷಿತ ಮತ್ತು ಪರಿಸರ ಸ್ನೇಹಿ ಪದಾರ್ಥಗಳಾಗಿ ವ್ಯಾಪಕವಾಗಿ ಬಳಸಲಾಗುತ್ತದೆ, ಇದು ಕಲೆ ತೆಗೆಯುವಿಕೆಗೆ ಪರಿಣಾಮಕಾರಿ ಪರಿಹಾರವನ್ನು ನೀಡುತ್ತದೆ.

ಈ ಸಂಶೋಧನೆಯು ಆಪಲ್ ಸೈಡರ್ ವಿನೆಗರ್ ಮತ್ತು ನೀರಿನೊಂದಿಗೆ ಬೆರೆಸಿದ ಅಡಿಗೆ ಸೋಡಾದ ಕಾರ್ಯಕ್ಷಮತೆಯನ್ನು ಹತ್ತಿ ಬಟ್ಟೆಯ ಸ್ವಾಚ್‌ಗಳಿಂದ ಕಲೆಗಳನ್ನು ತೆಗೆದುಹಾಕುವಲ್ಲಿ ಪ್ರಮಾಣಿತ ಮಾರ್ಜಕದ ಕಾರ್ಯಕ್ಷಮತೆಯೊಂದಿಗೆ ಹೋಲಿಸುವ ಗುರಿಯನ್ನು ಹೊಂದಿದೆ.

### ವಿನೆಗರ್‌ನೊಂದಿಗೆ ಕಲೆಗಳನ್ನು ಗುರುತಿಸಿ



ನಿಮ್ಮ ಡ್ರೈ-ಕ್ಲೀನ್-ಓನ್ಲಿ ಕೋಟ್ ಗೋಚರ ಕಲೆಗಳನ್ನು ಹೊಂದಿದ್ದರೆ, ಅವುಗಳನ್ನು ಪ್ರತ್ಯೇಕವಾಗಿ ಚಿಕಿತ್ಸೆ ನೀಡಲು ಪ್ರಯತ್ನಿಸಿ. ಬಿಳಿ ವಿನೆಗರ್ ಮತ್ತು ನೀರಿನ ಸಮಾನ ಭಾಗಗಳ ದ್ರಾವಣವನ್ನು ಮಿಶ್ರಣ ಮಾಡಿ ಮತ್ತು ಮಿಶ್ರಣಕ್ಕೆ ಸ್ವಚ್ಛವಾದ ಬಟ್ಟೆ ಅಥವಾ ಸ್ಪಂಜನ್ನು ಅದ್ದಿ. ಅದು ತೇವವಾಗಿರದಂತೆ, ಒದ್ದೆಯಾಗದಂತೆ ಅದನ್ನು ಹಿಂಡಿ, ನಂತರ ನಿಧಾನವಾಗಿ ಕಲೆಯನ್ನು ಒರೆಸಿ. ಸ್ಟೇನ್‌ನ ಹೊರಗಿನಿಂದ ಒಳಮುಖವಾಗಿ ಕೆಲಸ ಮಾಡಿ, ಸ್ಕಬ್ ಮಾಡದಂತೆ ಎಚ್ಚರಿಕೆಯಿಂದಿರಿ ಇದು ಬಟ್ಟೆಗೆ ಹಾನಿಯಾಗಬಹುದು. ನೀವು ಮುಗಿಸಿದಾಗ, ಕೋಟ್ ಅನ್ನು ಗಾಳಿಯಲ್ಲಿ ಒಣಗಲು ಅನುಮತಿಸಿ.

### ನಿಮ್ಮ ಕೋಟ್ ವಾಸನೆ ಹೋಗಲಾಡಿಸಲು ಅಡಿಗೆ ಸೋಡಾ




ನಿಮ್ಮ ಕೋಟ್ ಅನ್ನು ನೀರಿನಲ್ಲಿ ಹಾಕುವ ಬಗ್ಗೆ ನೀವು ಚಿಂತೆ ಮಾಡುತ್ತಿದ್ದರೆ, ಅದನ್ನು ಚೆನ್ನಾಗಿ ಗಾಳಿ ಇರುವ ಕಡೆನೇತುಹಾಕಿ ಮತ್ತು ವಾಸನೆಯನ್ನು ಹೀರಿಕೊಳ್ಳಲು ಅದರ ಮೇಲೆ ಅಡಿಗೆ ಸೋಡಾದ ತೆಳುವಾದ ಪದರವನ್ನು ಸಿಂಪಡಿಸಿ.

ಉಡುಪನ್ನು ಕನಿಷ್ಠ ಕೆಲವು ಗಂಟೆಗಳ ಕಾಲ ಅಥವಾ ರಾತ್ರಿಯಿಡೀ ಗಾಳಿ ಬರುವಂತೆ ಬಿಡಿ, ನಂತರ ಅಡಿಗೆ ಸೋಡಾವನ್ನು ಸಿಂಪಡಿಸಿ. ಕೋಟ್ ಅನ್ನು ಚೆನ್ನಾಗಿ ಗಾಳಿ ಇರುವ ಪ್ರದೇಶದಲ್ಲಿ ಗಾಳಿಯಲ್ಲಿ ಒಣಗಲು ಅನುಮತಿಸಿ, ನಂತರ ಧೂಳು ಮತ್ತು ವಾಸನೆಯಿಂದ ರಕ್ಷಿಸಲು ಅದನ್ನು ಬಟ್ಟೆಯ ಚೀಲದಲ್ಲಿ ಸಂಗ್ರಹಿಸಿ.

### ವೃತ್ತಪತ್ರಿಕೆಯಲ್ಲಿ ಮಡಿಚಿ

ಜಾಕೆಟ್‌ಗಳು ಮತ್ತು ಕೋಟ್‌ಗಳು ಸಂಪೂರ್ಣವಾಗಿ ಒಣಗಿದ ನಂತರ, ಅವುಗಳನ್ನು ವೃತ್ತಪತ್ರಿಕೆಯಲ್ಲಿ ಮಡಿಚಿಡಿ. ಅವುಗಳನ್ನು ಸುರಕ್ಷಿತವಾಗಿ ಪ್ಯಾಕ್ ಮಾಡಿ ಸಂಗ್ರಹಿಸಿ. ಈ ರೀತಿ ಮಾಡೋದ್ರಿಂದ ನಿಮ್ಮ ಬೆಚ್ಚಗಿನ ಜಾಕೆಟ್‌ಗಳು ಮತ್ತು ಕೋಟ್‌ಗಳನ್ನು ತೊಳೆಯುವ ಅಥವಾ ಡ್ರೈ ಕ್ಲೀನಿಂಗ್ ಮಾಡುವ ಅಗತ್ಯವಿಲ್ಲದೆ ಸುಲಭವಾಗಿ ಸ್ವಚ್ಛಗೊಳಿಸಬಹುದು. ಇದು ನಿಮ್ಮ ಶ್ರಮವನ್ನು ಉಳಿಸುತ್ತದೆ ಮತ್ತು ನಿಮ್ಮ ಕೆಲಸವನ್ನು ಸುಲಭಗೊಳಿಸುತ್ತದೆ.



# ಬಾಲವಾಡಿಗಳಿಗೂ ಸಿಗಲಿದೆ ಆಧುನಿಕ ಸೌಲಭ್ಯದ ಭಾಗ್ಯ: 11.16 ಕೋಟಿ ಬಿಡುಗಡೆ

• **ಉದಯವಾಹಿನಿ ಮಂಗಳೂರು**

ರಾಜ್ಯದ ಆಯ್ದ 1,116 ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ನಡೆಯುತ್ತಿರುವ ಪೂರ್ವ ಪ್ರಾಥಮಿಕ ತರಗತಿಗಳಿಗೆ ರಾಜ್ಯ ಸರಕಾರ ತಲಾ 1 ಲಕ್ಷ ರೂ.ನಂತೆ 11.16 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. 2025-26ನೇ ಸಾಲಿನಲ್ಲಿ ಅನುಮೋದನೆ ಮಾಡಿರುವ ತರಗತಿಗಳಿಗೆ ಶಿಶು ಸ್ನೇಹಿ ಪೀಠೋಪಕರಣ, ಹೊರಾಂಗಣ ಕ್ರೀಡಾ ಸಾಮಗ್ರಿ ಹಾಗೂ ಬಾಲಾ ಫೀಚರ್ಸ್ ಸಾಮಗ್ರಿಗಳ ಖರೀದಿಗೆ ತಲಾ 1 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ.

ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಚಟುವಟಿಕೆ ಆಧಾರಿತ ಕಲಿಕೆಯ ವಾತಾವರಣ ಕಲ್ಪಿಸಿ, ಅದರ ಮೂಲಕ ಮಕ್ಕಳಿಗೆ ಆನಂದದಾಯಕ ಕಲಿಕೆ ಸೃಷ್ಟಿಸಲು ಹಾಗೂ ಉತ್ತಮ ಕಲಿಕೆಯ ಅನುಭವ ನೀಡಲು ಪ್ರತಿ ಶಾಲೆಯ ಪೂರ್ವ ಪ್ರಾಥಮಿಕ ತರಗತಿಗಳಿಗೆ 1 ಲಕ್ಷ ರೂ. ಸರಕಾರದ ಪೋರ್ಟಲ್ ಮೂಲಕ ಜಿಲ್ಲಾ ಹಂತಕ್ಕೆ ಬಿಡುಗಡೆಗೊಂಡಿದೆ ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರ ಆದೇಶ ತಿಳಿಸಿದೆ. ಎಸ್‌ಸಿಎಂಸಿ ವತಿಯಿಂದ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸಿದ್ದು, ಅನುದಾನವನ್ನು ಕೂಡಲೇ ಶಾಲಾ ಹಂತಕ್ಕೆ ಬಿಡುಗಡೆ ಮಾಡಲು ಕ್ರಮ ವಹಿಸಲು ಆದೇಶದಲ್ಲಿ ತಿಳಿಸಲಾಗಿದೆ. ಮಕ್ಕಳ ಸ್ನೇಹಿ ಪೀಠೋಪಕರಣ ಪೂರ್ವ ಪ್ರಾಥಮಿಕ ತರಗತಿಯಲ್ಲಿ 4ರಿಂದ 6 ವರ್ಷದ ಮಕ್ಕಳು ವ್ಯಾಸಂಗ ಮಾಡುತ್ತಾರೆ. ಅವರು ಸುರಕ್ಷಿತವಾಗಿ ಕುಳಿತುಕೊಳ್ಳಲು, ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅಗತ್ಯವಿರುವ ಮಗು ಸ್ನೇಹಿ ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿ ಮಾಡಬೇಕಿದೆ. ಒಂದು ಸಂಸ್ಥೆಗೆ 30 ಸಾವಿರ ರೂ. ಅನುದಾನ ನೀಡಲಾಗುತ್ತಿದೆ. ಹೊರಾಂಗಣ ಕ್ರೀಡಾ ಸಾಮಗ್ರಿ, ಮಕ್ಕಳು ಶಾಲೆಯಿಂದ ಹೊರಗೆ


ಉದಯವಾಹಿನಿ ಚಿತ್ರ

ಆಟವಾಡಲು ಅನುಕೂಲವಾಗುವಂತೆ ಉಯ್ಯಾಲೆ, ಜಾರುಬಂಡೆ ಮುಂತಾದ ಸಾಮಗ್ರಿ ಅಳವಡಿಸಬೇಕಾಗಿದೆ. ಹೊರಾಂಗಣ ಕ್ರೀಡಾ ಸಾಮಗ್ರಿ ಖರೀದಿಗೆ 40 ಸಾವಿರ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ಬಾಲಾ ಫೀಚರ್ಸ್ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸಲು ಒಂದು ಕೊಠಡಿ ಗುರುತಿಸಿಕೊಳ್ಳಬೇಕು. ಕೊಠಡಿ ಸಜ್ಜುಗೊಳಿಸಲು ಅಗತ್ಯ ಸಾಧನ ಸಾಮಗ್ರಿಯನ್ನು ನಿಯಮಾನುಸಾರ ಖರೀದಿಸಬೇಕು. ಕೊಠಡಿ ಸಜ್ಜುಗೊಳಿಸಲು ಸ್ಥಳೀಯ ಚಿತ್ರಕಲಾ ಶಿಕ್ಷಕರು ಅಥವಾ ಚಿತ್ರಕಲಾ ಪರಿಣಿತರನ್ನು ಬಳಸಿಕೊಂಡು ಮಕ್ಕಳಿಗೆ ಆಕರ್ಷಕ ಚಿತ್ರಗಳ ರಚನೆ, ಗೋಡೆ ಮೇಲೆ ನೆಲ ಮಟ್ಟದಿಂದ ಎರಡು ಅಡಿಯವರೆಗೆ ಮಕ್ಕಳು ಬರೆಯಲು, ಚಿತ್ರ ರಚಿಸಲು ಸಾಧ್ಯವಾಗುವಂತೆ ಗ್ರೀನ್ ಬೋರ್ಡ್/ಕಪ್ಪುಹಲಗೆ ನಿರ್ಮಿಸಬೇಕು. ಬಾಲಾ ಫೀಚರ್ಸ್ ಉಪಕರಣಗಳ ಖರೀದಿಗೆ 30 ಸಾವಿರ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಹಂತದಿಂದ ರಾಜ್ಯ ಕಚೇರಿಗೆ ಕ್ರೋಢಿಕೃತ ವರದಿ ಸಲ್ಲಿಸಬೇಕು.

# ಉತ್ತಮ ಎಸ್‌ಡಿಎಂಸಿ ಪ್ರಶಸ್ತಿಗೆ ಜಿಲ್ಲೆಯ 21 ಶಾಲೆಗಳು ಆಯ್ಕೆ

## ಜಿಲ್ಲೆಯ ಪ್ರತಿ ತಾಲ್ಲೂಕಿನಿಂದ ಮೂರು ಶಾಲೆ ಆಯ್ಕೆ | ವಿದ್ಯಾವಾಹಿನಿ ಪೋರ್ಟಲ್ ಮೂಲಕ ಅಂಕ

• **ಉದಯವಾಹಿನಿ ಹಾವೇರಿ**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ನೀಡಲು ಉದ್ದೇಶಿಸಿರುವ 2025-26ನೇ ಸಾಲಿನ ಉತ್ತಮ ಎಸ್‌ಡಿಎಂಸಿ ಪ್ರಶಸ್ತಿಗೆ ಜಿಲ್ಲೆಯ 21 ಶಾಲೆಗಳನ್ನು ಆಯ್ಕೆ ಮಾಡಿ, ಇಲಾಖೆಯ ಯೋಜನಾ ನಿರ್ದೇಶಕರಿಗೆ ಪಟ್ಟಿ ರವಾನಿಸಲಾಗಿದೆ.

ಶಾಲೆಯ ಅಭಿವೃದ್ಧಿ ಉದ್ದೇಶದಿಂದ ಉತ್ತಮ ಕೆಲಸ ಮಾಡಿದ ಎಸ್‌ಡಿಎಂಸಿ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ) ಸದಸ್ಯರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಉತ್ತಮ ಎಸ್‌ಡಿಎಂಸಿ ಕಾರ್ಯಕ್ರಮ ರೂಪಿಸಲಾಗಿದೆ. ಶಾಲೆಗಳ ನಿರ್ವಹಣೆ ಹಾಗೂ ಸಕಲ ಮಾಹಿತಿ ಆದರಿಸಿ ವಿದ್ಯಾವಾಹಿನಿ ಪೋರ್ಟಲ್ ಮೂಲಕ ಅಂಕಗಳನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಇಲಾಖೆಯ ನಿರ್ದೇಶನದಂತೆ ನಾಲ್ಕು ಹಂತಗಳ ಮೂಲಕ ಎಸ್‌ಡಿಎಂಸಿ ಪ್ರಶಸ್ತಿಗೆ 21 ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಪ್ರತಿ ತಾಲ್ಲೂಕಿನಿಂದ ಮೂರು ಶಾಲೆಗಳನ್ನು ಪರಿಗಣಿಸಲಾಗಿದೆ. ಈ ಪಟ್ಟಿಯನ್ನು ಇಲಾಖೆಗೆ ಕಳುಹಿಸಲಾಗಿದೆ. ಇಲಾಖೆಯಿಂದಲೇ ಉತ್ತಮ ಎಸ್‌ಡಿಎಂಸಿ ಪ್ರಶಸ್ತಿ ಘೋಷಣೆಯಾಗಲಿದೆ. ನಂತರವೇ, ಪ್ರಶಸ್ತಿ ವಿಜೇತ ಎಸ್‌ಡಿಎಂಸಿಗೆ ನಗದು ಬಹುಮಾನ ಬರಲಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮೋಹನ ದಂಡಿನ ತಿಳಿಸಿದರು. ಎರಡನೇ ಹಂತದಲ್ಲಿ ಕ್ಲಸ್ಟರ್ ಮಟ್ಟದಲ್ಲಿ ಪಿಆರ್‌ಪಿ, ಇಸಿಒ ಹಾಗೂ ಬಿಆರ್‌ಪಿ ಒಳಗೊಂಡ ತ್ರಿ ಸದಸ್ಯ ತಂಡದವರು ಅರ್ಹ ಶಾಲೆಗೆ ಭೇಟಿ ನೀಡಿ ಮಾಹಿತಿ ಪರಿಶೀಲಿಸಿದ್ದರು. ಅಂಕಗಳ


ಉದಯವಾಹಿನಿ ಚಿತ್ರ

ಸಮೇತ ಪೋರ್ಟಲ್‌ನಲ್ಲಿ ಅಭಿಪ್ರಾಯ ದಾಖಲಿಸಿದ್ದರು.

ಮೂರನೇ ಹಂತದಲ್ಲಿ ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಇತರೆ ಅಧಿಕಾರಿಗಳನ್ನು ಒಳಗೊಂಡ ತಂಡವು, ಶಾಲೆಗಳಿಗೆ ಭೇಟಿ ನೀಡಿ ಅಭಿಪ್ರಾಯ ಸಮೇತ ಅಂಕಗಳನ್ನು ಪೋರ್ಟಲ್‌ನಲ್ಲಿ ನಮೂದಿಸಿದ್ದರು. ನಾಲ್ಕನೇ ಹಂತದಲ್ಲಿ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರ ನೇತೃತ್ವದ ತಂಡವು ಅರ್ಹ ಶಾಲೆಗಳಿಗೆ ಭೇಟಿ ನೀಡಿ ಅಂತಿಮ ಪರಿಶೀಲನೆ ನಡೆಸಿತು. ಹೆಚ್ಚು ಅಂಕ ಪಡೆದ 21 ಶಾಲೆಗಳನ್ನು ಆಯ್ಕೆ ಮಾಡಿ, ಅದೇ ಶಾಲೆಗಳನ್ನು ಪ್ರಶಸ್ತಿಗಾಗಿ ಶಿಫಾರಸು ಮಾಡಲಾಗಿದೆ.

**ನಗದು ಬಹುಮಾನ:** ಉತ್ತಮ ಎಸ್‌ಡಿಎಂಸಿ ಪ್ರಶಸ್ತಿಯು ಮೂರು ಶಾಲೆಗಳ ವಿಭಾಗದಲ್ಲಿ ನಗದು ಬಹುಮಾನವನ್ನು ಒಳಗೊಂಡಿದೆ. ಪ್ರತಿ ತಾಲ್ಲೂಕಿನಲ್ಲಿ 1 ಪ್ರಾಥಮಿಕ ಶಾಲೆಗೆ ರೂ. 50,000, ಹಿರಿಯ ಪ್ರಾಥಮಿಕ ಶಾಲೆಗೆ ರೂ. 75,000 ಹಾಗೂ ಪ್ರೌಢಶಾಲೆಗೆ ರೂ. 1 ಲಕ್ಷ ಅನುದಾನದ ರೂಪದಲ್ಲಿ ಬಹುಮಾನ ಲಭ್ಯವಾಗಲಿದೆ' ಎಂದು ಮೋಹನ ದಂಡಿನ ತಿಳಿಸಿದರು.

**ಪ್ರಶಸ್ತಿ ಆಯ್ಕೆಯಲ್ಲಿ ಅನ್ಯಾಯ:** ಆರೋಪ 'ಉತ್ತಮ ಎಸ್‌ಡಿಎಂಸಿ' ಆಯ್ಕೆಯಲ್ಲಿ ಜಿಲ್ಲೆಯ ಹಲವು ಶಾಲೆಗಳಿಗೆ ಅನ್ಯಾಯವಾಗಿರುವ ಆರೋಪವೂ ವ್ಯಕ್ತವಾಗುತ್ತಿದೆ. ಈ ಬಗ್ಗೆ ಬ್ಯೆಚವಳ್ಳಿ ಸೇರಿದಂತೆ ಕೆಲ ಶಾಲೆಯ ಎಸ್‌ಡಿಎಂಸಿ ಸದಸ್ಯರು ಉಪನಿರ್ದೇಶಕರ ಎದುರು ಅಳಲು ತೋಡಿಕೊಂಡಿದ್ದಾರೆ. 'ಶಿಕ್ಷಕರ ಜೊತೆಗೂಡಿ ಶಾಲೆಯ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದೇವೆ. ಅನುದಾನ ಲಭ್ಯವಿಲ್ಲದಿದ್ದರೂ ಹಳೇ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಸಹಕಾರದಿಂದ ಶಾಲೆಯ ಪ್ರಗತಿಗೆ ಶ್ರಮಿಸುತ್ತಿದ್ದೇವೆ. ಎಲ್ಲಾ ಅಂಶಗಳಲ್ಲಿಯೂ ಮುಂದಿದ್ದೇವೆ. ಆದರೆ ನಮ್ಮ ಶಾಲೆಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡದಿರುವುದು ಸರಿಯಲ್ಲ ಎಂದು ಸದಸ್ಯರು ದೂರಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಉಪನಿರ್ದೇಶಕ ಮೋಹನ ದಂಡಿನ ತಾಲ್ಲೂಕಿಗೆ ಮೂರು ಶಾಲೆಗಳನ್ನು ಆಯ್ಕೆ ಮಾಡಲು ಅವಕಾಶವಿತ್ತು. ನಿಗದಿತ ಸಮಿತಿಯ ಸದಸ್ಯರು ಶಾಲೆ ಪರಿಶೀಲನೆ ಮಾಡಿ ಪೋರ್ಟಲ್‌ನಲ್ಲಿ ದಾಖಲಿಸಿದ ಅಂಕಗಳ ಆಧಾರದಲ್ಲಿ 21 ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಜೊತೆಗೆ ಜಿಲ್ಲೆಯಲ್ಲಿ ಪ್ರಶಸ್ತಿಗೆ ಅರ್ಹವಾದ ಇನ್ನು ಹಲವು ಶಾಲೆಗಳಿವೆ.

**4 ಹಂತಗಳ ಮೂಲಕ ಆಯ್ಕೆ**

### ಶಾಲಾ ಹಂತದಿಂದ ಪ್ರಕ್ರಿಯೆ ಆರಂಭ

**ಉತ್ತಮ ಎಸ್‌ಡಿಎಂಸಿ ಆಯ್ಕೆಗೆ ಸಂಬಂಧಪಟ್ಟಂತೆ 2025ರ ನವೆಂಬರ್ 27ರಂದು ಇಲಾಖೆಯ ಯೋಜನಾ ನಿರ್ದೇಶಕರು, ಎಲ್ಲಾ ಜಿಲ್ಲೆಯ ಇಲಾಖೆಯ ಉಪನಿರ್ದೇಶಕರಿಗೆ ಜ್ಞಾಪನಾ ಪತ್ರ ಕಳುಹಿಸಿದ್ದರು. ಅಂದಿನಿಂದಲೇ ಪ್ರಶಸ್ತಿಗೆ ಅರ್ಹ ಎಸ್‌ಡಿಎಂಸಿ ಆಯ್ಕೆ ಪ್ರಕ್ರಿಯೆ ಶುರುವಾಗಿತ್ತು. ಮೊದಲ ಹಂತದಲ್ಲಿ ಶಾಲಾ ಮಟ್ಟದಿಂದ ಅರ್ಹ ಶಾಲೆಗಳ ದಾಖಲಾತಿ ನೋಂದಣಿ ಆರಂಭವಾಗಿತ್ತು. ಸಂಬಂಧಪಟ್ಟ ಶಾಲೆಯ ಮುಖ್ಯಶಿಕ್ಷಕರು, ಆನ್‌ಲೈನ್ ಮೂಲಕ ವಿದ್ಯಾವಾಹಿನಿ ಪೋರ್ಟಲ್‌ನಲ್ಲಿ ಮಾಹಿತಿ ದಾಖಲಿಸಬೇಕಿತ್ತು. ಪ್ರಶಸ್ತಿಗೆ ಅರ್ಹವಾದ ಮಾನದಂಡಗಳನ್ನು ನಮೂದಿಸಬೇಕಿತ್ತು. ಅದರಂತೆ ಹಲವು ಶಾಲೆಯವರು, ಪ್ರಶಸ್ತಿಗಾಗಿ ಪೋರ್ಟಲ್‌ನಲ್ಲಿ ಮಾಹಿತಿ ದಾಖಲಿಸಿದ್ದರು.**

# ಸೊಂಡೆಕೆರೆ ಶಾಲೆಯಲ್ಲಿ ಮಕ್ಕಳ ಸಂತೆ ಹಾಗೂ ವಿಜ್ಞಾನ ಮೇಳ ಕಾರ್ಯಕ್ರಮ

• **ಉದಯವಾಹಿನಿ, ಸೊಂಡೆಕೆರೆ**

ಹಿರಿಯೂರು ತಾಲ್ಲೂಕು ಸೊಂಡೆಕೆರೆ ಗ್ರಾಮ ಇಲ್ಲಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಿರಿಯೂರು ಇವರ ಸಹಕಾರದಲ್ಲಿ ಮಕ್ಕಳಿಗಾಗಿ ಚಿಣ್ಣರ ಸಂತೆ ಹಾಗೂ ವಿಜ್ಞಾನ ಮೇಳ ಏರ್ಪಡಿಸಲಾಗಿತ್ತು ಮಕ್ಕಳು ಬೆಳಿಗ್ಗೆ ಹತ್ತುಗಂಟೆಗೆ ಸರಿಯಾಗಿ ವ್ಯಾಪಾರ ಮಾಡಲು ತಾವು ತಂದಿದ್ದ ವಸ್ತುಗಳನ್ನು ತಮಗೆ ನಿಗದಿಪಡಿಸಿದ ಸ್ಥಳದಲ್ಲಿ ಕುಳಿತು ಅಣ್ಣ ಬನ್ನಿ ತಾಜಾ ಎಳನೀರು ತಗೋಳಿ...ಅಕ್ಕ ಬನ್ನಿ ಈರೇಕಾಯಿ ಬದ್ನೆಕಾಯಿ ಬರೀ ಹತ್ ರೂಪಾಯಿ ಎಂದು ಜೋರಾಗಿ ಕೂಗುತ್ತಾ ಅನುಭವಿ ವ್ಯಾಪಾರಿಗಳನ್ನೂ ನಾಚಿಸುವಂತೆ ಸರಿಯಾದ ತೂಕಮಾಡಿ ಕೊಟ್ಟು ಹಣ ಎಣಿಸಿಕೊಂಡರು.

ಇದಕ್ಕೂ ಮೊದಲು ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ಲಿಂಗರಾಜು ಟೇಪನ್ನು ಕಟ್ ಮಾಡುವುದರೊಂದಿಗೆ ಕಾರ್ಯಕ್ರಮ ಉದ್ಘಾಟಿಸಿದರು ಕಾರ್ಯಕ್ರಮ ಕುರಿತು ಮಾತನಾಡಿದ ಅವರು ಇಂತಹ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ಸಂವಹನ ವ್ಯಾಪಾರ ಕೌಶಲ್ಯ, ಸಹಕಾರ


ಉದಯವಾಹಿನಿ ಚಿತ್ರ

ಮನೋಭಾವ ಮತ್ತು ಸೃಜನಾತ್ಮಕತೆ ಹೆಚ್ಚುತ್ತದೆ ಎಂದರು. ಇದೇ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಆಯೋಜಿಸಿದ್ದ ವಿಜ್ಞಾನ ಮೇಳದಲ್ಲಿ ಮಕ್ಕಳು ಸ್ವಯಂ ತಾವೇ ಮಾಡಿದ ವಿವಿಧ ವಿಜ್ಞಾನದ ವಸ್ತುಗಳನ್ನು ಹಾಗೂ ವಿವಿಧ ವಿಜ್ಞಾನಿಗಳ ಚಿತ್ರಪಟಗಳನ್ನು ಪ್ರದರ್ಶಿಸಿ ಸಂದರ್ಶಕರಿಗೆ ವಿವರಣೆ ನೀಡಿದರು.

ಶಾಲಾ ಶಿಕ್ಷಕರಾದ ಶಿವರುದ್ರಪ್ಪ ಶೈಲಜ ಮಹಾಲಕ್ಷ್ಮೀ ಮಂಜುಳಾಪೂಜಾರ್ತಿ ದಯಾನಂದಗೌಡ ವಿಶಾಲಾಕ್ಷಿ ಗೌತಮಿ, ಸುಧಾ ಎಸ್ಡಿಎಂಸಿ ಸದಸ್ಯರು, ಪೋಷಕರು ಗ್ರಾಮದ ಮುಖಂಡರು ನಾಗರೀಕರು ಮಕ್ಕಳಿಂದ ಹಣ್ಣು ತರಕಾರಿ ಎಳನೀರು ಇತರೆ ವಸ್ತುಗಳನ್ನು ಖರೀದಿ ಮಾಡಿ

> **ಚಿಣ್ಣರ ಸಂತೆ ಕಾರ್ಯಕ್ರಮ ಏರ್ಪಡಿಸಿದ ಮುಖ್ಯ ಉದ್ದೇಶ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದು ಮತ್ತು ವ್ಯಾಪಾರ ಮನೋಭಾವವನ್ನು ಬೆಳೆಸುವುದು. ಮಕ್ಕಳು ಆಟಿಕೆಗಳು, ಹಸ್ತಕಲಾ ವಸ್ತುಗಳು, ಚಿತ್ರಗಳು, ಸಣ್ಣ ತಿಂಡಿಗಳು ಇತ್ಯಾದಿಗಳನ್ನು ಮಾರಾಟಕ್ಕೆ ಇಟ್ಟ ಅವರು ಗ್ರಾಹಕರೊಂದಿಗೆ ವ್ಯವಹಾರ ಮಾಡುವುದು ಮಾತನಾಡುವುದು, ಹಣ ಪಡೆಯುವುದು, ಚಿಲ್ಲರೆ ನೀಡುವುದು ಈರೀತಿ ಮಾಡುವುದರಿಂದ ಅವರ ಗಣಿತದ ಕಲಿಕೆ ಸುಲಭವಾಗುತ್ತದೆ ಮತ್ತು ಬಾಲ್ಯದಲ್ಲೇ ಜೀವನದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು ಕಲಿಯುತ್ತಾರೆ.**
> **-ಕಾಂತಬಾಬು, ಶಾಲೆಯ ಮುಖ್ಯ ಶಿಕ್ಷಕ**

ಮಕ್ಕಳ ವ್ಯಾಪಾರ ಕುಶಲತೆ ನೋಡಿ ಬೆರಗಾದರು.

# ಸಂಡೂರು ಪ್ರದೇಶದಲ್ಲಿ ಹೊಸ ಗಣಿಗಾರಿಕೆ ಬೇಡ

• **ಉದಯವಾಹಿನಿ ಬಳ್ಳಾರಿ**

ಗಣಿಗಾರಿಕೆಗೆ ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರದ ಉಕ್ಕು ಸಚಿವ ಹೆಚ್. ಡಿ. ಕುಮಾರಸ್ವಾಮಿ ಬಾಳೆಹೊನ್ನೂರಿನಲ್ಲಿ ನೀಡಿದ ಹೇಳಿಕೆಯನ್ನು ಗಣಿ ಬಾಧಿತ ಪ್ರದೇಶದ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿ ಆಕ್ಷೇಪಿಸಿದೆ. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಮಿತಿಯ ಮುಖಂಡರು. ಸುಪ್ರೀಂ ಕೋರ್ಟ್ ವಾರ್ಷಿಕ 30 ಮಿಲಿಯನ್ ಟನ್ ಅದಿರಿನ ಗಣಿಗಾರಿಕೆಗೆ ಅನುಮತಿ ನೀಡಿತ್ತು. ಇದಕ್ಕಿಂತಲೂ ಹೆಚ್ಚಿಗೆ ನಡೆಯುತ್ತಿರುವಾಗಲೂ. ಯಾರದೋ ಕೆಲವರ ಹಿತಾಸಕ್ತಿಗೆ ಕೆಐಒಸಿಎಲ್, ವಿಎಸ್ ಐಎಲ್ ಗೋಸ್ಕರ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆಗೆ ಕೇಳುವುದು ಸರಿಯಲ್ಲ.

ಅದಿರು ಬೇಕಾದರೆ ಎನ್ ಎಂಡಿಸಿ ಗಣಿಗಾರಿಕೆ ಪ್ರದೇಶದಿಂದ ಪಡೆಯಲಿ. ಅಭಿವೃದ್ಧಿಗೆ ಪೂರಕವಾಗಿ ಗಣಿಗಾರಿಕೆ ಇರಲಿ. ಆದರೆ ಪ್ರಕೃತಿಯನ್ನು ನಾಶ ಮಾಡುವ ಗಣಿಗಾರಿಗೆ ಅಪಾಯಕಾರಿ ಅದಕ್ಕಾಗಿ ನಮ್ಮ



ಉದಯವಾಹಿನಿ ಚಿತ್ರ

ವಿರೋಧ ಎಂದರು. ಉತ್ತಮ ರಾಜಕಾರಣಿಯಾಗಿರುವ ಕುಮಾರಸ್ವಾಮಿ ಅವರು ಸರಕಾರಿ ಸ್ವಾಮ್ಯದ ಕಂಪನಿಗಳಿಗೆ ಗಣಿಗಾರಿಕೆ ಕೇಳುವುದು ಸರಿ ಆದರೆ, ಅದಿರನ್ನು ಕೇಂದ್ರ ಸ್ವಾಮ್ಯದ ಎನ್.ಎಂ.ಡಿ.ಸಿ. ಯಿಂದ ಪಡೆಯಲಿ ಎಂದು ಶ್ರೀಶೈಲ ಆಲದಹಳ್ಳಿ ಆಗ್ರಹಿಸಿದರು. ಜೊತೆಗೆ ಎನ್.ಎಂ.ಡಿ.ಸಿ ಕುಡುತಿನಿಯಲ್ಲಿ ಕೈಗಾರಿಕೆ ಆರಂಭಿಸಲು ಪಡೆದಿರುವ ಜಮೀನಿನಲ್ಲಿ ಉಕ್ಕು ಕಾರ್ಖಾನೆ ಆರಂಭಿಸಲಿ ಎಂದರು. ಕುಮಾರಸ್ವಾಮಿ ಅವರು ಕೆಐಒಸಿಎಲ್ ಹೆಸರಲ್ಲಿ ಹೊಸದಾಗಿ ಗಣಿಗಾರಿಕೆ ಪಡೆದು ನಂತರ ಖಾಸಗಿಯವರಿಗೆ ನೀಡುವ ಹುನ್ನಾರ ಇದೆ ಎಂದು ಆರೋಪಿಸಿದರು.

# ಪಿಯು ಪರೀಕ್ಷೆಗೆ 51,938 ವಿದ್ಯಾರ್ಥಿಗಳು

• **ಉದಯವಾಹಿನಿ ಬೆಳಗಾವಿ**

ಇಂದಿನಿಂದ ಆರಂಭವಾಗುವ ಈ ಬಾರಿಯ ಪಿಯು ದ್ವಿತೀಯ ವಾರ್ಷಿಕ ಪರೀಕ್ಷೆಗೆ ಎರಡೂ ಶೈಕ್ಷಣಿಕ ಜಿಲ್ಲೆಗಳಿಂದ ಒಟ್ಟು 51,938 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟು 95 ಪರೀಕ್ಷಾ ಕೇಂದ್ರಗಳನ್ನು ಸಿದ್ಧಪಡಿಸಲಾಗಿದ್ದು, 27 ರೂಟ್‌ಗಳನ್ನು ನಿಗದಿಗೊಳಿಸಲಾಗಿದೆ.

ಜಿಲ್ಲೆಯಲ್ಲಿ 35,818 ವಿದ್ಯಾರ್ಥಿಗಳ ನೋಂದಣಿ ಎರಡೂ ಜಿಲ್ಲೆಗಳು ಸೇರಿ ಈ ಬಾರಿ 47,091 ವಿದ್ಯಾರ್ಥಿಗಳು ಹೊಸದಾಗಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ಜತೆಗೆ, 1,115 ಪರೀಕ್ಷಾರ್ಥಿಗಳು ಖಾಸಗಿಯಾಗಿ, 3,695 ರಿಪಿಟರ್ಸ್ ಹಾಗೂ 37 ಮಂದಿ ಸುಧಾರಣಾ ಪರೀಕ್ಷಾರ್ಥಿಗಳಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿ ಒಟ್ಟು 22,411 ಮಂದಿ ಪರೀಕ್ಷಾರ್ಥಿಗಳಿದ್ದು, 19,981 ಮಂದಿ ಮೊದಲಬಾರಿ ಹಾಜರಾಗಲಿದ್ದಾರೆ. ಅದೇ ರೀತಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ 29,527 ಮಂದಿ ನೋಂದಣಿ ಮಾಡಿಕೊಂಡಿದ್ದು ಇದರಲ್ಲಿ 27,110 ಹೊಸದಾಗಿ ಪರೀಕ್ಷೆ ಬರೆಯಲಿದ್ದಾರೆ. ಚಿಕ್ಕೋಡಿಯಲ್ಲಿ 54 ಕೇಂದ್ರ ಹಾಗೂ ಬೆಳಗಾವಿಯಲ್ಲಿ 41 ಪರೀಕ್ಷಾ ಕೇಂದ್ರಗಳು ಇವೆ.

**ಇಲಾಖೆಯಿಂದ ಸಂಪೂರ್ಣ ಸಿದ್ಧತೆ:** ಪದವಿಪೂರ್ವ ಶಿಕ್ಷಣ ಇಲಾಖೆಯ ಮಾರ್ಗದರ್ಶಿ ಪ್ರಕಾರ ಎರಡೂ ಜಿಲ್ಲೆಗಳಲ್ಲಿ ಸುಗಮವಾಗಿ ಪರೀಕ್ಷೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಡಿಡಿಪಿಯು ಎಂ.ಎಂ. ಕಾಂಬಳೆ ತಿಳಿಸಿದ್ದಾರೆ. ಪ್ರಶ್ನೆ ಪತ್ರಿಕೆಗಳನ್ನು ಜತನ ಮಾಡಲು ಈ ಬಾರಿ ತ್ರಿ-ಮ್ಯಾನ್ ಕಮಿಟಿ ಮಾಡಲಾಗಿದೆ.


ಉದಯವಾಹಿನಿ ಚಿತ್ರ

ಇದರಲ್ಲಿ ವಿಶೇಷ ಜಿಲ್ಲಾಧಿಕಾರಿ, ಜಿಲ್ಲಾ ಖಜಾನಾಧಿಕಾರಿ ಹಾಗೂ ಡಿಡಿಪಿಯು ಇರುತ್ತಾರೆ. ಮೂವರ ಸಮ್ಮುಖದಲ್ಲಿ ಖಜಾನೆಯಿಂದ ತೆಗೆಯುವ ಪ್ರಶ್ನೆ ಪತ್ರಿಕೆಗಳ ಬಂಡಲ್‌ಗಳನ್ನು ಸರಬರಾಜು ಮಾಡಲು ರೂಟ್ ಆಫೀಸರ್‌ಗಳನ್ನೂ ನಿಯೋಜನೆ ಮಾಡಲಾಗಿದೆ. ಯಾವುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಬಹಿರಂಗವಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಎಲ್ಲಾ ಪರೀಕ್ಷಾ ಕೊಠಡಿಗಳಲ್ಲೂ ಸಿಸಿಟಿವಿ ಕಣ್ಗಾವಲು ಇರಲಿದೆ. ನಕಲಿಗೆ ಅವಕಾಶ ಸಾಧ್ಯವಾಗದಂತೆ ನಿಗಾವಹಿಸಲಾಗಿದೆ. ವಿದ್ಯಾರ್ಥಿಗಳು ಭಯ ಬಿಟ್ಟು ಪರೀಕ್ಷೆ ಬರೆಯಬೇಕು ಎಂದೂ ಹೇಳಿದರು.

**ಎರಡು ಪೂರ್ವಭಾವಿ ಪರೀಕ್ಷೆಗಳಲ್ಲೂ ಫೇಲ್:** ಪ್ರತಿ ವಾರ್ಷಿಕ ಪರೀಕ್ಷೆಗೂ ಮುನ್ನ ಒಂದು ಪೂರ್ವಭಾವಿ ಪರೀಕ್ಷೆ ನಡೆಸಲಾಗುತ್ತಿತ್ತು. ಆದರೆ, ಈ ಬಾರಿ ವಿದ್ಯಾರ್ಥಿಗಳ ಭಯ ಹೋಗಲಾಡಿಸಲು ಸರಣಿಯಾಗಿ ಎರಡು ಪೂರ್ವಭಾವಿ ಪರೀಕ್ಷೆ ತೆಗೆದುಕೊಳ್ಳಲಾಗಿದೆ.

# ಮಾರ್ಚ್ 6 ರಂದು ಔರಾದ್ ಬಂದ್ ಕರಾರು ಪತ್ರ ಬಿಡುಗಡೆ

• **ಉದಯವಾಹಿನಿ ಔರದ್**

ಬಲಗೈ ಒಳಮೀಸಲಾತಿ ಹೋರಾಟ ಸಮಿತಿಯಿಂದ ಮಾರ್ಚ್ 6 ರಂದು ಹಮ್ಮಿಕೊಂಡಿರುವ ಔರಾದ್ ಬಂದ್‌ಗೆ ತಾಲ್ಲೂಕಿನ ಸಮಸ್ತ ಜನತ ಹಾಗೂ ವ್ಯಾಪಾರಸ್ಥರು ಬೆಂಬಲ ನೀಡಬೇಕು ಎಂದು ಸಮಿತಿಯ ಪ್ರಮುಖರು ಮನವಿ ಮಾಡಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಔರಾದ್ ಬಂದ್ ಕರಾರು ಪತ್ರ ಬಿಡುಗಡೆ ಮಾಡಲಾಯಿತು. ಕರಾರು ಪತ್ರ ಬಿಡುಗಡೆಗೊಳಿಸಿ ಬಲಗೈ ಒಳಮೀಸಲಾತಿ ಹೋರಾಟ ಸಮಿತಿ ಗೌರವಾಧ್ಯಕ್ಷ ಸುಭಾಷ್ ಲಾಧಾ ಮಾತನಾಡಿ ಒಳಮೀಸಲಾತಿಗೆ ಸಂಬಂಧಿಸಿದಂತೆ ಇರುವ ಗೊಂದಲಗಳು, ಸಮಸ್ಯೆಗಳು ಹಾಗೂ ನ್ಯಾಯಾಲಯದ ಅಡೆತಡೆಗಳು ನಿವಾರಣೆಯಾಗುವ ತನಕ ಒಳಮೀಸಲಾತಿ ಕೈ ಬಿಟ್ಟು ಹಳೆ ಮೀಸಲಾತಿ ಜಾರಿಗೆ ತಂದು ನೇಮಕಾತಿ ಮತ್ತು ಶಿಕ್ಷಣಕ್ಕೆ ತೊಂದರೆ ಆಗದಂತೆ ಸೂಕ್ತ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಬಂದ್‌ಗೆ ಕರೆ ನೀಡಲಾಗಿದೆ. ಒತ್ತಾಯ ಪೂರ್ವಕವಾಗಿ ಬಂದ್ ಮಾಡಬೇಕಾಗಿಲ್ಲ. ಅದರ ಬದಲು ನಮ್ಮ ಸಮಾಜದ ನ್ಯಾಯಯುತ ಬೇಡಿಕೆಗಾಗಿ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.

ಸಮಿತಿ ಅಧ್ಯಕ್ಷ ಪ್ರವೀಣ್ ಕಾರಂಜೆ ಮಾತನಾಡಿ ಒಳ ಮೀಸಲಾತಿ ಆದೇಶದಲ್ಲಿ ವಿವಿಧ


ಉದಯವಾಹಿನಿ ಚಿತ್ರ

> **ಎ,ಬಿ,ಸಿ ಎಂದು ವರ್ಗೀಕರಿಸಿ, ಒಳಮೀಸಲಾತಿ ಮಾಡಿ, ಸಹೋದರರಂತಿದ್ದ ಪರಿಶಿಷ್ಟರ ನಡುವೆ ಜಗಳ ಹಚ್ಚಲು ನಾಗಮೋಹನದಾಸ್ ವರದಿ ಜಾರಿಗೆ ತರಲು ಸರ್ಕಾರ ಹೊರಟಿದೆ. ಇದು ಸರಿಯಲ್ಲ, ಇದರ ವಿರುದ್ಧ ಔರಾದ್ ಪಟ್ಟಣವನ್ನು ಬಂದ್ ಮಾಡಿ, ಹೋರಾಟ ನಡೆಸಲು ನಿರ್ಧರಿಸಲಾಗಿದೆ. ತಾಲ್ಲೂಕಿನ ಬಲಗೈ ಸಮುದಾಯದ ಮುಖಂಡರು, ಚಿಂತಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.**
> **-ಸಂತೋಷ ಶಿಂಧೆ ಪ್ರಧಾನ ಕಾರ್ಯದರ್ಶಿ, ಬಲಗೈ ಒಳಮೀಸಲಾತಿ ಹೋರಾಟ ಸಮಿತಿ**

ಇಲಾಖೆಗಳ ನೇಮಕಾತಿಯಲ್ಲಿ ಬಲಗೈ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ಮರು ಆದೇಶ ಹೊರಡಿಸಬೇಕೆಂಬುದು ಪ್ರತಿಭಟನೆಯ ಉದ್ದೇಶ ಆಗಿದೆ.

ಬಲಗೈ ಸಮುದಾಯದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಹಿನ್ನಡೆಯುಂಟಾಗುವ ರೀತಿಯಲ್ಲಿ ಕ್ರಮ ಕೈಗೊಂಡಿರುವುದನ್ನು ಖಂಡಿಸಿ ಮಾರ್ಚ್ 6 ರಂದು ಔರಾದ್ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುತ್ತಿದೆ.

ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ಸುಭಾಷ್ ಲಾಧಾ, ಅಧ್ಯಕ್ಷ ಪ್ರವೀಣ್ ಕಾರಂಜೆ, ಪ್ರಧಾನ ಕಾರ್ಯದರ್ಶಿ ಸಂತೋಷ ಶಿಂಧೆ, ಉಪಾಧ್ಯಕ್ಷ ದಿನೇಶ್ ಶಿಂಧೆ, ತುಕಾರಾಮ ಹಸನ್ಮುಖಿ, ಅಖಿಲೇಶ್ ಸಾಗರ್, ಸಂತೋಷ ಸೂರ್ಯವಂಶಿ, ಮಾರುತಿ ಜಗದಾಳೆ, ಅನಿಲ ಭುಜಂಗೆ, ಆನಂದ ಗಲಗಲೆ, ಪ್ರಕಾಶ್ ಕಾಂಬಳೆ, ರಾಜಕುಮಾರ ಶಿಂಧೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಗಂಗಾವತಿ ನ್ಯಾಯಾಲಯದಿಂದ ಮತ್ತೊಂದು ಐತಿಹಾಸಿಕ ತೀರ್ಪು

## ಶಿಕ್ಷಕ ಮೊಹಮದ್ ಹಜರುದ್ದೀನ್‌ಗೆ ಜೀವಿತಾವಧಿ ಶಿಕ್ಷೆ, ಅಕ್ಷರ ಕಲಿಸುವ ಕೈಗಳು ಮಾಡಿದ ಘೋರ ಅಪರಾಧ

• **ಉದಯವಾಹಿನಿ ಕಾರಟಗಿ**

ಪಟ್ಟಣದ ಜೆಪಿ ನಗರದ ನಿವಾಸಿ ಪ್ರಕರಣದ ಆರೋಪಿಯಾದ ಮೊಹ್ಮದ್ ಅಜುರುದ್ದೀನ್ ಈತನು 30.06.2022 ರಂದು ಘಟನೆಯ ಸಮಯದಲ್ಲಿ ರಾಯಚೂರು ಜಿಲ್ಲೆ ಸಿಂಧನೂರಿನ ತಾಲ್ಲೂಕಿನ ಸಿಂಗಾಪೂರ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ, ಆ ಸಮಯದಲ್ಲಿ ನೊಂದ ಮಹಿಳೆಗೆ ಪರಿಚಯಾಗಿದ್ದು ಆಕೆಯ ಅಂಗವಿಕಲ ಮಗಳಿಗೆ ಮನೆ ಪಾಠ ಮಾಡಿ ಹೆಚ್ಚಿನ ವಿದ್ಯಾಭ್ಯಾಸ ಕೊಡುಸುತ್ತೇನೆ. ಸರಕಾರಿ ಸವಲತ್ತುಗಳನ್ನು ಕೊಡುಸುತ್ತೇನೆ ಎಂದು ಹೇಳಿ ಆಕೆಯನ್ನು ಪುಸಲಾಯಿಸಿ ಆಕೆಯ ಮೇಲೆ ಅತ್ಯಾಚಾರ ಮಾಡಿದ್ದು ಅಲ್ಲದೆ ಅದನ್ನು ತನ್ನ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡು ಅದನ್ನು ಆಕೆಗೆ ತೋರಿಸಿ ಆಕೆ ತನಗೆ ಲೈಂಗಿಕ ಕ್ರಿಯೆಗೆ ಸಹಕರಿಸದಿದ್ದರೆ ಆ ವಿಡಿಯೋವನ್ನು ವೈರಲ್ ಮಾಡುವುದಾಗಿ ಹೆದರಿಸಿ ಆಕೆಯ ಮೇಲೆ ಹಲವು ಬಾರಿ ಅತ್ಯಾಚಾರ ಮಾಡಿದ್ದು ಇರುತ್ತದೆ.

ನೊಂದ ಮಹಿಳೆಯ ಮೇಲೆ ತಾನು ಹಠ ಸಂಭೋಗದ ವಿಡಿಯೋ ಚಿತ್ರೀಕರಣವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದು ಇರುತ್ತದೆ. ಕಾರಣ ಆರೋಪಿತನು ವಿರುದ್ಧ ಕಲಂ







ಉದಯವಾಹಿನಿ ಚಿತ್ರ

376(2) 354, 355, 323, 504, 506.66 (E) IT ACT 2000 ಐಪಿಸಿ ಭಾರತೀಯ ದಂಡ ಸಂಹಿತೆ ಪ್ರಕಾರ ಅಪರಾಧವೆಸಗಿದ್ದು ತನಿಖೆಯಿಂದ ಮತ್ತು ಸಾಕ್ಷ್ಯಾಧಾರಗಳಿಂದ ಧೃಡಪಟ್ಟಿದ್ದರಿಂದ ಆರೋಪಿತನಾದ ಮೊಹ್ಮದ್ ಅಜುರುದ್ದೀನ್ ತಂದೆ ಅಬ್ದುಲ್ ಹಮೀದ ಸಾ ಜೆ.ಪಿ ನಗರ ಕಾರಟಗಿ ಈತನಿಗೆ ಗಂಗಾವತಿ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಿತಾವಧಿ ಶಿಕ್ಷೆ ನೀಡಿ ತೀರ್ಪು ಹೊರಡಿಸಿದೆ.

**ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ**

ನ್ಯಾಯಾಧೀಶರಾದ ಶ್ರೀ ಸದಾನಂದ ನಾಗಪ್ಪ ನಾಯ್ಕ ಇವರು ಆರೋಪಿಯು ತಪ್ಪಿಸ್ಥ ಎಂದು ತೀರ್ಪು ನೀಡಿ, ಆರೋಪಿತನಿಗೆ ಭಾರತೀಯ ದಂಡ ಸಂಹಿತೆ ಕಲಂ, 376(2)(ಎನ್) ಐಪಿಸಿ ಅಪರಾಧಕ್ಕೆ ಜೀವಿತಾವಧಿ ಶಿಕ್ಷೆ ಹಾಗೂ ಆರೋಪಿಯು ಒಟ್ಟು 05 ಲಕ್ಷ 50.000=00 ರೂ. ಹಣವನ್ನು ಸಂತ್ರಸ್ತ ಮಹಿಳೆಗೆ ಪರಿಹಾರವಾಗಿ ಕೊಡಬೇಕು ಮತ್ತು 50,000-00 ಹಣವನ್ನು ರಾಜ್ಯಕ್ಕೆ ತುಂಬಬೇಕೆಂದು ಮಾನ್ಯ ನ್ಯಾಯಾಲಯವು ಆದೇಶಿಸಿ ದಿನಾಂಕ: 27-02-2026 ರಂದು ತೀರ್ಪು ನೀಡಿದ್ದು ಇರುತ್ತದೆ.

ಅಭಿಯೋಜನಾ ಪರವಾಗಿ ಸರ್ಕಾರಿ ಅಭಿಯೋಕರಾದ ಶ್ರೀಮತಿ ನಾಗಲಕ್ಷ್ಮೀ ಎಸ್ ಇವರು ವಾದ ಮಂಡಿಸಿರುತ್ತಾರೆ. ಕಾರಟಗಿ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿಯವರಾದ ನಾಗರಾಜ ಇವರು ತನಿಖೆಯ ಕಾಲಕ್ಕೆ ತನಿಖಾಧಿಕಾರಿಗೆ ಸಹಕರಿಸಿದ್ದು ಇರುತ್ತದೆ. ಅದೇ ರೀತಿ ಕಾರಟಗಿ ಪೊಲೀಸ್ ಠಾಣೆಯ ಅಂದಿನ ತನಿಖಾಧಿಕಾರಿ ವಿ ಎಸ್ ಹಿರೇಮಠ್ ನ್ಯಾಯಾಲಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುತ್ತಾರೆ.ಪೊಲೀಸ್ ಸಿಬ್ಬಂದಿಯವರಾದ ಕಾರ್ತಿಕ, ಅಕ್ಷರಸಾಬ್ ಮತ್ತು ವಿಜಯರವರು ಪ್ರಕರಣದ ವಿಚಾರಣೆಯ ಸಮಯದಲ್ಲಿ ಸಾಕ್ಷಿಗಳನ್ನು ಸಮಯಕ್ಕೆ ಸರಿಯಾಗಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕಷ್ಟು ಸಹಕಾರ ನೀಡಿದ್ದು ಇರುತ್ತದೆ.ಪ್ರಕರಣದ ಬೆನ್ನು ಹತ್ತಿದ ವಿಜಯವಾಣಿ ವರದಿಗಾರರಾದ ಪಂಪಾರೆಡ್ಡಿ ಅರಳಿಹಳ್ಳಿ ಪ್ರಕರಣದ ಸೂಕ್ಷ್ಮತೆಯ ಕುರಿತು ವಿಸ್ತೃತ ವರದಿ ಬರೆದು ಅಧಿಕಾರಿಗಳ ಗಮನ ಸೆಳೆದು ಅಪರಾಧಿಯ ಅಪರಾಧದ ಕರಾಳತೆಯನ್ನು ರಾಜ್ಯಮಟ್ಟದಲ್ಲಿ ಹೊರಹಾಕಿದ್ದಾರೆ.

## ಮಿನಿ ನ್ಯೂಸ್

### ಕಾರ್ಮಿಕರು ಸರ್ಕಾರದ ಸೌಲಭ್ಯ ಪಡೆದುಕೊಳ್ಳಲಿ

• **ಉದಯವಾಹಿನಿ ರಬಕವಿ**

ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘ, ಕಾರ್ಮಿಕ ಇಲಾಖೆ ಸಹಯೋಗದಲ್ಲಿ ಬನಹಟ್ಟಿಯ ಶ್ರೀಕಾಡಸಿದ್ದೇಶ್ವರ ದೇವಸ್ಥಾನ ಆವರಣದಲ್ಲಿ ಅಸಂಘಟಿತ ಕಾರ್ಮಿಕರಿಗೆ ಆಯೋಜಿಸಿದ್ದ ನೊಂದಣಿ ಅಭಿಯಾನ ಕಾರ್ಡ್ ವಿತರಣೆ ಹಾಗೂ ಪಿಂಚಣಿ ಯೋಜನೆಯ ನೊಂದಣಿ ಅಭಿಯಾನ ಜರುಗಿತು.

ಕಾರ್ಮಿಕ ಇಲಾಖೆ ವೃತ್ತ ನಿರೀಕ್ಷಕ ರಮೇಶ ವಂಗಿ ಅಸಂಘಟಿತ ವಲಯದ ಕಾರ್ಮಿಕರಲ್ಲಿ ಕೈಮಗ್ಗ ನೇಕಾರರು, ಪವರ್‌ಲುಂ ನೇಕಾರರು, ಟೇಲರ್, ಕುಂಬಾರರು, ಬೀದಿ ವ್ಯಾಪಾರಿಗಳು, ಪತ್ರಿಕೆ ಹಂಚುವವರು, ಆಟೋ ಚಾಲಕರು, ದ್ವಿಚಕ್ರ ರಿಪೇರಿದಾರರು, ಹಮಾಲಿ ಕಾರ್ಮಿಕರು, ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಕಟ್ಟಡ ಹಾಗೂ ವಾಣಿಜ್ಯ ವಾಹನ ಕಾರ್ಮಿಕರು ಸೇರಿದಂತೆ ಅನೇಕರು ಒಳಪಡುತ್ತಿದ್ದು, ಇಂಥ ಅಸಂಘಟಿತ ಕಾರ್ಮಿಕರಿಗೆ ಸೌಲಭ್ಯ ಕಲ್ಪಿಸಲು ಸರ್ಕಾರ ಹತ್ತಾರು ಯೋಜನೆಗಳನ್ನು ಜಾರಿಗೊಳಿಸಿದೆ. ಕಾರ್ಮಿಕರ ಆರೋಗ್ಯ, ಕಾರ್ಮಿಕರ ಮತ್ತವರ ಮಕ್ಕಳ ವಿದ್ಯಾಭ್ಯಾಸ, ವಿವಾಹ, ಅಂಗವೈಕಲ್ಯತೆ ಮೊದಲಾದ ಸಂದರ್ಭಗಳಲ್ಲಿ ಆರ್ಥಿಕ ನೆರವು ದೊರೆಯುತ್ತದೆ. ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಸೌಲಭ್ಯವೂ ಇದ್ದು, ಎಲ್ಲಾ ಸ್ತರದ ಕಾರ್ಮಿಕರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ನೆಮ್ಮದಿಯ ಜೀವನ ನಡೆಸಬೇಕೆಂದರು.

### ಇತಿಹಾಸ ಅರ್ಥೈಸುವಲ್ಲಿ ಶಾಸನಗಳ ಪಾತ್ರ ಪ್ರಮುಖ

• **ಉದಯವಾಹಿನಿ ನವಲಗುಂದ**

ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಅರ್ಥೈಸುವಲ್ಲಿ ಶಾಸನಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ ಎಂದು ಇತಿಹಾಸ ತಜ್ಞರಾದ ಹನುಮಾಕ್ಷಿ ಗೋಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಸ್ಥಳೀಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಇತಿಹಾಸ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಇವತ್ತಿನ ಪೀಳಿಗೆ ಕರ್ನಾಟಕದ ಇತಿಹಾಸವನ್ನು ತಿಳಿದುಕೊಳ್ಳಲು ಹಲವೆಡೆ ಇರುವ ಶಾಸನಗಳ ಮುಖಾಂತರ ಅಧ್ಯಯನ ಮಾಡುವ ಅವಶ್ಯಕತೆ ಇದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಎಂ ಬಿ ಬಾಗಡಿ ಮಾತನಾಡಿ ಕರ್ನಾಟಕದ ಶಾಸನಗಳು ರಾಜ್ಯದ ಪ್ರಾಚೀನ ಇತಿಹಾಸ, ಭಾಷೆ, ಸಾಹಿತ್ಯ, ಧರ್ಮ ಮತ್ತು ಸಾಮಾಜಿಕ-ಸಾಂಸ್ಕೃತಿಕ ಜೀವನದ ಮೇಲೆ ಬೆಳಕು ಚೆಲ್ಲುವ ನಂಬಲರ್ಹ ದಾಖಲೆಗಳಾಗಿವೆ. ಶಾಸನಗಳ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳು ಆಗಬೇಕಾಗಿದೆ ಎಂದರು.

### ಅಕಾಲಿಕ ಮಳೆಗೆ ಹೈರಾಣಾದ ಕೃಷಿಕ

• **ಉದಯವಾಹಿನಿ ಶಿರಸಿ**

ಎಲೆಚುಕ್ಕಿ ರೋಗ, ಕೊಳೆರೋಗ ಹಾಗೂ ಹವಾಮಾನ ವೈಪರೀತ್ಯದ ಹೊಡೆತಕ್ಕೆ ಸಿಲುಕಿ ತತ್ತರಿಸಿದ್ದ ರೈತರಿಗೆ, ಇದೀಗ ಅಕಾಲಿಕ ಮಳೆ ದೊಡ್ಡ ಶಾಪವಾಗಿ ಪರಿಣಮಿಸಿದೆ. ಚಾಲಿ ಅಡಿಕೆ ಒಣಗಿಸುವ ಪ್ರಕ್ರಿಯೆ ಭರದಿಂದ ಸಾಗಿದ್ದು, ಎರಡು ದಿನಗಳಿಂದ ಸಂಜೆ ವೇಳೆಗೆ ಅನಿರೀಕ್ಷಿತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬೆಳೆಗಾರರು ದಿಕ್ಕು ತೋಚದಂತಾಗಿದ್ದಾರೆ.

ಚಾಲಿ ಅಡಿಕೆಯನ್ನು ಕನಿಷ್ಠ 45 ದಿನಗಳ ಕಾಲ ಪ್ರಖರ ಬಿಸಿಲಿನಲ್ಲಿ ಒಣಗಿಸಬೇಕಾಗುತ್ತದೆ. ಆದರೆ, ಈಗ ನಿತ್ಯವೂ ಮೋಡ ಕವಿದ ವಾತಾವರಣ ಇರುವುದು ಹಾಗೂ ಸಂಜೆಯಾಗುತ್ತಿದ್ದಂತೆ ಮಳೆ ಸುರಿಯುತ್ತಿರುವುದು ಅಡಿಕೆಯ ಗುಣಮಟ್ಟದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎನ್ನುತ್ತಾರೆ ಬೆಳೆಗಾರರು. ಚಾಲಿ ಅಡಿಕೆ ಇನ್ನೇನು ಒಣಗಿ ಮನೆಯೊಳಗೆ ಸೇರಿಸಬೇಕು ಎಂಬ ಹಂತದಲ್ಲಿ ಮಳೆಗೆ ಸಿಲುಕಿದೆ. ನಿತ್ಯವೂ ಮೋಡದ ವಾತಾವರಣ ಇರುವುದರಿಂದ ಅಡಿಕೆ ಸರಿಯಾಗಿ ಒಣಗುತ್ತಿಲ್ಲ. ಹೀಗಾದರೆ ಅಡಿಕೆಗೆ ಶಿಲೀಂದ್ರ ಬಂದು ಅದರ ಗುಣಮಟ್ಟ ಸಂಪೂರ್ಣವಾಗಿ ಹಾಳಾಗುತ್ತದೆ. ಅಡಿಕೆ ಒದ್ದೆಯಾದಂತೆಲ್ಲಾ ಅದರ ಬಣ್ಣ ಕೆಡುತ್ತದೆ ಮತ್ತು ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಸಿಗುವುದು ಕಷ್ಟವಾಗುತ್ತದೆ. ಸಂಜೆ ವೇಳೆಗೆ ಮಳೆಯಾಗುತ್ತಿದೆ, ಒಣಗಲು ಸರಿಯಾದ ಬಿಸಿಲು ಸಿಗುತ್ತಿಲ್ಲ. ಪದೇ ಪದೇ ತಾಡಪತ್ರಿ ಮುಚ್ಚಿ ಅಡಿಕೆಯನ್ನು ಸಂರಕ್ಷಿಸಿಕೊಳ್ಳುವ ಅನಿವಾರ್ಯತೆ ಎದುರಾಗಿದೆ ಎಂದು ಕೃಷಿಕ ರಾಜಾರಾಮ ಹೆಗಡೆ ತಮ್ಮ ಅಳಲು ತೋಡಿಕೊಂಡಿದ್ದಾರೆ.

### 508 ವೃದ್ಧರಿಗೆ ಪಿಂಚಣಿ ಸ್ಥಗಿತ

• **ಉದಯವಾಹಿನಿ ಕಾರವಾರ**

ಗ್ಯಾರಂಟಿ ಯೋಜನೆ ಫಲಾನುಭವಿಗಳ ಪೈಕಿ ಯೋಜನೆ ಸೌಲಭ್ಯ ಪಡೆಯಲು ಅರ್ಹರಲ್ಲದವರನ್ನು ಹುಡುಕಾಡುತ್ತಿರುವ ಸರ್ಕಾರ, ಸದ್ಯ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಲ್ಲೂ ಅಂತದ್ದೇ ಅನ್ವೇಷಣೆ ನಡೆಸಿದೆ. ಯೋಜನೆಗೆ ಅರ್ಹರಲ್ಲದ 508 ಮಂದಿ ವೃದ್ಧರಿಗೆ ಪಿಂಚಣಿ ಸ್ಥಗಿತಗೊಳಿಸಲಾಗಿದೆ. ವೃದ್ಧಾಪ್ಯ ಯೋಜನೆ ಪಡೆಯುತ್ತಿದ್ದ 236 ಮಂದಿ, ಸಂಧ್ಯಾ ಸುರಕ್ಷಾ ಯೋಜನೆ ಲಾಭ ಪಡೆಯುತ್ತಿದ್ದ 272 ಮಂದಿಯನ್ನು ಪಟ್ಟಿಯಿಂದ ಹೊರಗಿಡಲಾಗಿದೆ. ಅವರಿಗೆ ಮಾಸಿಕವಾಗಿ ಸಂದಾಯವಾಗುತ್ತಿದ್ದ ಪಿಂಚಣಿ ಮೊತ್ತ ಸ್ಥಗಿತಗೊಳಿಸಲಾಗಿದೆ ಎನ್ನುತ್ತಾರೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆ ವಿಭಾಗದ ಅಧಿಕಾರಿಗಳು. ಇಂದಿರಾ ಗಾಂಧಿ ರಾಷ್ಟ್ರೀಯ ಪಿಂಚಣಿ ಯೋಜನೆಯಡಿ 60 ವರ್ಷ ಮೇಲ್ಪಟ್ಟ ಹಾಗೂ 64 ವರ್ಷದವರೆಗಿನ ವೃದ್ಧರಿಗೆ ಮಾಸಿಕ ರೂ. 800 ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ. 65 ವರ್ಷ ಮೇಲ್ಪಟ್ಟವರಿಗೆ ಮಾಸಿಕ ರೂ.1,200 ಖಾತೆಗೆ ಸಂದಾಯವಾಗುತ್ತಿದೆ.

ಈ ಯೋಜನೆಗಳ ಸೌಲಭ್ಯ ಪಡೆಯುವವರು ಬಡತನ ರೇಖೆಗಿಂತ ಕೆಳಗೆ ವಾಸಿಸುವ ಕುಟುಂಬದವರಾಗಿರಬೇಕು ಹಾಗೂ ವಾರ್ಷಿಕ ರೂ.32 ಸಾವಿರಕ್ಕಿಂತ ಕಡಿಮೆ ಆದಾಯ ಹೊಂದಿರಬೇಕು ಎಂಬುದಾಗಿ ನಿಯಮವಿದೆ. ಈ ನಿಯಮಗಳ ಹೊರತಾಗಿರುವವರನ್ನು ಯೋಜನೆ ವ್ಯಾಪ್ತಿಗೆ ಸೇರಿಸಲು ಆಗದು ಎಂದು ಅಧಿಕಾರಿಗಳು ಹೇಳಿದ್ದಾರೆ.

### ಬ್ಯಾಂಕ್ ಖಾತೆ ವಿವರ ಪಡೆದು ವಂಚನೆ; ಮೂವರ ಬಂಧನ

• **ಉದಯವಾಹಿನಿ ಶಿವಮೊಗ್ಗ**

ಬ್ಯಾಂಕ್ ಖಾತೆಯ ವಿವರ ಪಡೆದು ಅದರ ಮೂಲಕ ಸೈಬರ್ ವಂಚನೆಯ ಮೂಲಕ ಗಳಿಸಿದ ಹಣ ಅಕ್ರಮವಾಗಿ ವರ್ಗಾವಣೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಸೈಬರ್ ಕ್ರೈಂ ಠಾಣೆ ಪೊಲೀಸರು ದೇಶದಾದ್ಯಂತ 352ಕ್ಕೂ ಹೆಚ್ಚು ಪ್ರಕರಣಗಳಲ್ಲಿ ರೂ.82 ಕೋಟಿಗೂ ಹೆಚ್ಚು ಹಣ ವಂಚನೆ ಆಗಿರುವುದನ್ನು ಬಯಲಿಗೆಳೆದಿದ್ದಾರೆ.


ಆರೋಪಿಗಳು ವಂಚನೆಗೆ ಬಳಸಿದ್ದ 15 ಮ್ಯೂಲ್ ಅಕೌಂಟ್‌ಗಳಲ್ಲಿ ರೂ.14,71 ಕೋಟಿಗೂ ಹೆಚ್ಚು ಹಣ ವರ್ಗಾವಣೆಯಾಗಿದೆ.

ಇಲ್ಲಿನ ಶರಾವತಿ ನಗರದ ಶಾರದಮ್ಮ ಕಾಂಪೌಂಡ್ ನಿವಾಸಿ ಎಲೆಕ್ಟ್ರಾನಿಕ್ ಕೆಲಸಗಾರ ಆರ್.ಸಿ.ಜಗದೀಶ (43), ಚಿಕ್ಕಮಗಳೂರಿನ ಶಂಕರಪುರ ನಿವಾಸಿ, ಮೀನು ವ್ಯಾಪಾರಿ ಅರ್ಷದ್ (39), ಶಿವಮೊಗ್ಗದ ಹೊಸಮನೆ ವಜೇಶ್ವರಿ ದೇವಸ್ಥಾನದ ಬಳಿಯ ನಿವಾಸಿ, ಮಾರ್ಕೆಟಿಂಗ್ ನೆಟ್‌ವರ್ಕ್ ಕೆಲಸ ಮಾಡುವ ಟಿ.ಅನಂತ (34) ಬಂಧಿತರು.

# ಪಾಕ್-ಅಫ್ಘಾನ್ ಯುದ್ಧಕ್ಕೆ ಭಾರತವೇ ಕಾರಣ: ಪಾಕ್ ರಕ್ಷಣಾ ಸಚಿವ

**ಇಸ್ಲಾಮಾಬಾದ್:** ಒಂದು ಕಾಲದಲ್ಲಿ ಆಪ್ತಮಿತ್ರರಂತಿದ್ದ ಪಾಕಿಸ್ತಾನ ಹಾಗೂ ತಾಲಿಬಾನಿಗಳು ಸದ್ಯ ಬದ್ಧವೈರಿಗಳಂತೆ ಒಬ್ಬರ ಮೇಲೊಬ್ಬರು ಕಾಲುಕೆರೆದು ಯುದ್ಧಕ್ಕೆ ನಿಂತಿದ್ದಾರೆ. ಹೀಗೆ ಉಭಯದೇಶಗಳ ನಡುವೆ ಗಡಿ ಸಂಘರ್ಷ ಉಲ್ಬಣವಾಗಿದ್ದು, ಪಾಕಿಸ್ತಾನ ಅಫ್ಘಾನಿಸ್ತಾನದ ಮೇಲೆ ಓಪನ್ ವಾರ್ ಘೋಷಿಸಿದೆ. ಆದರೆ, ಇದರಲ್ಲೂ ಪಾಕಿಸ್ತಾನ ಮಾತ್ರ ದುಷ್ಟಬುದ್ಧಿಯನ್ನು ತೋರಿಸಿದ್ದು, ಪಾಕ್-ಅಫ್ಘಾನ್ ನಡುವಿನ ಯುದ್ಧಕ್ಕೆ ಭಾರತ ಕಾರಣ.

ತಾಲಿಬಾನಿಗಳು ಭಾರತದ ಪರವಾಗಿ ಪ್ರಾಕ್ಸಿ ಯುದ್ಧ ಮಾಡಿತ್ತಿದೆ ಎಂದು ಪಾಕ್ ರಕ್ಷಣಾ ಸಚಿವ ಖವಾಜಾ ಆಸೀಫ್ ಆರೋಪ ಮಾಡಿದ್ದಾರೆ. ಪಾಕ್-ಅಫ್ಘಾನ್ ಯುದ್ಧಕ್ಕೆ ಭಾರತವೇ ಕಾರಣ ಎಂದ ಪಾಕ್ ರಕ್ಷಣಾ ಸಚಿವ ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದ ನಡುವೆ ಗಡಿ ಸಂಘರ್ಷ ಸದ್ಯ ಯುದ್ಧಕ್ಕೆ ತಿರುಗಿದೆ. ಈ ಬೆನ್ನಲ್ಲೇ, ಪಾಕಿಸ್ತಾನದ ರಕ್ಷಣಾ ಸಚಿವ ತಮ್ಮ ಅಧಿಕೃತ ಫಿ ಖಾತೆಯು ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಈ ಪೋಸ್ಟ್‌ನಲ್ಲಿ ಅಫ್ಘಾನಿಸ್ತಾನದಿಂದ ನ್ಯಾಟೋ ಪಡೆಗಳನ್ನು ಹಿಂತೆಗೆದುಕೊಂಡ ನಂತರ, ತಾಲಿಬಾನ್ ಶಾಂತಿ ಮತ್ತು ಸ್ಥಿರತೆಯನ್ನು ಖಚಿತಪಡಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ತಾಲಿಬಾನ್ ಅಫ್ಘಾನಿಸ್ತಾನವನ್ನು ಭಾರತದ ವಸಾಹತುವನ್ನಾಗಿ ಪರಿವರ್ತಿಸಿದೆ ಮತ್ತು ಜಗತ್ತಿನ ಎಲ್ಲಾ ಉಗ್ರಗಾಮಿಗಳನ್ನು ಒಟ್ಟುಗೂಡಿಸಿ ಭಯೋತ್ಪಾದನೆಯನ್ನು ರಫ್ತು ಮಾಡಲು ಪ್ರಾರಂಭಿಸಿವೆ. ಅಲ್ಲದೆ,ತಾಲಿಬಾನಿಗಳು ತಮ್ಮದೇ ಆದ ಜನರ ಮೂಲಭೂತ ಮಾನವ ಹಕ್ಕುಗಳನ್ನು ಕಸಿದುಕೊಂಡರು. ಇಸ್ಲಾಂ ಮಹಿಳೆಯರಿಗೆ ನೀಡುವ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದ್ದಾರೆ.



ಅಫ್ಘಾನ್ ಭಾರತದ ಪರವಾಗಿ ಪಾಕ್ ಮೇಲೆ ಪ್ರಾಕ್ಸಿ ವಾರ್ ಮಾಡುತ್ತಿದೆ, ಮುಂದುವರೆದು, ಇನ್ನು, ಪಾಕಿಸ್ತಾನ ನೇರವಾಗಿ ಹಾಗೂ ಮಿತ್ರ ರಾಷ್ಟ್ರಗಳ ಮೂಲಕ ತಾಲಿಬಾನ್ ನೊಂದಿಗಿನ ಸಂಬಂಧವನ್ನು ಸಾಮನ್ಯಗೊಳಿಸಲು ರಾಜತಾಂತ್ರಿಕವಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಿದೆ. ಆದರೆ, ತಾಲಿಬಾನ್ ಭಾರತದ ಪ್ರಾಕ್ಸಿಯಂತೆ ಬದಲಾಗಿದೆ. ಈ ಮೂಲಕ ಪಾಕಿಸ್ತಾನ್ನು ಆಕ್ರಮಣಕಾರಿಯಾಗಿ ಟಾರ್ಗೆಟ್ ಮಾಡುವ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ, ಈ ದಾಳಿಗಳಿಗೆ ಪಾಕಿಸ್ತಾನದ ಸೇನೆ ನಿರ್ಣಾಯಕ ಪ್ರತಿಕ್ರಿಯೆಯನ್ನು ನೀಡಲಿದೆ ಎಂದು ತಿಳಿಸಿದ್ದಾರೆ.

ಇನ್ನೂ, ಈ ಹಿಂದೆಯೂ ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದ ನಡುವೆ ನಡೆದ ಸಂಘರ್ಷದಲ್ಲಿ ಇದೇ ಖವಾಜಾ ಆಸೀಫ್ ಭಾರತವನ್ನೇ ದೋಷಿಯಾಗಿ ನಿಲ್ಲಿಸುವ ಪ್ರಯತ್ನ ಮಾಡಿದ್ದು, ಅಂದು ಸಹ ತಾಲಿಬಾನಿಗಳು ಭಾರತದ ಪರವಾಗಿ ಪ್ರಾಕ್ಸಿವಾರ್ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಅಲ್ಲದೆ, ಉಭಯ ದೇಶಗಳ ನಡುವೆ ಸಂಧಾನವಾಗದಂತೆ ಭಾರತ ತಡೆಯುತ್ತಿದೆ ಎಂದು ಆರೋಪಗಳನ್ನು ಮಾಡಿದ್ದರು.

## ಪಾನಿ ಪೂರಿಯಲ್ಲಿ ವಿಷ ಬೆರೆಸಿ ಗರ್ಭಿಣಿ ಗೆಳತಿಯ ಕೊಲೆಗೆ ಯತ್ನ: ವ್ಯಕ್ತಿ ಭಂಧನ

**ಜಾರ್ಖಂಡ್:** ಆತನೇ ಎಲ್ಲಾ ಎಂದು ಪೋಷಕರನ್ನು ಬಿಟ್ಟು ಬಂದಿದ್ದ ಮಹಿಳೆಯನ್ನು ಆಕೆಯ ಪ್ರಿಯಕರನೇ ಹತ್ಯೆಗೆ ಯತ್ನಿಸಿರುವ ಅಮಾನವೀಯ ಘಟನೆ ಜಾರ್ಖಂಡ್‌ನಲ್ಲಿ ನಡೆದಿದೆ. ಗೋಲ್ಗಪ್ಪದಲ್ಲಿ ವಿಷ ಬೆರೆಸಿ ಗರ್ಭಿಣಿ ಪ್ರೇಯಸಿಯನ್ನು ಕೊಲೆ ಮಾಡಲು ವ್ಯಕ್ತಿ ಯತ್ನಿಸಿರುವ ಘಟನೆ ಜಾರ್ಖಂಡ್‌ನಲ್ಲಿ ನಡೆದಿದೆ. ಮಹಿಳೆಗೆ ಆರೋಗ್ಯ ತೋರಾ ಹದಗೆಟ್ಟಿದ್ದು, ರಕ್ತವಾಂತಿ ಮಾಡಿಕೊಂಡಿದ್ದಾಳೆ. ತನ್ನ ಮನೆಗೆ ತಲುಪುವ ಮೊದಲು ರಾತ್ರಿಯಿಡೀ ಕಾಡಿನಲ್ಲಿ ಅಡಗಿಕೊಂಡಿದ್ದಳು. ಈ ಘಟನೆಯ ಬಗ್ಗೆ ತನ್ನ ಕುಟುಂಬಕ್ಕೆ ತಿಳಿಸುವಲ್ಲಿ ಆಕೆ ಕೊನೆಗೂ ಯಶಸ್ವಿಯಾಗಿದ್ದಾಳೆ. 26 ವರ್ಷದ ಸಾಕೇತ್ ಕೇಸರಿ ಮತ್ತು 23 ವರ್ಷದ ಮಹಿಳೆ ಆರು ವರ್ಷಗಳಿಂದ ಸಂಬಂಧದಲ್ಲಿದ್ದರು. ಒಂದು ವರ್ಷದ ಹಿಂದೆ ಅವರ ಮೊದಲ ಮಗು ಜನಿಸಿತ್ತು. ಗರ್ವಾ ಜಿಲ್ಲೆಯ ಸಮುದಾಯವು ಮಧ್ಯಪ್ರವೇಶಿಸಿ ಅವರನ್ನು ಬೇರೆ ಬೇರೆ ಮಾಡಿತ್ತು.



ಆದಾಗ್ಯೂ, ಕೇಸರಿ ಕೆಲವು ತಿಂಗಳ ನಂತರ ಆ ಮಹಿಳೆಯನ್ನು ಸಂಪರ್ಕಿಸಿದ್ದ ಮತ್ತು ರಾಜಿ ಮಾಡಿಕೊಂಡಿದ್ದರು.ಮದುವೆ ಭರವಸೆ ನೀಡಿದ್ದ, ನಂತರ ಮತ್ತೆ ಆಕೆ ಗರ್ಭಿಣಿಯಾಗಿದ್ದಾಳೆ.ಪೊಲೀಸರಿಗೆ ನೀಡಿದ ದೂರಿನ ಪ್ರಕಾರ, ಫೆಬ್ರವರಿ 21 ರಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ, ಕೇಶರಿ ಮಹಿಳೆಗೆ ಕರೆ ಮಾಡಿ ಏನಾದರೂ ತಿನ್ನಬೇಕು ಅನ್ನಸ್ತಿದೆಯಾ ಎಂದು ಕೇಳಿದ್ದಾನೆ. ಗೋಲ್ಗಪ್ಪ ತಿನ್ನುವ ಬಯಕೆಯನ್ನು ಆಕೆ ವ್ಯಕ್ತಪಡಿಸಿದ್ದಾಳೆ.

ಹಾಗೆಯೇ ಗೋಲ್ಗಪ್ಪ ತಿಂದ ಬಳಿಕ ಆಕೆಗೆ ವಾಂತಿ ಶುರುವಾಗಿತ್ತು, ರಕ್ತವಾಂತಿ ಕೂಡ ಮಾಡಿಕೊಂಡಿದ್ದಾಳೆ. ನಂತರ, ಸಂಜೆ 4 ಗಂಟೆಗೆ, ಆರೋಪಿ ತನ್ನ ಗೆಳತಿಯ ವೈದ್ಯರ ಬಳಿಗೆ ಕರೆದೊಯ್ಯಲು ಮುಂದಾದ.ಆದರೆ, ಅವಳನ್ನು ವೈದ್ಯರ ಬಳಿಗೆ ಕರೆದೊಯ್ಯುವ ಬದಲು, ಅವನು ಆಕೆಯನ್ನು ತನ್ನ ಬೈಕ್‌ನಲ್ಲಿ ಕಾಡಿಗೆ ಕರೆದೊಯ್ದಿದ್ದ. ಆಕೆಯನ್ನು ಸುಮಾರು 100 ಮೀಟರ್ ಕಾಡಿನೊಳಗೆ ಕರೆದೊಯ್ದು ಹಲ್ಲೆ ಮಾಡಿ, ಕತ್ತು ಹಿಸುಕಲು ಪ್ರಯತ್ನಿಸಿದ್ದಾನೆ, ಇದರಿಂದಾಗಿ ಮಹಿಳೆಯ ಕಣ್ಣಿಗೆ ಗಂಭೀರ ಗಾಯವಾಯಿತು ಮತ್ತು ಅವಳು ಪ್ರಜ್ಞೆ ತಪ್ಪಿದ್ದಳು. ಪ್ರಜ್ಞೆ ಮರಳಿದ ನಂತರ, ಅವಳು ಕಾಡಿನ ಇನ್ನೊಂದು ತುದಿಗೆ ದಾಟಲು ಯಶಸ್ವಿಯಾದಳು ಮತ್ತು ಅಪಾರ ಭಯದಿಂದ ಇಡೀ ರಾತ್ರಿ ಅಲ್ಲಿ ಅಡಗಿಕೊಂಡಳು. ಮರುದಿನ ಬೆಳಗ್ಗೆ, ಅವಳು ಹೇಗೋ ತನ್ನ ಮನೆಗೆ ತಲುಪಿ ತನ್ನ ಕುಟುಂಬಕ್ಕೆ ನಡೆದ ಘಟನೆಯನ್ನು ವಿವರಿಸಿದ್ದಾಳೆ. ಮಹಿಳೆಯ ದೂರಿನ ಆಧಾರದ ಮೇಲೆ ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಕೇಸರಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಪೊಲೀಸರು ಪ್ರಸ್ತುತ ಈ ಪ್ರಕರಣದ ಬಗ್ಗೆ ಕೂಲಂಕಷ ತನಿಖೆ ನಡೆಸುತ್ತಿದ್ದಾರೆ.

## ತಾಲಿಬಾನ್ ವಿರುದ್ಧ ಆಪರೇಷನ್ ಗಜಬ್-ಲಿಲ್-ಹಕ್ ಆರಂಭಿಸಿದ ಪಾಕ್ ಸೇನೆ

# ಮತ್ತೆ ಪಾಕಿಸ್ತಾನ-ಅಫ್ಘಾನಿಸ್ತಾನ ಸಂಘರ್ಷ

**ಕಾಬೂಲ್:** ತಣ್ಣಗಾಗಿದ್ದ ಪಾಕಿಸ್ತಾನ-ಅಫ್ಘಾನಿಸ್ತಾನ ಸಂಘರ್ಷ ಮತ್ತೆ ಭುಗಿಲೆದ್ದಿದ್ದು, ಪಾಕಿಸ್ತಾನವು ಅಫ್ಘಾನಿಸ್ತಾನ ರಾಜಧಾನಿ ಕಾಬೂಲ್ ಮೇಲೆ ತೀವ್ರ ವೈಮಾನಿಕ ದಾಳಿ ನಡೆಸಿದೆ. ತಾಲಿಬಾನ್ ವಿರುದ್ಧ ಓಪನ್ ವಾರ್ ಆರಂಭಿಸಿರುವುದಾಗಿ ಘೋಷಿಸಿರುವ ಪಾಕಿಸ್ತಾನ ರಕ್ಷಣಾ ಸಚಿವ ಖವಾಜಾ ಆಸೀಫ್, ಆಪರೇಷನ್ ಗಜಬ್-ಲಿಲ್-ಹಕ್ ಅಡಿ ತಾಲಿಬಾನ್ ಸರ್ವನಾಶ ಖಚಿತ ಎಂದು ಹೂಂಕರಿಸಿದ್ದಾರೆ.

**ಕಾಬೂಲ್ ಮೇಲೆ ತೀವ್ರ ವೈಮಾನಿಕ ದಾಳಿ**

ಗಡಿಯಲ್ಲಿ ತಾಲಿಬಾನ್ ಪಡೆಗಳು ಪಾಕಿಸ್ತಾನದ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ ಬಳಿಕ, ಅಫ್ಘಾನಿಸ್ತಾನದ ವಿರುದ್ಧ ಆಪರೇಷನ್ ಗಜಬ್-ಲಿಲ್-ಹಕ್‌ಗೆ ಚಾಲನೆ ನೀಡಿರುವುದಾಗಿ ರಕ್ಷಣಾ ಸಚಿವ ಖವಾಜಾ ಆಸೀಫ್ ತಿಳಿಸಿದ್ದಾರೆ. ತಾಲಿಬಾನ್ ಆಡಳಿತ ಕೂಡ ಪಾಕ್ ಸೇನಾ ನೆಲೆಗಳ ಮೇಲಿನ ದಾಳಿಯನ್ನು ಖಚಿತಪಡಿಸಿದ್ದು, ದಾಳಿಗಳು ಮುಂದುವರೆಯಲಿವೆ ಎಂದು ಸ್ಪಷ್ಟಪಡಿಸಿದೆ.

- ಮತ್ತೆ ಭುಗಿಲೆದ್ದ ಪಾಕಿಸ್ತಾನ-ಅಫ್ಘಾನಿಸ್ತಾನ ಮಿಲಿಟರಿ ಸಂಘರ್ಷ.
- ಅಫ್ಘಾನಿಸ್ತಾನದ ವಿರುದ್ಧ ಆಪರೇಷನ್ ಗಲಬ್-ಲಿಲ್-ಹಕ್ ಆರಂಭಿಸಿದ ಪಾಕಿಸ್ತಾನ.
- ತಾಲಿಬಾನ್ ವಿರುದ್ಧ ಓಪನ್ ವಾರ್ ಎಂದ ಪಾಕಿಸ್ತಾನ ರಕ್ಷಣಾ ಸಚಿವ.

ಈ ಕುರಿತು ಮಾಹಿತಿ ನೀಡಿರುವ ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನದ ವಕ್ತಾರ ಜಬಿಹುಲ್ಲಾ ಮುಜಾಹಿದ್, ಕಂದಹಾರ್ ಮತ್ತು ಹೆಲ್ಮಂಡ್‌ನ ಡ್ಯುರಾಂಡ್ ರೇಖೆಯ ಉದ್ದಕ್ಕೂ ಪಾಕಿಸ್ತಾನಿ ಮಿಲಿಟರಿ ಪೋಸ್ಟ್‌ಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆಗಳು ಪ್ರಾರಂಭವಾಗಿವೆ. ಇದು ಪೂರ್ವ ಮತ್ತು ಆಗ್ನೇಯ ಭಾಗದಲ್ಲಿ ಪಾಕಿಸ್ತಾನ ನಡೆಸಿದ ದಾಳಿಗೆ ನಮ್ಮ ಪ್ರತ್ಯುತ್ತರವಾಗಿದೆ ಎಂದು ಸೂಚ್ಯವಾಗಿ ಹೇಳಿದ್ದಾರೆ.



ಮುಂದುವರೆದು, ಪಾಕಿಸ್ತಾನ ಸೇನಾ ನೆಲೆಗಳ ಮೇಲೆ ನಮ್ಮ ಪಡೆಗಳು ನಡೆಸಿದ ದಾಳಿಯಲ್ಲಿ 40ಕ್ಕೂ ಹೆಚ್ಚು ಪಾಕಿಸ್ತಾನಿ ಸೈನಿಕರು ಅಸುನೀಗಿದ್ದು, 15ಕ್ಕೂ ಹೆಚ್ಚು ಸೈನ್ಯ ಠಿಕಾಣಿಗಳು ಸಂಪೂರ್ಣವಾಗಿ ನಾಶಗೊಂಡಿವೆ ಎಂದು ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪ್ರತಿಪಾದಿಸಿದ್ದಾರೆ.

ಅಷ್ಟೇ ಅಲ್ಲದೇ ಈ ದಾಳಿಗೆ ಪ್ರತಿಯಾಗಿ ಪಾಕಿಸ್ತಾನಿ ಪಡೆಗಳು ಕಾಬೂಲ್, ಕಂದಹಾರ್ ಮತ್ತು ಪಕ್ತಿಯಾದಲ್ಲಿ ಬಾಂಬ್ ದಾಳಿ ನಡೆಸಿದ್ದು, ಈ ದಾಳಿಯಲ್ಲಿ ಯಾವುದೇ ಸಾವುನೋವುಗಳು ಸಂಭವಿಸಿಲ್ಲ ತಾಲಿಬಾನ್ ವಕ್ತಾರ ಹೇಳಿದ್ದಾರೆ. ಆದರೆ ಪಾಕಿಸ್ತಾನ ಮಾತ್ರ ಕಾಬೂಲ್ ಮೇಲೆ ತಡರಾತ್ರಿ ನಡಿಸಿದ ವೈಮಾನಿಕ ದಾಳಿಯಲ್ಲಿ, 130ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಹೇಳಿಕೊಂಡಿದೆ. ಈ ಕುರಿತು ಮಾತನಾಡಿರುವ ಪಾಕಿಸ್ತಾನ ಮಾಹಿತಿ ಸಚಿವ ಅತಾವುಲ್ಲಾ ತರಾರ್, ಪಾಕ್ ಸೇನೆ ಕಾಬೂಲ್, ಪಕ್ತಿಯಾ ಮತ್ತು ಕಂದಹಾರ್‌ಗಳಲ್ಲಿ ಅಫ್ಘಾನ್ ತಾಲಿಬಾನ್ ರಕ್ಷಣಾ ಗುರಿಗಳ ಮೇಲೆ ದಾಳಿ ನಡೆಸಿದ್ದು, ಇತ್ತೀಚಿನ ಸಂಘರ್ಷದಲ್ಲಿ ಡಜನ್‌ಗಟ್ಟಲೆ ಅಫ್ಘಾನ್ ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಇತ್ತೀಚೆಗೆ ಖವಾಜಾ ಆಸೀಫ್ ಪಾಕಿಸ್ತಾನ-ಅಫ್ಘಾನಿಸ್ತಾನ ಸಂಬಂಧ ಅಂತ್ಯವಾಗಿದೆ ಎಂದು ಹೇಳಿಕೆ ನೀಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ಆಪರೇಷನ್ ಗಜಬ್ ಲಿಲ್-ಹಕ್‌ನ ಭಾಗವಾಗಿ, 133 ಅಫ್ಘಾನ್ ತಾಲಿಬಾನ್ ಸೈನಿಕರನ್ನು ಹತ್ಯೆ ಮಾಡಲಾಗಿದೆ. ಕಾಬೂಲ್ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ 200ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ತಾಲಿಬಾನ್ ಆಡಳಿತದ 27 ಸೇನಾ ಪೋಸ್ಟ್‌ಗಳು ಸಂಪೂರ್ಣವಾಗಿ ನಾಶವಾಗಿದ್ದು, 9 ಪೋಸ್ಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅತಾವುಲ್ಲಾ ತರಾರ್ ಹೇಳಿದ್ದಾರೆ.

**ಏನಿದು ಆಪರೇಷನ್ ಗಜಬ್-ಲಿಲ್-ಹಕ್?**

**ತಾಲಿಬಾನ್ ನಡೆಸಿದ ಗಡಿಯಾಚೆಗಿನ ದಾಳಿಗಳಲ್ಲಿ 55 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದು, ಅನೇಕರು ಗಂಭೀರವಾಗಿ ಗಾಯಗೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಅಫ್ಘಾನಿಸ್ತಾನ ವಿರುದ್ಧ ಆಪರೇಷನ್ ಗಜಬ್-ಲಿಲ್-ಹಕ್ ಆರಂಭಿಸಿದೆ. ಡುರಾಂಡ್ ಗಡಿಯುದ್ದಕ್ಕೂ ಉದ್ವಿಗ್ನತೆಗಳು ಹೆಚ್ಚಿದ್ದು, ಪಾಕಿಸ್ತಾನ-ಅಫ್ಘಾನಿಸ್ತಾನ ಮತ್ತೆ ಸಂಘರ್ಷದ ಹಾದಿ ತುಳಿದಿವೆ.**

## 3ನೇ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ದರ ಶೇ. 7.8ರಷ್ಟು ದಾಖಲು

**ನವದೆಹಲಿ:** ಭಾರತ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಿದೆ. ಭಾರತದ ಆರ್ಥಿಕತೆಯ ಬೆಳವಣಿಗೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಭಾಷಣಗಳಲ್ಲಿ ಪ್ರಸ್ತಾಪಿಸುತ್ತಲೇ ಇರುತ್ತಾರೆ. ಇದೀಗ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಬಿಡುಗಡೆ ಮಾಡಿದ ದತ್ತಾಂಶದ ಪ್ರಕಾರ, 2025ರ ಅಕ್ಟೋಬರ್-ಡಿಸೆಂಬರ್‌ನಲ್ಲಿ ಅಂದರೆ ಮೂರನೇ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇ. 7.8ರಷ್ಟಾಗಿದೆ. ಇದು ಹಿಂದಿನ ವರ್ಷದ ಅವಧಿಯಲ್ಲಿ ಶೇ. 6.2ರಷ್ಟಿತ್ತು. 2026ರ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನ ಬೆಳವಣಿಗೆ ದರವು ಶೇ. 7.8 ರಷ್ಟಿದ್ದು, ಈ ಹಿಂದೆ ಅಂದಾಜು ಮಾಡಿದ ಶೇ. 7.4ಕ್ಕಿಂತ ಹೆಚ್ಚಾಗಿದೆ. ಈ ಅವಧಿಯಲ್ಲಿ ಹಬ್ಬದ ಋತುವಿನಲ್ಲಿ ಹೆಚ್ಚಿದ ಬೇಡಿಕೆಯು ಉತ್ಪಾದನೆಯನ್ನು ಹೆಚ್ಚಿಸಿತು. ವಿವಿಧ ವಲಯಗಳಲ್ಲಿನ ಕಡಿತಗಳು ಸಹ ಆರ್ಥಿಕತೆಗೆ ಬೆಂಬಲ ನೀಡಿವೆ.




ಒಂದು ವರ್ಷದ ಹಿಂದೆ ಇದೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ. 6.2 ಆಗಿತ್ತು. ಹಿಂದಿನ ತ್ರೈಮಾಸಿಕದಲ್ಲಿ, ಜಿಡಿಪಿ ಬೆಳವಣಿಗೆಯ ದರ ಶೇ. 8.2 ಆಗಿತ್ತು. ಇದರರ್ಥ ಹಿಂದಿನ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ತ್ರೈಮಾಸಿಕದಲ್ಲಿ ಸ್ವಲ್ಪ ಇಳಿಕೆ ಕಂಡುಬಂದಿದೆ. ಆದರೆ, ಜಿಡಿಪಿ ಬೆಳವಣಿಗೆ ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮವಾಗಿದೆ. ಇತ್ತೀಚಿನ ಅಂಕಿಅಂಶಗಳನ್ನು ಹೊಸ ಮೂಲ ವರ್ಷದ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಈಗ, ಕೇಂದ್ರ ಸರ್ಕಾರವು 2011-12ರ ಬದಲಿಗೆ 2022-23 ಅನ್ನು ಹೊಸ ಮೂಲ ವರ್ಷವಾಗಿ ಬಳಸಿಕೊಂಡು ಜಿಡಿಪಿ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. ''2025-26ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ನೈಜ ಜಿಡಿಪಿ ಅಥವಾ ಸ್ಥಿರ ಬೆಲೆಗಳಲ್ಲಿ ಜಿಡಿಪಿ 84.54 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದು 2024-25ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ 78.41 ಲಕ್ಷ ಕೋಟಿ ರೂ. ಗಳಷ್ಟಿತ್ತು. ಇದು ಶೇ. 7.8ರಷ್ಟು ಬೆಳವಣಿಗೆ ದರವನ್ನು ಸೂಚಿಸುತ್ತದೆ'' ಎಂದು ರಾಷ್ಟ್ರೀಯ ಅಂಕಿ-ಅಂಶ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. 2026ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಉತ್ಪಾದನಾ ವಲಯವು ಶೇ. 13.3ರಷ್ಟು ಅಚ್ಚರಿಯ ದರದಲ್ಲಿ ಬೆಳೆದಿದೆ. ಕೃಷಿ ವಲಯವು ಶೇ. 1.4ರಷ್ಟು ಬೆಳೆದಿದೆ. ವ್ಯಾಪಾರ, ಹೋಟೆಲ್‌ಗಳು, ಸಾರಿಗೆ, ಸಂವಹನ ಮತ್ತು ಪ್ರಸಾರಕ್ಕೆ ಸಂಬಂಧಿಸಿದ ಸೇವೆಗಳು ಶೇ. 11ರಷ್ಟು ಬೆಳೆದಿವೆ.

## ಡಿಎಂಕೆ ಸೇರಿದ ಜಯಲಲಿತಾ ಕಟ್ಟಾ ಬೆಂಬಲಿಗ ಪನ್ನೀರ್‌ಸೆಲ್ವಂ

**ಚೆನ್ನೈ:** ಎಐಎಡಿಎಂಕೆ ಮಾಜಿ ಮುಖ್ಯಸ್ಥ ಹಾಗೂ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಕಟ್ಟಾ ಬೆಂಬಲಿಗೆ ಪನ್ನೀರ್ ಸೆಲ್ವಂ ಅವರು ಡಿಎಂಕೆ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. 2022 ರಲ್ಲಿ ಅವರನ್ನು ಪಕ್ಷದಿಂದ ಹೊರಹಾಕುವ ಮೂರು ಬಾರಿ ಎಐಎಡಿಎಂಕೆ ಮುಖ್ಯಮಂತ್ರಿಯಾಗಿದ್ದ ಓ ಪನ್ನೀರ್‌ಸೆಲ್ವಂ ಆಡಳಿತಾರೂಢ ಡಿಎಂಕೆ ಅಧ್ಯಕ್ಷ ಮತ್ತು ತಮಿಳುನಾಡು ಸಿಎಂ ಎಂ ಕೆ ಸ್ಟಾಲಿನ್ ಅವರ ಸಮ್ಮುಖದಲ್ಲಿ ಪಕ್ಷ ಸೇರಿದರು.

ದಿವಂಗತ ಎಐಎಡಿಎಂಕೆ ಮುಖ್ಯಸ್ಥೆ ಜೆ ಜಯಲಲಿತಾ ಅವರ ವಿಶ್ವಾಸಾರ್ಹ ಆಪ್ತ ಮತ್ತು ಒಪಿಎಸ್ ಎಂದೇ ಜನಪ್ರಿಯರಾಗಿರುವ ಪನ್ನೀರ್‌ಸೆಲ್ವಂ, ಮೂರು ವರ್ಷಗಳಿಗೂ ಹೆಚ್ಚು ಕಾಲ ತಮ್ಮ ಮಾತೃ ಪಕ್ಷವನ್ನು ಮತ್ತೆ ಸೇರಲು ವಿಫಲವಾದ ನಂತರ, ಬದ್ಧ ವೈರಿ ಡಿಎಂಕೆ ಸೇರಿದರು.

ಎಐಎಡಿಎಂಕೆ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದ ಮತ್ತು ಪಕ್ಷದ ಸಂಯೋಜಕರ ಹಿಂದಿನ ಉನ್ನತ ಹುದ್ದೆಯನ್ನು ಅಲಂಕರಿಸಿದ್ದ ಓಪಿಎಸ್, ತಮ್ಮ ಮಗ ಪಿ ರವೀಂದ್ರನಾಥ್ ಕುಮಾರ್ ಮತ್ತು ಬೆಂಬಲಿಗರೊಂದಿಗೆ ಡಿಎಂಕೆ ಸೇರಿದರು. 2006 ರಲ್ಲಿ ಡಿಎಂಕೆ ಸರ್ಕಾರ ರಚಿಸಿದ ನಂತರ ಪನ್ನೀರ್‌ಸೆಲ್ವಂ ಅವರು ಡಿಎಂಕೆ ಸೇರಲು ಸಂತೋಷ ವ್ಯಕ್ತಪಡಿಸಿದರು ಮತ್ತು ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ ಪಳನಿಸ್ವಾಮಿ ಅವರನ್ನು ನಿರಂಕುಶಾಧಿಕಾರಿ ಮತ್ತು ದುರಹಂಕಾರಿ ಎಂದು ಟೀಕಿಸಿದರು,



ಅವರು ಎಐಎಡಿಎಂಕೆಗೆ ಎಲ್ಲಾ ಸಮಯದಲ್ಲೂ ಗೆಲುವು ಇಲ್ಲ ಎಂಬ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾರೆ.ಎಐಎಡಿಎಂಕೆಯಲ್ಲಿ ಅವರನ್ನು ಉಚ್ಚಾಟಿಸಿದ ನಂತರ ಅವರು ಎದುರಿಸಿದ ಪರಿಸ್ಥಿತಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ, ಅವರು ಹಿಂದಿನ ಬಗ್ಗೆ ಕಾಳಜಿ ವಹಿಸುವುದಿಲ್ಲ ಮತ್ತು ಸಿಎಂ ಸ್ಟಾಲಿನ್ ಅವರ ಆದೇಶವನ್ನು ಪಾಲಿಸುತ್ತೇನೆ ಎಂದು ಹೇಳಿದರು.

ಸಿಎಂ ಸ್ಟಾಲಿನ್ ಜನರ ಅಗತ್ಯಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಎಲ್ಲಾ ವರ್ಗದ ಜನರಿಗೆ ಕಲ್ಯಾಣ ಯೋಜನೆಗಳನ್ನು ಯಾವುದೇ ಪಕ್ಷಪಾತವಿಲ್ಲದೆ ತಲುಪಿಸುತ್ತಾರೆ ಎಂದು ಅವರು ಹೇಳಿದರು ಮತ್ತು ಡಿಎಂಕೆಯನ್ನು ದುಷ್ಟಶಕ್ತಿ ಎಂದು ಹಣೆಪಟ್ಟಿ ಕಟ್ಟುವುದನ್ನು ನಿರಾಕರಿಸಿದರು. ಡಿಎಂಕೆಯನ್ನು ವಿರೋಧಿಸುವ ಯಾವುದೇ ಪಕ್ಷವಿಲ್ಲ ಎಂದು ಅವರು ಹೇಳಿಕೊಂಡರು.

## ಯುಎಸ್ ಕಾಲೇಜುಗಳಲ್ಲಿ ಇಂಡಿಯನ್ ಸ್ಟೂಡೆಂಟ್ಸ್ ದಾಖಲಾತಿ ಕುಸಿತ

**ವಾಷಿಂಗ್ಟನ್:** ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡಬೇಕು ನಂತರ ಅಲ್ಲಿಯೇ ಒಂದು ಸುಂದರವಾದ ಜೀವನವನ್ನು ರೂಪಿಸಿಕೊಳ್ಳಬೇಕು ಎಂಬುದು ನೂರಾರು ಭಾರತೀಯರ ಕನಸು. ಆದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 2ನೇ ಬಾರಿಗೆ ಅಧಿಕಾರಕ್ಕೆ ಬಂದಾಗಿನಿಂದಲೂ ಅಮೆರಿಕ ಫಸ್ಟ್ ಎಂಬ ನೀತಿಯನ್ನು ಅನುಸರಿಸುತ್ತಾ ಹಲವು ವಲಸೆ ವಿರೋಧ ನೀತಿಯನ್ನು ಜಾರಿಗೊಳಿಸುತ್ತಿದ್ದಾರೆ. ಇದರಿಂದಾಗಿ ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ದಾಖಲಾತಿ ಭಾರಿ ಪ್ರಮಾಣದಲ್ಲಿ ಕುಸಿತಗೊಂಡಿದೆ.

ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡಲು ಬಯಸುವ ಭಾರತೀಯ ವಿದ್ಯಾರ್ಥಿಗಳ ಟಾಪ್ ಆಯ್ಕೆ ಅಮೆರಿಕ ಆದರೆ, ಇತ್ತೀಚಿನ ದಿನಗಳಲ್ಲಿ ಸಾಗುತ್ತಿರುವ ವಲಸೆ ವಿರೋಧಿ ನೀತಿಗಳಿಂದಾಗಿ ಹೆಚ್ಚುತ್ತಿರುವ ವೀಸಾ ವಿಳಂಬ, ನಿರ್ಬಂಧಗಳು ಸೇರಿದಂತೆ ಇನ್ನೂ ಹಲವು ಕಾರಣಗಳಿಂದಾಗಿ 2025 ಆಗಸ್ಟ್ ತಿಂಗಳಿನ ಯುಎಸ್ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಶೇ. 45 ರಷ್ಟು ತೀವ್ರ ಕುಸಿತ ಕಂಡಿದೆ.



ಆದರೆ, ಭಾರತೀಯ ಪದವಿ ನಿರ್ವಹಣಾ ಕಾರ್ಯಕ್ರಮಗಳಿಗೆ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಅರ್ಜಿಗಳಲ್ಲಿ ಶೇ. 25 ರಷ್ಟು ಏರಿಕೆ ಕಂಡಿದೆ ಎಂದು ಗ್ರಾಜುಯೇಟ್ ಮ್ಯಾನೇಜ್‌ಮೆಂಟ್ ಅಡ್ಮಿಷನ್ ಕೌನ್ಸಿಲ್ ಬಿಡುಗಡೆ ಮಾಡಿದ ಶ್ವೇತಪತ್ರದಲ್ಲಿ ತಿಳಿಸಲಾಗಿದೆ.

ಯುಎಸ್ ದತ್ತಾಂಶದ ಪ್ರಕಾರ, ಈ ಬೆಳವಣಿಗೆಗಳು ಜಾಗತಿಕ ವ್ಯವಹಾರ ಶಿಕ್ಷಣ ಪ್ರವೃತ್ತಿಯಲ್ಲಿ ಗಮನಾರ್ಹ ಬದಲಾವಣೆ ಸೂಚಿಸುವಂತಿದೆ. ಇನ್ನು, 2025 ರ ಅಪ್ಲಿಕೇಶನ್ ಟ್ರೆಂಡ್ಸ್ ಸಮೀಕ್ಷೆಯನ್ನು ಆಧರಿಸಿದ ಸಂಶೋಧನೆಗಳಲ್ಲಿ ಏಷ್ಯಾ ಹಾಗೂ ಯುರೋಪ್ (ಯುಕೆ ಹೊರತುಪಡಿಸಿ) ವಿದ್ಯಾರ್ಥಿಗಳ ದಾಖಲಾತಿಗಳು ಹೆಚ್ಚಳ ಕಂಡುಬರುತ್ತಿದ್ದರೆ, ಸಾಂಪ್ರದಾಯಿಕ ತಾಣಗಳಾಗಿದ್ದ ಅಮೆರಿಕ, ಕೆನಡಾ, ಯುಕೆ ಹಾಗೂ ಆಸ್ಟ್ರೇಲಿಯಾದಲ್ಲಿ ದಾಖಲಾತಿಗಳಲ್ಲಿ ಇಳಿಮುಖ ಕಂಡುಬರುತ್ತಿದೆ ಎಂದು ವರದಿ ಮಾಡಿದೆ.

ಇದಕ್ಕೆ ಕಾರಣ ಈ ದೇಶಗಳಲ್ಲಿ ವೀಸಾ ನೀತಿಗಳು, ಕರೆನ್ಸಿ ಏರಿಳಿತಗಳು ಹಾಗೂ ಜಾಗತಿಕ ರಾಜಕೀಯ ಪರಿಸ್ಥಿತಿಗಳು ಸೇರಿದಂತೆ ಈ ದೇಶಗಳಿಗೆ ಹೋಲಿಸಿದರೆ, ಇತ್ತೀಚಿನ ವರ್ಷಗಳಲ್ಲಿ ಹೊಸ ದೇಶಗಳಲ್ಲಿ ಕೈಗೆಟಕುವ ರೀತಿಯಲ್ಲಿ ಸಿಗುತ್ತಿರುವ ದೇಶಗಳ ಆಯ್ಕೆಗಳಾಗಿವೆ. ಅದರಲ್ಲೂ ಪ್ರಮುಖವಾಗಿ ಕಠಿಣ ವೀಸಾ ನಿಯಮಗಳಿಂದ ಅಮೆರಿಕದಲ್ಲಿ ದಾಖಲಾತಿಗಳು ಕುಸಿತ ಕಾಣುತ್ತಿದ್ದು, ವೀಸಾ ವಿಳಂಬ, ನಿರಾಕರಣೆ ಅಥವಾ ಬಹು ಸೇವಣೆಯಂತಹ ಸಮಸ್ಯೆಗಳಿಂದ ಶೇ.90ರಷ್ಟು ಪದವಿ ಕಾರ್ಯಕ್ರಮಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ಕುಸಿತ ಕಾಣುತ್ತಿದೆ.

# ಭಾರತೀಯ ರೆಸ್ಟೋರೆಂಟ್‌ನಲ್ಲಿ ನೆತನ್ಯಾಹು -ಸಾರಾ ಮೊದಲ ಡೇಟ್

## ನನ್ನ ಸುಂದರ ವೈವಾಹಿಕ ಜೀವನಕ್ಕೆ ಮುನ್ನುಡಿ ಬರೆದಿದ್ದು ಅದೇ ರೆಸ್ಟೋರೆಂಟ್, ನಾವು ಭಾರತಕ್ಕೆ ಎಂದೆಂದಿಗೂ ಚಿರಋಣಿ: ನೆತನ್ಯಾಹು

**ಟೆಲ್ ಅವಿವ್:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಎರಡು ದಿನಗಳ ಇಸ್ರೇಲ್ ಪ್ರವಾಸ ಅಂತ್ಯಗೊಂಡಿದೆ. ಈ ಮಹತ್ವದ ರಾಜತಾಂತ್ರಿಕ ಭೇಟಿ ಭಾರತ-ಇಸ್ರೇಲ್ ವ್ಯಾಪಾರ ಒಪ್ಪಂದ ಮಾತುಕತೆಗೆ ಮತ್ತಷ್ಟು ಬಲ ತುಂಬಿದೆ. ಜೊತೆಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗಿನ ಪ್ರಧಾನಿ ಮೋದಿ ಅವರ ಗೆಳೆತನ ಕೂಡ ಮತ್ತಷ್ಟು ಗಟ್ಟಿಗೊಂಡಿದೆ.

ಪ್ರಧಾಮನಿ ಮೋದಿ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ತಮ್ಮ ಪತ್ನಿ ಸಾರಾ ನೆತನ್ಯಾಹು ಅವರೊಂದಿಗೆ ಭಾರತೀಯ ರೆಸ್ಟೋರೆಂಟ್ ವೊಂದರಲ್ಲಿ ಆಯೋಜಿಸಿದ್ದ ತಮ್ಮ ಮೊದಲ ಡೇಟ್‌ನ ಬಗ್ಗೆ ರೋಚಕ ಮಾಹಿತಿಯನ್ನು ಬಿಚ್ಚಿಟ್ಟಿದ್ದಾರೆ. ನಾನು ಮತ್ತು ಪತ್ನಿ ಸಾರಾ ಮೊದಲ ಬಾರಿಗೆ ಟೆಲ್ ಅವಿವ್ ನಗರದಲ್ಲಿರುವ ಭಾರತೀಯ ರೆಸ್ಟೋರೆಂಟ್‌ನಲ್ಲಿ ಭೇಟಿಯಾಗಿದ್ದೇವು. ಅದು ನಮ್ಮ ಮೊದಲ ಡೇಟ್ ಆಗಿತ್ತು. ನಾವು ಭೇಟಿಯಾದ ಭಾರತೀಯ ರೆಸ್ಟೋರೆಂಟ್ ತುಂಬಾ ಉತ್ತಮವಾಗಿತ್ತು. ಆ ರೆಸ್ಟೋರೆಂಟ್‌ನ ಪ್ರತಿ ಖಾದ್ಯವನ್ನೂ ನಾವು ಅಂದು ಸವಿದಿದ್ದೇವು ಎಂದು ಬೆಂಜಮಿನ್ ನೆತನ್ಯಾಹು ಹೇಳಿದರು.



**ಪ್ರತಿ ಖಾದ್ಯವನ್ನೂ ನಾವು ಸವಿದಿದ್ದೇವು**

ಮುಂದುವರೆದು, ಸಾರಾ ಜೊತೆಗಿನ ಮೊದಲ ಡೇಟ್‌ನ್ನು ಸ್ಮರಣೀಯಗೊಳಿಸಿದ ಭಾರತೀಯ ರೆಸ್ಟೋರೆಂಟ್‌ನ್ನು ನಾನು ಎಂದಿಗೂ ಮರೆಯುವುದಿಲ್ಲ.

ನನ್ನ ಸುಂದರ ವೈವಾಹಿಕ ಜೀವನಕ್ಕೆ ಮುನ್ನುಡಿ ಬರೆದಿದ್ದು ಅದೇ ಭಾರತೀಯ ರೆಸ್ಟೋರೆಂಟ್. ಈ ಹಿನ್ನೆಲೆಯಲ್ಲಿ ನಾವು ಭಾರತಕ್ಕೆ ಎಂದೆಂದಿಗೂ ಚಿರಋಣಿ ಎಂದು ಇಸ್ರೇಲ್ ಪ್ರಧಾನಿ ನುಡಿದರು. ಬೆಂಜಮಿನ್ ಮತ್ತು ಸಾರಾ ಅವರ ಮೊದಲ ಡೇಟ್ ಆಯೋಜಿಸಿದ್ದ ಭಾರತೀಯ ರೆಸ್ಟೋರೆಂಟ್ ಟೆಲ್ ಅವಿವ್ ನಗರದಲ್ಲಿದ್ದು, ಇದನ್ನು ಭಾರತೀಯ ಮೂಲದ ಬಾಣಸಿಗ ಇಸ್ರೇಲ್‌ನ ಕರಿ ಕ್ವೀನ್ ಎಂದೇ ಪ್ರಸಿದ್ಧರಾಗಿರುವ ರೀನಾ ಪುಷ್ಕರ್ಣ ನಡೆಸುತ್ತಿದ್ದರು. ಇಸ್ರೇಲ್‌ಗೆ ಅಧಿಕೃತ ಭಾರತೀಯ ಪಾಕಪದ್ಧತಿಯನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.ರೀನಾ ಪುಷ್ಕರ್ಣ ಅವರ ರೆಸ್ಟೋರೆಂಟ್ ಎರಡೂ ರಾಷ್ಟ್ರಗಳ ನಡುವೆ ಪ್ರಮುಖ ಸಾಂಸ್ಕೃತಿಕ ರಾಯಭಾರಿಯಾಗಿ ಸೇವೆ ಸಲ್ಲಿಸಿದೆ.

- ಪ್ರಧಾನಮಂತ್ರಿ ನರೇಂದ್ರ ಮೋದಿ ಎರಡು ದಿನಗಳ ಇಸ್ರೇಲ್ ಪ್ರವಾಸ ಅಂತ್ಯ.
- ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೊತೆ ಪ್ರಧಾನಿ ಮೋದಿ ಜಂಟಿ ಪತ್ರಿಕಾಗೋಷ್ಠಿ.
- ಭಾರತದಲ್ಲಿ ತಮ್ಮ ಪತ್ನಿ ಸಾರಾ ಜೊತೆಗಿನ ಮೊದಲ ಡೇಟ್ ನೆನೆದ ಬೆಂಜಮಿನ್ ನೆತನ್ಯಾಹು.

ಪ್ರಧಾನಿ ಮೋದಿ ಅವರ ಎರಡು ದಿನಗಳ ಇಸ್ರೇಲ್ ಭೇಟಿ ಸಂದರ್ಭದಲ್ಲಿ, ರೀನಾ ಪುಷ್ಕರ್ಣ ಅವರ ರೆಸ್ಟೋರೆಂಟ್ ಖಾದ್ಯ ತಯಾರಿ ಜವಾಬ್ದಾರಿಯನ್ನು ಹೊತ್ತುಕೊಂಡಿತ್ತು. ನೆತನ್ಯಾಹು ದಂಪತಿ ಈಗಲೂ ಈ ಭಾರತೀಯ ರೆಸ್ಟೋರೆಂಟ್‌ನ ಆಹಾರವನ್ನು ತುಂಬಾ ಇಷ್ಟಪಡುತ್ತಾರೆ ಪ್ರಧಾನಿ ಮೋದಿ ಇಸ್ರೇಲ್ ಭೇಟಿ ವೇಳೆ ಬೆಂಜಮಿನ್ ನೆತನ್ಯಾಹು ಭಾರತವನ್ನು ಒಳಗೊಂಡ ಹೆಕ್ಸಗಾನ್ ಮೈತ್ರಿ ಘೋಷಣೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಇನ್ನು ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸದಲ್ಲಿ ತಂತ್ರಜ್ಞಾನಗಳ ವರ್ಗಾವಣೆಯ ಚೌಕಟ್ಟಿನಡಿಯಲ್ಲಿ, ಜಂಟಿ ಅಭಿವೃದ್ಧಿ ಮತ್ತು ಮಿಲಿಟರಿ ಹಾರ್ಡ್‌ವೇರ್‌ನ ಜಂಟಿ ಉತ್ಪಾದನೆಗೆ ಕೆಲಸ ಮಾಡುವ ಒಪ್ಪಂದವನ್ನು ಘೋಷಿಸಲಾಯಿತು. ಈ ಒಪ್ಪಂದ ಭಾರತ ಮತ್ತು ಇಸ್ರೇಲ್ ನಡುವಿನ ನಿಕಟ ರಕ್ಷಣಾ ಪಾಲುದಾರಿಕೆಯನ್ನು ವಿಸ್ತರಿಸುವ ಗುರಿ ಹೊಂದಿದೆ. ತಮ್ಮ ಮಾಧ್ಯಮ ಹೇಳಿಕೆಯಲ್ಲಿ ಪ್ರಧಾನಿ ಮೋದಿ ಅವರು ಭಾರತದ ಭದ್ರತಾ ಹಿತಾಸಕ್ತಿ ಮಧ್ಯಪ್ರಾಚ್ಯದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಸಂಬಂಧಿಸಿದೆ ಎಂದು ಹೇಳಿದರು.

ಇಷ್ಟೇ ಅಲ್ಲದೇ ಅಮೆರಿಕ ನೇತೃತ್ವದ ಇಸ್ರೇಲ್ ಅನುಮೋದಿತ ಗಾಜಾ ಶಾಂತಿ ಉಪಕ್ರಮವನ್ನು ನವದೆಹಲಿ ಸಂಪೂರ್ಣವಾಗಿ ಬೆಂಬಲಿಸಲಿದೆ ಎಂದು ಪ್ರಧಾನಿ ಮೋದಿ ಘೋಷಿಸಿದರು.

ಇನ್ನು ಭಾರತ-ಇಸ್ರೇಲ್ ಹಕ್ಸಗಾನ್ ಮೈತ್ರಿಗೆ ಪಾಕಿಸ್ತಾನ ಕಳವಳ ವ್ಯಕ್ತಪಡಿಸಿದ್ದು, ಪಾಕಿಸ್ತಾನದ ಸಂಸತ್ತು ಇಸ್ರೇಲ್‌ನ ಪ್ರಸ್ತಾವಿತ ಹೆಕ್ಸಗಾನ್ ಮೈತ್ರಿ ಚೌಕಟ್ಟನ್ನು ಖಂಡಿಸುವ ನಿರ್ಣಯ ಅಂಗೀಕರಿಸಿದೆ.

## ಮಿನಿ ನ್ಯೂಸ್

### ಮದ್ಯ ಮಾರಾಟ ಭ್ರಷ್ಟಾಚಾರ ಪ್ರಕರಣದಿಂದ ಆರೋಪ ಮುಕ್ತರಾದ ಕೇಜ್ರಿವಾಲ್

**ನವದೆಹಲಿ:** ಮದ್ಯ ಮಾರಾಟ ಭ್ರಷ್ಟಾಚಾರ ಪ್ರಕರಣದಿಂದ ದೆಹಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಹಾಗೂ ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ ಅವರು ಆರೋಪ ಮುಕ್ತರಾಗಿದ್ದಾರೆ.

ರಾಷ್ಟ್ರರಾಜಧಾನಿಯಲ್ಲಿ ಮದ್ಯ ಮಾರಾಟ ಮಾಡಲು ಹೊಸ ನೀತಿ ರೂಪಿಸುವಲ್ಲಿ ಭ್ರಷ್ಟಾಚಾರ ಆರೋಪದ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮತ್ತು ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ದೆಹಲಿ ನ್ಯಾಯಾಲಯವು ಖುಲಾಸೆಗೊಳಿಸಿದೆ. ಅಬಕಾರಿ ನೀತಿಯಲ್ಲಿ ಯಾವುದೇ ಒಳಸಂಚು ಅಥವಾ ಕ್ರಿಮಿನಲ್ ಉದ್ದೇಶ ಇರಲಿಲ್ಲ ಎಂದು ನ್ಯಾಯಾಲಯ ಹೇಳಿದೆ.ನಂತರ ದೆಹಲಿ ಮದ್ಯ ನೀತಿ ಪ್ರಕರಣ ಎಂದು ಕರೆಯಲ್ಪಡುವ ಈ ವಿಷಯವು ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಮತ್ತು ಅವರ ಸಹಾಯಕ ದೆಹಲಿಯಲ್ಲಿ ಅಧಿಕಾರದಲ್ಲಿದ್ದಾಗ ಅವರಿಗೆ ಬಹಳಷ್ಟು ತೊಂದರೆಗಳನ್ನುಂಟುಮಾಡಿತ್ತು. ಈ ಪ್ರಕರಣವು 2021-22ರಲ್ಲಿ ಎಎಪಿ ಸರ್ಕಾರ ಪ್ರಾರಂಭಿಸಿದ ಮದ್ಯ ನೀತಿಗೆ ಹಿಂದಿನದು, ಇದು ಹಿಂದಿನ ಮಾದರಿಗಿಂತ ಹೆಚ್ಚಿನ ಆದಾಯವನ್ನು ತರುತ್ತದೆ ಎಂದು ಅಂದಿನ ಕೇಜ್ರಿವಾಲ್ ಸರ್ಕಾರ ಹೇಳಿಕೊಂಡಿತ್ತು.ದೆಹಲಿ ಸರ್ಕಾರ ನಂತರ ಅದನ್ನು ರದ್ದುಗೊಳಿಸಿತು.

### ನ್ಯಾಯಾಧೀಶರಿಗೆ ಕೊಲೆ ಬೆದರಿಕೆ ಹಾಕಿದ ಆರೋಪಿಗಳು

**ಬಿಜ್ನೋರ್:** ಜೀವಾವಧಿ ಶಿಕ್ಷೆ ವಿಧಿಸಿದ ಕೂಡಲೇ ಇಬ್ಬರು ವ್ಯಕ್ತಿಗಳು ನ್ಯಾಯಾಧೀಶರಿಗೆ ಕೊಲೆ ಬೆದರಿಕೆ ಹಾಕಿರುವ ಪ್ರಕರಣ ಉತ್ತರ ಪ್ರದೇಶದಲ್ಲಿ ನಡೆದಿದೆ. ಕಳೆದ ಮೇ 19, 2024 ರಂದು ಕಾರು ಡಿಕ್ಕಿ ಹೊಡೆದ ಪುಖ್‌ರಾಜ್ ಕೊಲೆ ಪ್ರಕರಣದಲ್ಲಿ ಜೈದೀಪ್ ಮತ್ತು ಪಿಂಟು ಚೌಹಾಣ್ ಅವರನ್ನು ದೋಷಿಗಳು ಎಂದು ಘೋಷಿಸಲಾಗಿದೆ ಎಂದು ಸಹಾಯಕ ಜಿಲ್ಲಾ ಸರ್ಕಾರಿ ವಕೀಲ ಅಜಿತ್ ಪವಾರ್ ಹೇಳಿದರು.

ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ನಿಜೇಂದ್ರ ಕುಮಾರ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದರು.ಶಿಕ್ಷೆ ವಿಧಿಸಿದ ಕೂಡಲೇ, ಅಪರಾಧಿಗಳು ನ್ಯಾಯಾಧೀಶರಿಗೆ ಬೆದರಿಕೆ ಹಾಕಿದರು, ಅವರು ಎಲ್ಲಿ ವಾಸಿಸುತ್ತಿದ್ದಾರೆಂದು ನಮಗೆ ತಿಳಿದಿದೆ ಮತ್ತು ಅವರನ್ನು ಬಿಡುವುದಿಲ್ಲ ಎಂದು ಪವಾರ್ ಹೇಳಿದರು. ಬೆದರಿಕೆಯ ನಂತರ ನ್ಯಾಯಾಧೀಶರ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ವೃತ್ತ ಅಧಿಕಾರಿ ಸಂಗ್ರಾಮ್ ಸಿಂಗ್ ಹೇಳಿದರು.ಧಾಂಪುರ್ ಪ್ರದೇಶದ ಮತೌರಾ ದುರ್ಗ್ ಗ್ರಾಮದಲ್ಲಿ ಪುಖ್‌ರಾಜ್ ಅವರನ್ನು ಕೊಲ್ಲಲಾಗಿತ್ತು.

### ಚಂದ್ರಶೇಖರ್ ಆಜಾದ್ ಪುಣ್ಯತಿಥಿ ಪ್ರಧಾನಿ ನರೇಂದ್ರ ಮೋದಿ ನಮನ

**ನವದೆಹಲಿ:** ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜಾದ್ ಅವರ ಪುಣ್ಯತಿಥಿಯಂದು ಪ್ರಧಾನಿ ನರೇಂದ್ರ ಮೋದಿ ಗೌರವ ಸಲ್ಲಿಸಿದರು ಮತ್ತು ಮಾತೃಭೂಮಿಗಾಗಿ ಅವರ ತ್ಯಾಗವು ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುತ್ತದೆ ಎಂದು ಹೇಳಿದರು.

ಆಜಾದ್ ಜುಲೈ 23, 1906 ರಂದು ಜನಿಸಿದರು ಮತ್ತು ಫೆಬ್ರವರಿ 27, 1931 ರಂದು ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು ಎಂದು ಮೋದಿ ಎಕ್ಸ್ ಮಾಡಿದ್ದಾರೆ. ಭಾರತ ಮಾತೆಯ ಧೈರ್ಯಶಾಲಿ ಪುತ್ರ ಚಂದ್ರಶೇಖರ್ ಆಜಾದ್ ಅವರ ಹುತಾತ್ಮ ದಿನದಂದು ಅವರಿಗೆ ನನ್ನ ಗೌರವಯುತ ನಮನಗಳು. ಭಾರತ ಮಾತೆಯನ್ನು ಗುಲಾಮಗಿರಿಯ ಸಂಕೋಲೆಯಿಂದ ಮುಕ್ತಗೊಳಿಸಲು ಅವರು ತಮ್ಮ ಎಲ್ಲವನ್ನೂ ತ್ಯಾಗ ಮಾಡಿದರು, ಇದಕ್ಕಾಗಿ ಅವರನ್ನು ಶಾಶ್ವತವಾಗಿ ಸ್ಮರಿಸಲಾಗುತ್ತದೆ ಎಂದು ಹೇಳಿದರು. ಅಮರ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್ ಅವರ ಜೀವನವು ಅನ್ಯಾಯದ ವಿರುದ್ಧ ದೃಢವಾಗಿ ನಿಲ್ಲುವ ಸಂಕಲ್ಪವು ನಿಜವಾದ ಶೌರ್ಯ ಎಂದು ಎಲ್ಲರಿಗೂ ಕಲಿಸುತ್ತದೆ ಎಂದು ಪ್ರಧಾನಿ ಹೇಳಿದರು.ಮಾತೃಭೂಮಿಗಾಗಿ ಅವರ ತ್ಯಾಗದ ಕಥೆಯು ದೇಶದ ಪ್ರತಿ ಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇರುತ್ತದೆ ಎಂದು ಅವರು ಹೇಳಿದರು.

### 235 ಕೋಟಿ ರೂ. ನಗದು ಇಟ್ಟು, ಸಿಬ್ಬಂದಿಗೆ ಎಷ್ಟು ಬೇಕೋ ಅಷ್ಟು ತಗೊಳಿ ಎಂದ ಮಾಲೀಕ

**ಬೀಜಿಂಗ್:** ಸಾಮಾನ್ಯವಾಗಿ ಕಂಪನಿಗಳಲ್ಲಿ ಪ್ರತಿ ವರ್ಷ ಸಂಬಳ ಹೆಚ್ಚಿಸುವುದೇ ಕಷ್ಟ, ಅದರಲ್ಲಿ ಬೋನಸ್ ಆಗಿ ಕೋಟಿ ಕೋಟಿ ರೂ. ಹಣ ಸಿಬ್ಬಂದಿಗೆ ಕೊಡುತ್ತಾರೆ ಎಂದರೆ ಅಚ್ಚರಿಯ ವಿಷಯವೇ ಸರಿ. ಚೀನಾದ ಕಂಪನಿಯೊಂದು ಈ ಮಹತ್ತರ ಕೆಲಸ ಮಾಡಿದೆ. ಕಂಪನಿಗೆ ಬಂದ ಲಾಭದಲ್ಲಿ ಶೇ.70ರಷ್ಟನ್ನು ತನ್ನ ಉದ್ಯೋಗಿಗಳಿಗೆ ನೀಡಿದೆ. ವಾರ್ಷಿಕ ಬೋನಸ್ ಆಗಿ ಸಿಬ್ಬಂದಿಗೆ 180 ಮಿಲಿಯನ್ ಯುವಾನ್ ಅಂದರೆ ಸುಮಾರು 235 ಕೋಟಿ ರೂ. ನೀಡಿರುವ ಘಟನೆ ನಡೆದಿದೆ.

ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸಿಬ್ಬಂದಿ ತಮ್ಮ ಸೂಟ್ ಕೇಸ್‌ನಲ್ಲಿ ಹಣವನ್ನು ತುಂಬಿಸುತ್ತಿರುವ ವಿಡಿಯೋ ವೈರಲ್ ಆಗಿದೆ. ಮಾರ್ನಿಂಗ್ ಪೋಸ್ಟ್‌ನ ವರದಿಯ ಪ್ರಕಾರ , ಹೆನಾನ್ ಕುವಾಂಗ್ ಶಾನ್ ಕ್ರೇನ್ ಕಂಪನಿ, ಲಿಮಿಟೆಡ್ ಫೆಬ್ರವರಿ 13 ರಂದು ತನ್ನ ಇಯರ್ ಪಾರ್ಟಿ ಆಯೋಜಿಸಿತ್ತು. ಸುಮಾರು 7,000 ಉದ್ಯೋಗಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೆಲವು ಉದ್ಯೋಗಿಗಳು ಬೃಹತ್ ಪ್ರಮಾಣದ ನಗದು ಬಂಡಲ್‌ಗಳನ್ನು ಸಾಗಿಸಲು ಹೆಣಗಾಡುತ್ತಿದ್ದರೆ, ಇತರರು ದೊಡ್ಡ ಮೊತ್ತದೊಂದಿಗೆ ಯಶಸ್ವಿಯಾಗಿ ಕಚೇರಿಯಿಂದ ಹೋಗಿದ್ದಾರೆ. ಇದು ಪ್ರಪಂಚದಾದ್ಯಂತ 130 ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತದೆ.

### ಕೋಲ್ಕತ್ತಾದಲ್ಲಿ ಕಂಪಿಸಿದ ಭೂಮಿ

**ಕೋಲ್ಕತಾ:** ಕೋಲ್ಕತ್ತಾದಲ್ಲಿ ವೇದಿಕೆಯ ಮೇಲೆ ಕೇಂದ್ರ ಸಚಿವ ಸುಕಾಂತ ಮಜುಂದಾರ್ ಮಾತನಾಡುತ್ತಿರುವಾಗಲೇ ಭೂಮಿ ಕಂಪಿಸಿರುವ ಘಟನೆ ಕೋಲ್ಕತ್ತಾದಲ್ಲಿ ನಡೆದಿದೆ. ಕೋಲ್ಕತ್ತಾದಲ್ಲಿ ಮಧ್ಯಾಹ್ನ ಹಠಾತ್ತನೆ ಭೂಮಿ ಕಂಪಿಸಿದೆ. ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದಲ್ಲಿ 5.3 ತೀವ್ರತೆಯ ಭೂಕಂಪ ಸಂಭವಿಸಿರುವ ಕುರಿತು ಮಾಹಿತಿ ಲಭ್ಯವಾಗಿದೆ. ನಗರದ ಹಲವು ಕಡೆಗಳಲ್ಲಿ ಸೌಮ್ಯದಿಂದ ಮಧ್ಯಮ ಪ್ರಮಾಣದ ಭೂಕಂಪ ಸಂಭವಿಸಿದೆ. ಹಠಾತ್ ಭೂಕಂಪನದಿಂದಾಗಿ ಒಂದು ಕ್ಷಣ ಜನರು ಭಯಭೀತರಾದರು. ತಮ್ಮ ಮನೆಗಳು ಮತ್ತು ಕಚೇರಿಗಳಿಂದ ಹೊರಗೆ ಓಡಿಬಂದಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಯಾವುದೇ ಸಾವುನೋವುಗಳು ಅಥವಾ ದೊಡ್ಡ ಹಾನಿಯ ವರದಿಗಳು ಬಂದಿಲ್ಲ. ಅಧಿಕಾರಿಗಳು ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಜನರು ಜಾಗರೂಕರಾಗಿರುವಂತೆ ತಿಳಿಸಿದ್ದಾರೆ. ಮಧ್ಯಾಹ್ನ 1.22 ಕ್ಕೆ ಭೂಕಂಪ ಸಂಭವಿಸಿದೆ. ಅದರ ತೀವ್ರತೆ ತುಂಬಾ ಹೆಚ್ಚಾಗಿತ್ತು. ಕಂಪನ ಸಂಭವಿಸಿದಾಗ ಕೇಂದ್ರ ಸಚಿವ ಸುಕಾಂತ ಮಜುಂದಾರ್ ಅವರು ಕಾರ್ಯಕ್ರಮವೊಂದರಲ್ಲಿ ವೇದಿಕೆಯಲ್ಲಿದ್ದರು. ಬಾಂಗ್ಲಾದೇಶದಲ್ಲೂ ಭೂಕಂಪದ ಅನುಭವವಾಗಿದೆ. ಮಾಧ್ಯಮ ವರದಿಗಳ ಪ್ರಕಾರ, ಫೆಬ್ರವರಿ 27 ರಂದು ಕೋಲ್ಕತ್ತಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ 5.3 ತೀವ್ರತೆಯ ಭೂಕಂಪ ಸಂಭವಿಸಿದೆ. ಇದರ ಕೇಂದ್ರಬಿಂದು ಬಾಂಗ್ಲಾದೇಶದ ಖುಲ್ನಾದಿಂದ ನೈಋತ್ಯಕ್ಕೆ 26 ಕಿಲೋಮೀಟರ್ ದೂರದಲ್ಲಿತ್ತು. ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಭೂಕಂಪದ ತೀವ್ರತೆ ಹೆಚ್ಚು ಕಂಡುಬಂದಿದೆ.

# ಅಂತರಾಷ್ಟ್ರೀಯ ಸಿನಿಮಾ ರಂಗಕ್ಕೆ ಎಂಟ್ರಿ ಕೊಟ್ಟ ಹೊಂಬಾಳೆ

'ಕೆಜಿಎಫ್' ಮತ್ತು 'ಕೆಜಿಎಫ್ 2' ಸಿನಿಮಾ ಮೂಲಕ ಅಭೂತಪೂರ್ವ ಗೆಲುವು ಕಂಡ ಹೊಂಬಾಳೆ ಫಿಲಮ್ಸ್ ಆ ನಂತರವೂ ಸಹ 'ಸಲಾರ್', 'ಕಾಂತಾರ', 'ಕಾಂತಾರ ಚಾಪ್ಟರ್ 1' ಇನ್ನೂ ಕೆಲ ಸಿನಿಮಾಗಳನ್ನು ನಿರ್ಮಿಸಿದ್ದು, ಪ್ರಭಾಸ್ ಜೊತೆಗೆ ಐದು ಸಿನಿಮಾಗಳ ಮುಂಗಡ ಒಪ್ಪಂದವನ್ನು ಸಹ ಮಾಡಿಕೊಂಡಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈಗಾಗಲೇ ಹೆಸರು ಮಾಡಿರುವ ಹೊಂಬಾಳೆ ಇದೀಗ ಸಾಗರದಾಟಿ ಹೊರ ದೇಶಕ್ಕೆ ತನ್ನ ಉದ್ಯಮ ವಿಸ್ತರಿಸಲು ಮುಂದಾಗಿದೆ. ಹೊಂಬಾಳೆ ಫಿಲಮ್ಸ್ ಅತ್ಯಂತ ಕಡಿಮೆ ಅವಧಿಯಲ್ಲಿ ಅತಿ ದೊಡ್ಡ ನಿರ್ಮಾಣ ಸಂಸ್ಥೆಯಾಗಿ ಬೆಳೆದು ನಿಂತಿದೆ. 'ಕೆಜಿಎಫ್' ಮತ್ತು 'ಕೆಜಿಎಫ್ 2' ಸಿನಿಮಾ ಮೂಲಕ ಅಭೂತಪೂರ್ವ ಗೆಲುವು ಕಂಡ ಹೊಂಬಾಳೆ ಫಿಲಮ್ಸ್ ಆ ನಂತರವೂ ಸಹ 'ಸಲಾರ್', 'ಕಾಂತಾರ', 'ಕಾಂತಾರ ಚಾಪ್ಟರ್ 1' ಇನ್ನೂ ಕೆಲ ಸಿನಿಮಾಗಳನ್ನು ನಿರ್ಮಿಸಿದ್ದು, ಪ್ರಭಾಸ್ ಜೊತೆಗೆ ಐದು ಸಿನಿಮಾಗಳ ಮುಂಗಡ ಒಪ್ಪಂದವನ್ನು ಸಹ ಮಾಡಿಕೊಂಡಿದೆ.

ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈಗಾಗಲೇ ಹೆಸರು ಮಾಡಿರುವ ಹೊಂಬಾಳೆ ಇದೀಗ ಸಾಗರದಾಟಿ ಹೊರ ದೇಶಕ್ಕೆ ತನ್ನ ಉದ್ಯಮ ವಿಸ್ತರಿಸಲು ಮುಂದಾಗಿದೆ.

ಹೊಂಬಾಳೆ ಫಿಲಮ್ಸ್ ಇದೀಗ ವಿದೇಶದಲ್ಲಿ ಸಿನಿಮಾ ವಿತರಣೆಗೆ ಮುಂದಾಗಿದೆ. ಈ ಬಗ್ಗೆ ಟ್ವಿಟ್ಟರ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಹೊಂಬಾಳೆ, ಇನ್ನು ಮುಂದೆ ತಾವು ಓವರಸೀಸ್ ಡಿಸ್ಟ್ರಿಬ್ಯೂಷನ್ ಮಾಡುವುದಾಗಿ ಘೋಷಿಸಿದೆ. 'ಸಿನಿಮಾ ಎನ್ನುವುದು ಅಂತರವನ್ನೂ ಮೀರಿ ಹೃದಯಗಳನ್ನು ಬೆಸೆಯುವ ಶಕ್ತಿ. ಭಾರತದಿಂದ ಜಗತ್ತಿನವರೆಗೆ, ನಮ್ಮ ಕಥೆಗಳು ದಿಕ್ಕು-ದಿಗಂತಗಳನ್ನೂ ದಾಟಿ ಸಾಗುತ್ತವೆ. ಅತೀವ ಕೃತಜ್ಞತೆ ಮತ್ತು ಸಂಭ್ರಮದೊಂದಿಗೆ, ಭಾರತೀಯ ಸಿನಿಮಾದ ಚೈತನ್ಯವನ್ನು ಗಡಿಗಳ ಆಚೆಗೆ, ವಿವಿಧ ಚಿತ್ರೋದ್ಯಮಗಳಿಗೆ ಮತ್ತು ಪ್ರತಿಯೊಬ್ಬರ ಹೃದಯಕ್ಕೆ ತಲುಪಿಸಲು 'ಹೊಂಬಾಳೆ ಫಿಲ್ಮ್ಸ್' ಈಗ ವಿದೇಶಿ ವಿತರಣಾ ಕ್ಷೇತ್ರಕ್ಕೆ ಹೆಜ್ಜೆ ಇಡುತ್ತಿದೆ. ಇನ್ನಷ್ಟು ವಿವರಗಳಿಗಾಗಿ ಅಥವಾ ಇದರಲ್ಲಿ ಯಾವುದಾದರೂ ನಿರ್ದಿಷ್ಟ ಪದ ಬದಲಾವಣೆ ಬೇಕಿದ್ದಲ್ಲಿ ಕೇಳಬಹುದು. ನಾನಿಲ್ಲಿ ಸಹಾಯಕ್ಕೆ ಸಿದ್ಧ' ಎಂದು ಹೊಂಬಾಳೆ ಹೇಳಿದೆ.



# ನಟಿಸುವಾಗ ಅನುಭವಿಸಿದ ಕಷ್ಟಗಳ ನೆನಪಿಸಿಕೊಂಡ ಪ್ರೇಮಾ

ಸಿನಿಮಾ ಒಂದರಲ್ಲಿ ನಟಿಸುವಾಗ ಅನುಭವಿಸಿದ ನೋವು, ಅದರಿಂದ ಆದ ಹಾನಿಯ ಬಗ್ಗೆಯೂ ಮಾತನಾಡಿದ್ದಾರೆ ನಟಿ. ಪ್ರೇಮಾ ಅವರಿಗೆ ಮೊದಲಿನಿಂದಲೂ ಗಗನಸಖಿ ಆಗಬೇಕೆಂಬ ಹಂಬಲ ಇತ್ತಂತೆ. ಆದರೆ ತಾಯಿಯ ಪ್ರೋತ್ಸಾಹದಿಂದಾಗಿ ಅವರು ಬಣ್ಣದ ಲೋಕಕ್ಕೆ ಕಾಲಿಟ್ಟರು. ಉಪೇಂದ್ರ ನಿರ್ದೇಶನದ 'ಓಂ' ಸಿನಿಮಾ ಅವರ ವೃತ್ತಿಜೀವನಕ್ಕೆ ದೊಡ್ಡ ತಿರುವು ನೀಡಿತು. ಪ್ರೇಮ ನಟಿಸಿದ ಎರಡನೇ ಸಿನಿಮಾ ಅದು. ಆ ಚಿತ್ರದ ರಿಯಲಿಸ್ಟಿಕ್ ನಟನೆಗಾಗಿ ಅವರು ಗಾಜಿನ ಚೂರುಗಳು ಮತ್ತು ಬೆಂಕಿಯ ನಡುವೆ ಕೆಲಸ ಮಾಡಬೇಕಾಗಿದ್ದ ಕಠಿಣ ಸಂದರ್ಭಗಳನ್ನು ಅವರು ನೆನಪಿಸಿಕೊಂಡಿದ್ದಾರೆ. ತೆಲುಗಿನಲ್ಲಿ 'ಧರ್ಮಚಕ್ರಂ' ಮತ್ತು 'ದೇವಿ'ಯಂತಹ ಸೂಪರ್ ಹಿಟ್ ಚಿತ್ರಗಳನ್ನು ನೀಡಿದ ಪ್ರೇಮಾ ಅವರಿಗೆ ಆರಂಭದಲ್ಲಿ ಭಾಷೆಯ ಸಮಸ್ಯೆ ಎದುರಾಗಿತ್ತಂತೆ. ಖ್ಯಾತ ನಿರ್ದೇಶಕ ಕೋಡಿ ರಾಮಕೃಷ್ಣ ಅವರು ತಮಗೆ ತೆಲುಗು ಕಲಿಸಿಕೊಟ್ಟರು ಎಂದು ಪ್ರೇಮ ನೆನಪು ಮಾಡಿಕೊಂಡಿದ್ದಾರೆ. ಆಗ ಇಂದಿನಂತೆ ಕ್ಯಾರವಾನ್ ಸೌಲಭ್ಯಗಳಿರಲಿಲ್ಲ, ಸೆಟ್‌ನಲ್ಲಿ ಎಲ್ಲರೂ ಒಂದೇ ಕೋಣೆಯಲ್ಲಿ ಕುಳಿತು ಕೆಲಸ ಮಾಡಬೇಕಿತ್ತು ಎಂದು ಹಳೆಯ ದಿನಗಳನ್ನು ನೆನಪಿಸಿಕೊಂಡಿದ್ದಾರೆ. ಮಹಿಳಾ ಪ್ರಧಾನ ಚಿತ್ರಗಳಲ್ಲಿ ಮೈಲಿಗಲ್ಲು ಸೃಷ್ಟಿಸಿದ 'ದೇವಿ' ಚಿತ್ರದ ಪಾತ್ರಕ್ಕಾಗಿ ಅವರು ವಿಶೇಷ ಲೆನ್ಸ್‌ಗಳನ್ನು ಧರಿಸಬೇಕಾಗಿತ್ತು. ಇದರ ಪರಿಣಾಮವಾಗಿ 'ದೇವಿ' ಚಿತ್ರದ ಚಿತ್ರೀಕರಣದ ಸಮಯದಲ್ಲಿ ಅವರಿಗೆ ತೀವ್ರವಾದ ಕಣ್ಣಿನ ಸೋಂಕು ಕಾಣಿಸಿಕೊಂಡಿತ್ತು. ನಟನೆಯ ಮೇಲಿನ ಅತಿಯಾದ ಪ್ರೀತಿಯಿಂದ ಆ ಕಷ್ಟವನ್ನೂ ಅವರು ಮೆಟ್ಟಿ ನಿಂತಿದ್ದಾಗಿ ಪ್ರೇಮ ಹೇಳಿಕೊಂಡಿದ್ದಾರೆ. ತೆಲುಗಿನ ವೆಂಕಟೇಶ್, ಮೋಹನ್ ಬಾಬು ಮತ್ತು ಜಗಪತಿ ಬಾಬು ಅವರಂತಹ ದಿಗ್ಗಜ ನಟರ ಜೊತೆ ಕೆಲಸ ಮಾಡಿದ ಅನುಭವ ಹಂಚಿಕೊಂಡ ಪ್ರೇಮಾ, ಮೋಹನ್ ಬಾಬು ಮತ್ತು ವಿಷ್ಣುವರ್ಧನ್ ಅವರ ಶಿಸ್ತು ಮತ್ತುಸಮಯಪಾಲನೆ ತಮ್ಮ ಮೇಲೆ ದೊಡ್ಡ ಪ್ರಭಾವ ಬೀರಿದೆ ಎಂದು ತಿಳಿಸಿದ್ದಾರೆ. 1995 ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ನಟಿ ಪ್ರೇಮ, 2009ರ ವರೆಗೆ ಕನ್ನಡ, ತೆಲುಗು ಸಿನಿಮಾಗಳಲ್ಲಿ ಸಕ್ರಿಯರಾಗಿದ್ದರು. ಅದಾದ ಬಳಿಕ ಚಿತ್ರರಂಗದಿಂದ ದೂರಾದ ಪ್ರೇಮ, ವೈಯಕ್ತಿಕ ಜೀವನದಲ್ಲಿ ಬ್ಯುಸಿ ಆದರು. ಆದರೆ ವೈಯಕ್ತಿಕ ಜೀವನದಲ್ಲಿ ಅನುಭವಿಸಿದ ಕೆಲವು ಏರು-ಪೇರುಗಳ ಬಳಿಕ 2017 ರಲ್ಲಿ ಮತ್ತೆ ಚಿತ್ರರಗಕ್ಕೆ ರೀ ಎಂಟ್ರಿ ಕೊಟ್ಟರು. ಈಗ ಅಲ್ಲೊಂದು-ಇಲ್ಲೊಂದು ಕನ್ನಡ ಮತ್ತು ತೆಲುಗು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.



# ಧನ್ವೀರ್ ಸಿನಿಮಾಕ್ಕೆ ಆರಂಭದಲ್ಲೇ ವಿಘ್ನ

ಸಿನಿಮಾದ ಬೆಳಿಗ್ಗೆ ಮತ್ತು ಮಧ್ಯಾಹ್ನದ ಶೋಗಳು ರಾಜ್ಯದಾದ್ಯಂತ ಸಾಮೂಹಿಕವಾಗಿ ರದ್ದಾಗಿವೆ. 'ಹಯಗ್ರೀವ' ಸಿನಿಮಾ ಇಂದು ಬಿಡುಗಡೆ ಆಗಬೇಕಿತ್ತು, ಆದರೆ ಸೆನ್ಸಾರ್ ಸಮಸ್ಯೆಯಿಂದಾಗಿ ಸಿನಿಮಾದ ಮೊದಲ ಎರಡು ಶೋಗಳು ಅಂದರೆ ಬೆಳಿಗ್ಗೆ 10:30 ಮತ್ತು ಮಧ್ಯಾಹ್ನ 1:30ಗೆ ಪ್ರದರ್ಶನ ಆಗಬೇಕಿದ್ದ ಶೋಗಳು ರದ್ದಾಗಿವೆ. ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಚಿತ್ರತಂಡ, 'ಅನಿವಾರ್ಯ ಕಾರಣಗಳಿಂದ ನಮ್ಮ ಸಿನಿಮಾದ ದಿನದ ಮೊದಲ ಎರಡೂ ಶೋಗಳು ರದ್ದಾಗಿದ್ದು, ಸಂಜೆ 4:30ರ ಶೋನಿಂದ ರಾಜ್ಯದಾದ್ಯಂತ ಅದ್ದೂರಿಯಾಗಿ ಪ್ರಾರಂಭ ಆಗುತ್ತವೆ, ನೋಡಿ ಹರಸಿ' ಎಂದಿದ್ದಾರೆ ನಟ ಧನ್ವೀರ್. ಧನ್ವೀರ್ ಗೌಡ ನಟಿಸಿರುವ 'ಹಯಗ್ರೀವ' ಸಿನಿಮಾಕ್ಕೆ ಸೆನ್ಸಾರ್ ಸಮಸ್ಯೆ ಎದುರಾಗಿರುವ ಕಾರಣದಿಂದಾಗಿ ಸಿನಿಮಾದ ಬಿಡುಗಡೆ ತಡವಾಗುತ್ತಿದೆ. 'ಹಯಗ್ರೀವ' ಸಿನಿಮಾನಲ್ಲಿ ಹಿಂದೂ ದೇವತೆಗಳ ಉಲ್ಲೇಖ ಇದೆಯಂತೆ. ಕೆಲವು ದೃಶ್ಯಗಳಲ್ಲಿ ಹಿಂದೂ ದೇವತೆಗಳ ಚಿತ್ರಗಳನ್ನು ಅಥವಾ ಮುಖವನ್ನು ತಿರುಚಿರುವ ದೃಶ್ಯಗಳು ಸಹ ಇವೆ ಎನ್ನಲಾಗಿದೆ. ಇದೇ ಕಾರಣಕ್ಕೆ ಸೆನ್ಸಾರ್ ಮಂಡಳಿಯು ಸಿನಿಮಾವನ್ನು ರಿವೈಸ್ ಕಮಿಟಿಗೆ ಕಳಿಸಿದ್ದು, ರಿವೈಸ್ ಕಮಿಟಿ ಸಿನಿಮಾ ನೋಡಿದ ಬಳಿಕವಷ್ಟೆ ಸಿನಿಮಾಕ್ಕೆ ಸೆನ್ಸಾರ್ ಪ್ರಮಾಣ ಪತ್ರ ಸಿಗಲಿದೆ. ಇದೇ ಕಾರಣಕ್ಕೆ ಸಿನಿಮಾದ ಬಿಡುಗಡೆ ವಿಳಂಬ ಆಗುತ್ತಿದೆ.

ನಿಯಮದ ಪ್ರಕಾರ ರಿವೈಸ್ ಕಮಿಟಿಯವರಿಗೆ ಸಿನಿಮಾವನ್ನು ನೋಡಿ ಕಟ್‌ಗಳನ್ನು ಸೂಚಿಸಲು ಅಥವಾ ಪ್ರಮಾಣ ಪತ್ರ ನೀಡಲು ಹದಿನೈದು ದಿನಗಳ ಕಾಲಾವಕಾಶ ಇರುತ್ತದೆ ಎನ್ನಲಾಗಿದೆ. ಆದರೆ ರಿವೈಸ್ ಕಮಿಟಿಯವರು ಇಂದೇ ಸೆನ್ಸಾರ್ ಪ್ರಮಾಣ ಪತ್ರ ನೀಡುವ ಭರವಸೆಯಲ್ಲಿರುವ 'ಹಯಗ್ರೀವ' ಚಿತ್ರತಂಡ ಇಂದು ಸಂಜೆಯಿಂದಲೇ ಪದರ್ಶನ ಆರಂಭಿಸುವುದಾಗಿ ಭರವಸೆ ನೀಡಿವೆ. 'ಹಯಗ್ರೀವ' ಸಿನಿಮಾನಲ್ಲಿ ಧನ್ವೀರ್ ಗೌಡ ಮತ್ತು ಸಂಜನಾ ಆನಂದ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಸಿನಿಮಾ ನಿರ್ದೇಶನ ಮಾಡಿರುವುದು ರಘು ಕುಮಾರ್, ಸಿನಿಮಾನಲ್ಲಿ ಶರತ್ ಲೋಹಿತಾಶ್ವ, ಸಾಧುಕೋಕಿಲ, ಶೋಭರಾಜ್ ಇನ್ನೂ ಹಲವು ಕಲಾವಿದರು ನಟಿಸಿದ್ದಾರೆ.



# ಶೂಟಿಂಗ್ ಮುಗಿಸಿದ 'ದೇವಸಸ್ಯ'

'ದೇವಸಸ್ಯ' ಸಿನಿಮಾದ ಶೂಟಿಂಗ್ ಮುಕ್ತಾಯ ಆಗಿದೆ. ಕನ್ನಡ, ತೆಲುಗು, ಹಿಂದಿ ಸೇರಿದಂತೆ 5 ಭಾಷೆಗಳಲ್ಲಿ ಸಿನಿಮಾ ಸಿದ್ಧವಾಗುತ್ತಿದೆ. 'ಅನಂತ ಫಿಲ್ಮ್ಸ್' ಬ್ಯಾನರ್ ಮೂಲಕ ಅನಂತಮೂರ್ತಿ ಎಂ. ಹೆಗಡೆ ಈ ಚಿತ್ರ ನಿರ್ಮಿಸುತ್ತಿದ್ದಾರೆ. ಕಾರ್ತಿಕ್ ಭಟ್ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದ ಕೊನೆಯ ದಿನದ ಶೂಟಿಂಗ್ ಮಾಗಡಿ ರಸ್ತೆಯಲ್ಲಿರುವ ಪುಟ್ಟಣ್ಣ ಕಣಗಾಲ್ ಸ್ಟುಡಿಯೋದಲ್ಲಿ ನಡೆಯಿತು. ಈ ವೇಳೆ ಸುದ್ದಿಗೋಷ್ಠಿ ಮಾಡಲಾಯಿತು. '1995ರ ಕಾಲಘಟ್ಟದಲ್ಲಿ ನಡೆಯುವ ನಮ್ಮ ಮಣ್ಣಿನ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗುತ್ತಿದೆ' ಎಂದು ಚಿತ್ರತಂಡ ಹೇಳಿದೆ. ಈ ಸಿನಿಮಾದಲ್ಲಿ ಸಿದ್ದಿ ಸಮುದಾಯ ಸೆಲ್ವಿನ್ ದೇಸಾಯಿ ಪ್ರಮುಖ ಪಾತ್ರ ಮಾಡುತ್ತಿದ್ದಾರೆ. ಊರಲ್ಲಿ ಟ್ರಾಕ್ಟರ್ ಓಡಿಸುತ್ತಿದ್ದ ಅವರಿಗೆ ಈ ಚಿತ್ರದ ಮೂಲಕ ಹೀರೋ ಆಗುವ ಅವಕಾಶ ಸಿಕ್ಕಿದೆ. 2 ವರ್ಷಗಳ ತರಬೇತಿ ಪಡೆದು ಅವರು ನಟಿಸಿದ್ದಾರೆ. ರಂಗಭೂಮಿ ಹಿನ್ನೆಲೆಯ ಆಹಾನ್ ಗೌಡ ಹಾಗೂ ಬಿಂಬಿಕಾ ಜೆ. ರಾವ್ ಕೂಡ ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. ಈ ಸಿನಿಮಾದಲ್ಲಿ 150ಕ್ಕೂ ಹೆಚ್ಚು ಸಿದ್ದಿ ಕಲಾವಿದರು ನಟಿಸಿರುವುದು ವಿಶೇಷ. 'ದೇವಸಸ್ಯ' ಸಿನಿಮಾಗಾಗಿ 1995ರ ಕಾಲಘಟ್ಟದ ಹಳ್ಳಿಯೊಂದರ ಸೆಟ್ ಹಾಕಿ 93 ದಿನಗಳ ಕಾಲ ಶೂಟಿಂಗ್ ಮಾಡಲಾಗಿದೆ. ಚಿತ್ರದ ಬಗ್ಗೆ ನಿರ್ಮಾಪಕ ಅನಂತಮೂರ್ತಿ ಹೆಗಡೆ ಅವರು ಮಾತನಾಡಿದರು.

'ಮೊದಲಿಂದಲೂ ನನಗೆ ಸಿನಿಮಾ ಮೇಲೆ ಬಹಳ ಆಸಕ್ತಿ. ಹಾಗಾಗಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದೇನೆ. ಉತ್ತರ ಕನ್ನಡದಲ್ಲೇ ಬಹುತೇಕ ಚಿತ್ರೀಕರಣ ನಡೆಸಿದ್ದೇವೆ. ಅದ್ಭುತವಾದ, ವಿಶೇಷವಾದ ಸಂಜೀವಿನಿ ಗಿಡವೇ ದೇವಸಸ್ಯ. ಇಂತಹ ವಿಶಿಷ್ಟವಾದ ಸ್ಕ್ರಿಪ್ಟ್ ಸಿಕ್ಕಿರೋದು ನಮ್ಮ ಅದೃಷ್ಟ. ನಿರ್ದೇಶಕರು ಈ ಸಿನಿಮಾಗಾಗಿ 3 ವರ್ಷ ಕಷ್ಟಪಟ್ಟಿದ್ದಾರೆ' ಎಂದು ಅವರು ಹೇಳಿದ್ದಾರೆ. ಕೆಲವು ಸಿನಿಮಾ, ಸೀರಿಯಲ್‌ಗಳಿಗೆ ಬರಹಗಾರನಾಗಿ ಕೆಲಸ ಮಾಡಿ ಅನುಭವ ಹೊಂದಿರುವ ಕಾರ್ತಿಕ್ ಭಟ್ ಅವರು ಮೊದಲ ಬಾರಿಗೆ ನಿರ್ದೇಶಕನಾಗಿ 'ದೇವಸಸ್ಯ' ಸಿನಿಮಾ ಮಾಡುತ್ತಿದ್ದಾರೆ. 'ಶಿರಸಿ ಸುತ್ತಮುತ್ತಲಿನ ಕಾಡು ಪ್ರದೇಶಗಳಲ್ಲಿ ವಾಸಿಸುವ ಸಿದ್ದಿ ಸಮುದಾಯದ ಬಗ್ಗೆ ಸಿನಿಮಾದಲ್ಲಿ ಹೇಳಲಿದ್ದೇವೆ.ಎರಡು ಊರುಗಳ ಮಧ್ಯೆ ನಡೆಯುವ ಕಥೆಯಿದು' ಎಂದು ಅವರು ಹೇಳಿದರು.

ನಟ ಸೆಲ್ವಿನ್ ದೇಸಾಯಿ ಮಾತನಾಡಿ, 'ನಾನು ಊರಲ್ಲಿ ಟ್ರಯಾಕ್ಟರ್ ಓಡಿಸಿಕೊಂಡಿದ್ದೆ. ನಿರ್ದೇಶಕರು ಬಂದು ಸಿನಿಮಾದಲ್ಲಿ ಆಕ್ಟ್ ಮಾಡ್ತೀಯಾ ಅಂತ ಕೇಳಿದರು.

# ಮದುವೆ ಬಳಿಕ ಮೋದಿಯ ಭೇಟಿ

ವಿವಾಹವಾದ ಮರುದಿವೇ ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಜಂಟಿಯಾಗಿ ದೆಹಲಿಗೆ ತೆರಳಿದ್ದು, ಅಮಿತ್ ಶಾ, ಪ್ರಧಾನಿ ನರೇಂದ್ರ ಇನ್ನೂ ಕೆಲವರನ್ನು ಭೇಟಿ ಆಗಿದ್ದಾರೆ. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಆಗಿರುವ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರು ಮಾರ್ಚ್ 04 ರಂದು ಹೈದರಾಬಾದ್‌ನಲ್ಲಿ ನಡೆಯಲಿರುವ ಆರತಕ್ಷತೆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ. ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಅವರು ನಿನ್ನೆಯಷ್ಟೆ (ಫೆಬ್ರವರಿ 26) ರಾಜಸ್ಥಾನದ ಉದಯಪುರದಲ್ಲಿ ಐಶಾರಾಮಿ ಐಟಿಸಿ ರೆಸಾರ್ಟ್‌ನಲ್ಲಿ ಬಲು ಅದ್ದೂರಿಯಾಗಿ ವಿವಾಹವಾಗಿದ್ದಾರೆ.



ವಿವಾಹವಾದ ಮರುದಿವೇ ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಜಂಟಿಯಾಗಿ ದೆಹಲಿಗೆ ತೆರಳಿದ್ದು, ಅಮಿತ್ ಶಾ, ಪ್ರಧಾನಿ ನರೇಂದ್ರ, ಇನ್ನೂ ಕೆಲವರನ್ನು ಭೇಟಿ ಆಗಿದ್ದಾರೆ. ರಶ್ಮಿಕಾ-ವಿಜಯ್ ಅವರ ಮದುವೆ ಮುಗಿದಿದೆ ಆದರೆ ಆರತಕ್ಷತೆ ಕಾರ್ಯಕ್ರಮ ಮಾರ್ಚ್ 04ರಂದು ನಡೆಯಲಿದ್ದು, ಈ ಕಾರ್ಯಕ್ರಮಕ್ಕೆ ರಾಜಕೀಯ ಗಣ್ಯರನ್ನು ಖುದ್ದಾಗಿ ಆಹ್ವಾನಿಸುತ್ತಿದ್ದಾರೆ ರಶ್ಮಿಕಾ ಮತ್ತು ವಿಜಯ್ ದೇವರಕೊಂಡ.ಅಸಲಿಗೆ ಮೋದಿ ಅವರು ವಿಜಯ್ ಹಾಗೂ ರಶ್ಮಿಕಾ ಮಂದಣ್ಣ ಮದುವೆಗೆ ಮುಂಚೆಯೇ ಪತ್ರ ಮುಖೇನ ಶುಭಾಶಯ ತಿಳಿಸಿದ್ದರು. ವಿಜಯ್ ಅವರ ತಂದೆ ಬರೆದಿದ್ದ ಆಹ್ವಾನ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಮೋದಿ ಅವರು ಪತ್ರ ಬರೆದು ವಧು-ವರರಿಗೆ ಶುಭ ಕೋರಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಆಗಿರುವ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರು ಮಾರ್ಚ್ 04 ರಂದು ಹೈದರಾಬಾದ್‌ನಲ್ಲಿ ನಡೆಯಲಿರುವ ಆರತಕ್ಷತೆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ. ಇದೇ ದಿನ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವಕರೊಂಡ ಅವರುಗಳು ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಅವರನ್ನೂ ಸಹ ಭೇಟಿ ಆಗಿದ್ದು, ಅವರನ್ನೂ ಸಹ ಮಾರ್ಚ್ 04 ರಂದು ನಡೆಯಲಿರುವ ಆರತಕ್ಷತೆಗೆ ಆಹ್ವಾನಿಸಿದ್ದಾರೆ.

# ಜಿಂಬಾಬ್ವೆ ವಿರುದ್ಧ ಗೆದ್ದರೂ ಮೇಲೇಳದ ಟೀಂ ಇಂಡಿಯಾ

ಇತಿಹಾಸದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭಾರತಕ್ಕೆ ಉತ್ತಮ ದಾಖಲೆ ಇಲ್ಲದಿದ್ದರೂ, ಈ ನಿರ್ಣಾಯಕ ಪಂದ್ಯ ಗೆದ್ದು ಸೆಮಿಫೈನಲ್‌ಗೆ ಪ್ರವೇಶಿಸಲು ಸಿದ್ಧವಾಗಿದೆ. 2026 ರ ಟಿ20 ವಿಶ್ವಕಪ್‌ನ ಸೂಪರ್ 8 ಸುತ್ತಿನಲ್ಲಿ ಜಿಂಬಾಬ್ವೆ ತಂಡವನ್ನು 72 ರನ್‌ಗಳಿಂದ ಮಣಿಸಿದ ಟೀಂ ಇಂಡಿಯಾ ತನ್ನ ಸೆಮಿಫೈನಲ್ ಕನಸನ್ನು ಇನ್ನು ಜೀವಂತವಾಗಿರಿಸಿಕೊಂಡಿದೆ. ಚೆನ್ನೈನ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 256 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ಜಿಂಬಾಬ್ವೆ 184 ರನ್‌ಗಳಿಸಲಷ್ಟೇ ಶಕ್ತವಾಯಿತು. ಈ ಗೆಲುವಿನೊಂದಿಗೆ ಟೀಂ ಇಂಡಿಯಾ ಸೆಮಿಫೈನಲ್‌ಗೇರುವ ಅವಕಾಶವನ್ನು ಹೊಂದಿದೆಯಾದರೂ, ಪಾಯಿಂಟ್ ಪಟ್ಟಿಯಲ್ಲಿ ಮಾತ್ರ ಮೂರನೇ ಸ್ಥಾನದಲ್ಲೇ ಉಳಿದಿದೆ.



ಇದು ಟೀಂ ಇಂಡಿಯಾ ಅಭಿಮಾನಿಗಳನ್ನು ಆತಂಕಕ್ಕೀಡುಮಾಡಿದೆ. ಪಾಯಿಂಟ್ ಪಟ್ಟಿಯಲ್ಲಿ ಭಾರತ ತಂಡ 3ನೇ ಸ್ಥಾನದಲ್ಲಿದ್ದರೂ, ಸೆಮಿಫೈನಲ್‌ಗೆ ಸುಲಭವಾಗಿ ಅರ್ಹತೆ ಪಡೆಯುವ ಅವಕಾಶ ಹೊಂದಿದೆ.

ದಕ್ಷಿಣ ಆಫ್ರಿಕಾ ಈಗಾಗಲೇ ಗುಂಪು 1 ರಿಂದ ಸೆಮಿಫೈನಲ್‌ಗೆ ಅರ್ಹತೆ ಪಡೆದಿದೆ. ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯುವ ತಂಡವನ್ನು ಮಾರ್ಚ್ 1 ರಂದು ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಪಂದ್ಯದಿಂದ ನಿರ್ಧರಿಸಲಾಗುತ್ತದೆ. ಟೀಂ ಇಂಡಿಯಾ ಈ ಪಂದ್ಯವನ್ನು ಯಾವುದೇ ಬೆಲೆ ತೆತ್ತಾದರೂ ಗೆಲ್ಲಲೇಬೇಕು. ಸೂರ್ಯಕುಮಾರ್ ಪಡೆ, ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸಿದರೆ ದಾಕು ಸೆಮಿಫೈನಲ್‌ಗೆ ಅರ್ಹತೆ ಪಡೆಯುತ್ತದೆ. ಈ ಗೆಲುವಿನೊಂದಿಗೆ ಭಾರತ 4 ಅಂಕ ಪಡೆಯುವ ಮೂಲಕ ಗುಂಪು 1 ರಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ಸೆಮಿಫೈನಲ್ ಟಿಕೆಟ್ ಖಚಿತ ಪಡಿಸಿಕೊಳ್ಳುತ್ತದೆ. ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವೆ ನಡೆದ ಪಂದ್ಯಗಳ ದಾಖಲೆ ನಿಜಕ್ಕೂ ಅದ್ಭುತವಾಗಿದೆ. ವಾಸ್ತವವಾಗಿ, ಈ ಪಂದ್ಯಾವಳಿಯಲ್ಲಿ ಎರಡೂ ತಂಡಗಳು ನಾಲ್ಕು ಬಾರಿ ಮುಖಾಮುಖಿಯಾಗಿವೆ. ಈ ಅವಧಿಯಲ್ಲಿ, ವೆಸ್ಟ್ ಇಂಡೀಸ್ ಮೂರು ಪಂದ್ಯಗಳನ್ನು ಗೆದ್ದಿದ್ದರೆ, ಭಾರತ ಕೇವಲ ಒಂದು ಪಂದ್ಯವನ್ನು ಗೆದ್ದಿದೆ. ಆದ್ದರಿಂದ, ಈ ಪಂದ್ಯವು ಟೀಂ ಇಂಡಿಯಾಕ್ಕೆ ಸುಲಭವಲ್ಲ. 2014 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಒಮ್ಮೆ ಮಾತ್ರ ಟೀಂ ಇಂಡಿಯಾ ಗೆಲುವು ಸಾಧಿಸಿದೆ. 2016 ರಲ್ಲಿ ನಡೆದಿದ್ದ ಕೊನೆಯ ಮುಖಾಮುಖಿಯಲ್ಲಿ ವೆಸ್ಟ್ ಇಂಡೀಸ್ ಸೆಮಿಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾವನ್ನು ಸೋಲಿಸಿತ್ತು. ಈ ಸೋಲಿಗೆ ಸೇಡು ತೀರಿಸಿಕೊಳ್ಳುವ ಅವಕಾಶ ಭಾರತ ತಂಡಕ್ಕೆ ಇದೆ.



# ಯುವರಾಜ್ ದಾಖಲೆ ಸರಿಗಟ್ಟಿದ ಇಶಾನ್-ಹಾರ್ದಿಕ್!

ಚೆಪಾಕ್ ಮೈದಾನದಲ್ಲಿ ಜಿಂಬಾಬ್ವೆ ವಿರುದ್ಧ ಇಶಾನ್ ಕಿಶನ್ ಮತ್ತು ಹಾರ್ದಿಕ್ ಪಾಂಡ್ಯ ಅದ್ಭುತ ಆಟವಾಡಿದರು. ಇಬ್ಬರೂ ಒಟ್ಟಾಗಿ 6 ಸಿಕ್ಸರ್‌ಗಳನ್ನು ಬಾರಿಸಿದರು. ಇದರೊಂದಿಗೆ, ಟಿ20 ವಿಶ್ವಕಪ್‌ನ ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಭಾರತೀಯ ಆಟಗಾರ ಎಂಬ ಯುವರಾಜ್ ಸಿಂಗ್ ಅವರ ದಾಖಲೆಯನ್ನು ಸರಿಗಟ್ಟಿದರು.



ಯುವರಾಜ್ ಸಿಂಗ್ 2007 ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ 12 ಸಿಕ್ಸರ್‌ಗಳನ್ನು ಬಾರಿಸಿದರೆ, 2026 ರ ಟಿ20 ವಿಶ್ವಕಪ್‌ನಲ್ಲಿ ಇದುವರೆಗೆ 12 ಸಿಕ್ಸರ್‌ಗಳೊಂದಿಗೆ ಇಶಾನ್ ಮತ್ತು ಹಾರ್ದಿಕ್ ಕೂಡ ಈ ದಾಖಲೆ ಪಟ್ಟಿಗೆ ಸೇರಿದ್ದಾರೆ. ಪ್ರಸ್ತುತ ಟೂರ್ನಿಯಲ್ಲಿ ಭಾರತದ ಪರ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಇಬ್ಬರು ಆಟಗಾರರು ಇವರೇ. ಕೇವಲ ಸಿಕ್ಸರ್‌ಗಳನ್ನು ಹೊರತುಪಡಿಸಿ, ಹಾರ್ದಿಕ್ ಪಾಂಡ್ಯ ಮತ್ತೊಂದು ಅಪರೂಪದ ದಾಖಲೆಯನ್ನು ಸೃಷ್ಟಿಸಿದರು. ಟಿ20 ವಿಶ್ವಕಪ್ ಇತಿಹಾಸದಲ್ಲಿ 5 ಅಥವಾ ಅದಕ್ಕಿಂತ ಕಡಿಮೆ ಸ್ಥಾನದಲ್ಲಿ ಬ್ಯಾಟಿಂಗ್ ಮಾಡುವಾಗ ಅತಿ ಹೆಚ್ಚು ಅರ್ಧಶತಕಗಳನ್ನು (5) ಗಳಿಸಿದ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಹಾರ್ದಿಕ್ ಪಾತ್ರರಾಗಿದ್ದಾರೆ. ಈ ದಾಖಲೆಯ ಪಟ್ಟಿಯಲ್ಲಿ ಹಾರ್ದಿಕ್ ದಕ್ಷಿಣ ಆಫ್ರಿಕಾದ ವಿಧ್ವಂಸಕ ಆಟಗಾರ ಡೇವಿಡ್ ಮಿಲ್ಲರ್ ಮತ್ತು ಆಸ್ಟ್ರೇಲಿಯಾದ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಅವರನ್ನು ಹಿಂದಿಕ್ಕಿ ನಂಬರ್ ಒನ್ ಸ್ಥಾನ ಪಡೆದಿದ್ದಾರೆ. ಟಿ20 ವಿಶ್ವಕಪ್ ಇತಿಹಾಸದಲ್ಲಿ 5 ಅಥವಾ ಅದಕ್ಕಿಂತ ಕಡಿಮೆ ಸ್ಥಾನದಲ್ಲಿ ಬ್ಯಾಟಿಂಗ್ ಮಾಡುವಾಗ ಮಿಲ್ಲರ್ ಮತ್ತು ಮಾರ್ಕಸ್ ಇಲ್ಲಿಯವರೆಗೆ ತಲಾ ನಾಲ್ಕು ಅರ್ಧಶತಕಗಳನ್ನು ಗಳಿಸಿದ್ದಾರೆ. ಇತ್ತೀಚಿನ ಟೂರ್ನಿಯ ಅಂಕಿಅಂಶಗಳು ಹಾರ್ದಿಕ್ ಫಿನಿಷರ್ ಆಗಿ ಎಷ್ಟು ಅಪಾಯಕಾರಿ ಎಂಬುದನ್ನು ಸಾಬೀತುಪಡಿಸುತ್ತವೆ.

# ಟಿ20 ವಿಶ್ವಕಪ್ ಮಧ್ಯೆಯೇ ಟೀಂ ಇಂಡಿಯಾಗೆ ಆಘಾತ

ಟೀಂ ಇಂಡಿಯಾ ಆಟಗಾರ ರಿಂಕು ಸಿಂಗ್ ತಂದೆ ಖಾನ್‌ಚಂದ್ ಸಿಂಗ್ ಲಿವರ್ ಕ್ಯಾನ್ಸರ್‌ನಿಂದ ನಿಧನರಾಗಿದ್ದಾರೆ. ಟಿ20 ವಿಶ್ವಕಪ್ ಮಧ್ಯೆಯೇ ರಿಂಕು ಸಿಂಗ್‌ಗೆ ಈ ಆಘಾತ ಎದುರಾಗಿದೆ. ಹೀಗಾಗಿ ಅವರು ತಂಡವನ್ನು ತೊರೆದು ತವರಿಗೆ ವಾಪಸಾಗಿದ್ದಾರೆ. ಮುಂದಿನ ಪಂದ್ಯಗಳಿಗೆ ರಿಂಕು ಲಭ್ಯವಾಗುತ್ತಾರೆಯೇ ಎಂಬ ಬಗ್ಗೆ ಇನ್ನಷ್ಟೇ ಬಿಸಿಸಿಐ ಮಾಹಿತಿ ನೀಡಬೇಕಿದೆ. ಟೀಂ ಇಂಡಿಯಾ ಯುವ ಬ್ಯಾಟರ್ ರಿಂಕು ಸಿಂಗ್ ತಂದೆ ಖಾನ್‌ಚಂದ್ ಸಿಂಗ್ ಶುಕ್ರವಾರ ನಿಧನರಾದರು. ನಾಲ್ಕನೇ ಹಂತದ ಲಿವರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ದೀರ್ಘಕಾಲದಿಂದ ಚಿಕಿತ್ಸೆ ಪಡೆಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಆರೋಗ್ಯ ಸ್ಥಿತಿ ಹದಗೆಟ್ಟಿದ್ದರಿಂದ ಗ್ರೇಟರ್ ನೋಯ್ಡಾದ ಯಥಾರ್ಥ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಅವರಿಗೆ ವೆಂಟಿಲೇಟರ್ ಅಳವಡಿಸಲಾಗಿತ್ತಲ್ಲದೆ, ಕಿಡ್ನಿ ಸಮಸ್ಯೆ ಹಿನ್ನೆಲೆಯಲ್ಲಿ ನಿರಂತರ ಡಯಾಲಿಸಿಸ್ ಮಾಡಲಾಗುತ್ತಿತ್ತು ಎಂದು ಕುಟುಂಬ ಮೂಲಗಳು ತಿಳಿಸಿವೆ. ರಿಂಕು ಸಿಂಗ್ ಅವರು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಟೀಂ ಇಂಡಿಯಾದ ಭಾಗವಾಗಿರುವಾಗಲೇ ಈ ದುಃಖಕರ ಘಟನೆ ಸಂಭವಿಸಿದೆ. ಕೆಲವು ದಿನಗಳ ಹಿಂದೆ ರಿಂಕು ಸಿಂಗ್ ತಂಡದಲ್ಲಿದ್ದಾಗಲೇ ತಂದೆಯ ಆರೋಗ್ಯ ಹದಗೆಟ್ಟ ಸುದ್ದಿ ತಲುಪಿತ್ತು.



ತಂಡ ತೊರೆದ ಪ್ರಮುಖ ಆಟಗಾರ

ಬಳಿಕ ಅವರು ತುರ್ತಾಗಿ ಮನೆಗೆ ತೆರಳಿ ಮತ್ತೆ ತಂಡಕ್ಕೆ ಮರಳಿದ್ದರು. ಇದೀಗ ತಂದೆಯ ನಿಧನದ ಸುದ್ದಿ ತಿಳಿದ ತಕ್ಷಣ ತಂಡವನ್ನು ತೊರೆದು ಸ್ವಗ್ರಾಮ ಅಲೀಗಢ್‌ಗೆ ಪ್ರಯಾಣ ಬೆಳೆಸಿದ್ದಾರೆ.

ಚೆನ್ನೈಯಲ್ಲಿ ನಡೆದ ಜಿಂಬಾಬ್ವೆ ವಿರುದ್ಧದ ಪ್ರಮುಖ ಪಂದ್ಯದಲ್ಲಿ ರಿಂಕು ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯಲಿಲ್ಲ. ತಂಡದ ಸಮತೋಲನದ ದೃಷ್ಟಿಯಿಂದ ಸಂಜು ಸ್ಯಾಮ್ಸನ್ ಮತ್ತು ಅಕ್ಷರ್ ಪಟೇಲ್ ಅವರಿಗೆ ಅವಕಾಶ ನೀಡಲಾಗಿತ್ತು. ಆದರೆ ರಿಂಕು ತಂಡದೊಂದಿಗೇ ಇದ್ದು, ಬದಲಿ ಆಟಗಾರನಾಗಿ ಫೀಲ್ಡಿಂಗ್ ಮಾಡಿದ್ದರು.

ಈ ಟೂರ್ನಿಯಲ್ಲಿ ರಿಂಕು ಐದು ಪಂದ್ಯಗಳಲ್ಲಿ ಆಡಿದ್ದು 24 ರನ್ ಗಳಿಸಿದ್ದಾರೆ. ಫಿನಿಷರ್ ಪಾತ್ರದಲ್ಲಿ ತಂಡಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮುಂದಿನ ಪಂದ್ಯಗಳಲ್ಲಿ ಅವರು ಲಭ್ಯರಾಗುವರೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

# ಸೀಕ್ರೇಟ್ ರಿವೀಲ್ ಮಾಡಿದ ತಿಲಕ್

ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಭಾರತ ಮೊದಲು ಬ್ಯಾಟಿಂಗ್ ಮಾಡಿತ್ತು. ಜಿಂಬಾಬ್ವೆ ವಿರುದ್ಧ ಭಾರತ ನಾಲ್ಕು ವಿಕೆಟ್‌ಗಳಿಗೆ 256 ರನ್ ಗಳಿಸಿತು. ನಂತರ, ಟೀಮ್ ಇಂಡಿಯಾ ಬೌಲರ್‌ಗಳ ದಾಳಿಗೆ ಜಿಂಬಾಬ್ವೆ ತಂಡ 20 ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ 184 ರನ್‌ಗಳಿಗೆ ಸೀಮಿತವಾಯಿತು. ಭಾರತ 72 ರನ್‌ಗಳಿಂದ ಗೆದ್ದು ಬೀಗಿತ್ತು. ಟೀಮ್ ಇಂಡಿಯಾ ಗೆಲುವಿನ ನಂತರ ತಿಲಕ್ ವರ್ಮಾ ಹಲವು ಅಚ್ಚರಿ ವಿಷಯಗಳನ್ನು ಹಂಚಿಕೊಂಡಿದ್ದಾರೆ. ನಮ್ಮ ಆಟಗಾರರು ಕಳೆದ ವರ್ಷದ ಟಿ20 ಪಂದ್ಯಗಳ ವಿಡಿಯೋಗಳನ್ನು ಪಂದ್ಯಕ್ಕೂ ಮುನ್ನ ವೀಕ್ಷಿಸಿದ್ದರು. ಈ ಮೂಲಕ ಮೂಲಕ ಟೀಮ್ ಇಂಡಿಯಾ ತನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಿತ್ತು ತಿಲಕ್ ವರ್ಮಾ ತಿಳಿಸಿದ್ದಾರೆ. ಪಂದ್ಯಕ್ಕೆ ಸ್ವಲ್ಪ ಮೊದಲು, ನಾವು ಸಕಾರಾತ್ಮಕ ಮನಸ್ಥಿತಿಯೊಂದಿಗೆ ಮೈದಾನಕ್ಕೆ ಪ್ರವೇಶಿಸುವ ಬಗ್ಗೆ ಚರ್ಚಿಸಿದ್ದೇವೆ. ಕಳೆದ ವರ್ಷದಲ್ಲಿ ಟಿ20 ಕ್ರಿಕೆಟ್‌ನಲ್ಲಿ ನಮ್ಮ ಪ್ರದರ್ಶನಗಳನ್ನು ನಾವು ನೋಡಿದ್ದೇವೆ. ಈ ವೀಡಿಯೊಗಳನ್ನು ನೋಡುವುದರಿಂದ ನಮ್ಮ ಆತ್ಮವಿಶ್ವಾಸ ಹೆಚ್ಚಾಯಿತು ಎಂದು ತಿಲಕ್ ವರ್ಮಾ ಹೇಳಿದ್ದಾರೆ. ಹಿಂದಿನ ಪಂದ್ಯಗಳ ವಿಡಿಯೋಗಳನ್ನು ನೋಡುವುದು ಮತ್ತು ಹೆಡ್ ಕೋಚ್ ಗೌತಮ್ ಗಂಭೀರ್ ಅವರ ಸ್ಫೂರ್ತಿದಾಯಕ ಮಾತುಗಳು ಬ್ಯಾಟರ್‌ಗಳ ಮನಸ್ಥಿತಿಯನ್ನು ಬದಲಾಯಿಸಲು ಸಹಾಯ ಮಾಡಿದೆ ಎಂದು ಮಾಹಿತಿ ನೀಡಿದ್ದಾರೆ.

ಆರಂಭದಲ್ಲಿ ವಿಕೆಟ್ ಕಳೆದುಕೊಂಡರೂ ತಂಡವು ಆಕ್ರಮಣಕಾರಿ ಧೋರಣೆಯನ್ನು ಮುಂದುವರಿಸುತ್ತದೆ ಎಂದು ತಿಲಕ್ ವರ್ಮಾ ಹೇಳಿದ್ದಾರೆ. ಏಕೆಂದರೆ ಇದು ಎದುರಾಳಿ ತಂಡದ ಬೌಲರ್‌ಗಳಲ್ಲಿ ಭಯವನ್ನು ಹುಟ್ಟುಹಾಕುತ್ತದೆ. ಟೀಮ್ ಇಂಡಿಯಾದ ಎಲ್ಲಾ ಬ್ಯಾಟರ್‌ಗಳು ಉಪಯುಕ್ತ ಇನ್ನಿಂಗ್ಸ್‌ಗಳನ್ನು ಆಡಿದರು. ತಂಡವು ಈ ರೀತಿ ಪ್ರದರ್ಶನ ನೀಡಲು ಬಯಸಿದೆ ಎಂದಿದ್ದಾರೆ.



ಸ್ಟ್ರಾಂಗ್ ಕಮ್‌ಬ್ಯಾಕ್ ಮಾಡಲು ಇದೇ ಕಾರಣ!

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966